
ಗೌರಿ ಲಂಕೇಶರ


ಲಂಕೇಶ್

ಮೇ 3, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಲಂಚದ ಹಣಕ್ಕಾಗಿ ಗುಂಡೇಟು



ಭ್ರಷ್ಟ ಪ್ರಮೋದ್! ದುಷ್ಟ ಪ್ರವೀಣ್!



ಮರ್ಡರ್ ರಾಜಕೀಯದ ಮಡುವಿನಲ್ಲಿ



'ಭೂಗಳ್ಳರಿಗೆ ಭೂದಾನ!'



ರೌಡಿ ಗೋವಿಂದ ಮತ್ತೆ ಪ್ರತ್ಯಕ್ಷ



ರಾಜ್ ಅಭಿಮಾನಿಗಳ ಕಲೆದಂಡ



ಡಿಕೆಶಿಗೆ ಗೌಡರ ಕಲ್ಲೇಟು!

ಮೀಸಲಾತಿ ಕೊಟ್ಟರೆ ಜಾತೀಯತೆ, ಕೊಡದಿದ್ದರೆ ಜಾತ್ಯತೀತತೆ!



"ಇದು ಈ ದೇಶದ ಉದ್ಯಮಿಗಳ ಹೊಸ ತರ್ಕ. ಇಂದು ಈ ದೇಶದಲ್ಲಿ ಸರ್ಕಾರವೆಂಬುದೇ ಹಂತಹಂತವಾಗಿ ಕಣ್ಮರೆಯಾಗುತ್ತಾ ಉದ್ಯೋಗಾವಕಾಶಗಳೆಲ್ಲಾ ಖಾಸಗಿ ಕ್ಷೇತ್ರದಲ್ಲೇ ಕೇಂದ್ರೀಕರಣಗೊಳ್ಳುತ್ತಿವೆ. ದೇಶದ ಸಂವಿಧಾನಾತ್ಮಕ ಆಶಯಗಳನ್ನು ಜಾರಿಗೆ ತರಬೇಕಾದ ಸರ್ಕಾರದ ಪ್ರವೃತ್ತಿಗಳು ಎಷ್ಟೇ ಕಿತಾಪತಿ ಮಾಡಿದರೂ ಅರೆ ಮನಸ್ಸಿನಿಂದಲಾದರೂ ಮೀಸಲಾತಿಯನ್ನು ಜಾರಿಗೆ ತರಲೇಬೇಕಿತ್ತು. ಇದರಿಂದಾಗಿ ಈ ದೇಶದ 23 ಕೋಟಿ ಜನಸಂಖ್ಯೆಯುಳ್ಳ ದಲಿತ ಸಮುದಾಯಕ್ಕೆ ದೊಡ್ಡ ರೀತಿಯಿಂದ ಪ್ರಯೋಜನವಾಗದಿದ್ದರೂ ಕನಿಷ್ಠ ಪಕ್ಷ 11 ಲಕ್ಷ ದಲಿತ ಕುಟುಂಬಗಳಾದರೂ (ಅಂದರೆ ಶೇ. 0.1ರಷ್ಟು) ಒಂದಷ್ಟು ಬೆಳಕನ್ನು ಕಂಡವು. ಸಮಾಜ ದಲಿತರ ಬಗ್ಗೆ ತೋರುತ್ತಿದ್ದ ತಾರತಮ್ಯವನ್ನು ಕಿಂಚಿತ್ತಾದರೂ ಹತ್ತಿಕ್ಕಿದ್ದ ಮೀಸಲಾತಿ ನೀತಿ ಇದಕ್ಕೆ ಪ್ರಧಾನ ಕಾರಣ. ಹಾಗೆ ನೋಡಿದರೆ ಮೀಸಲಾತಿ ಇಲ್ಲದಿದ್ದರೆ ಸರ್ಕಾರಿ ಕ್ಷೇತ್ರದಲ್ಲಿ ಕೂಡಾ ದಲಿತರಿಗೆ ಅವಕಾಶ ದೊರೆಯುತ್ತಿರಲಿಲ್ಲ, ಪ್ರತಿಭೆ ಇಲ್ಲ ಎನ್ನುವ ಕಾರಣಕ್ಕಲ್ಲ, ಆದರೆ ಮೇಲ್ಜಾತಿ ಮೇಲ್ವರ್ಗಕ್ಕೇ ಸೇರಿದ ಹಿತಾಸಕ್ತಿಗಳು ಬಿಡುತ್ತಿರಲಿಲ್ಲ ಎಂಬ ಕಾರಣಕ್ಕೆ!

ಇಡೀ ದೇಶದ ಸಂಪತ್ತನ್ನೆಲ್ಲಾ ಸೂರೆ ಹೊಡೆಯಲು ಈ ದೇಶದಲ್ಲಿ ನಾಗರಿಕತ್ವ ಬಯಸುವ ಖಾಸಗಿ ಉದ್ಯಮಿಗಳು, ಈಗ ಈ ದೇಶದ ಸಂವಿಧಾನ ವಿಧಿಸುವ ಜವಾಬ್ದಾರಿಯನ್ನು ಮಾತ್ರ ಒಲ್ಲೆ ಎನ್ನುತ್ತಿದ್ದಾರೆ. ಸರ್ಕಾರ ಎಲ್ಲಾ ಕ್ಷೇತ್ರಗಳಿಂದ ಹಿಂತೆಗೆಯುತ್ತಿರುವ ಈ ಹೊತ್ತಿನಲ್ಲಿ ಸಾಮಾಜಿಕ ನ್ಯಾಯದ ಭಾಗವಾಗಿ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಒದಗಿಸಬೇಕೆಂಬ ಸಮಾಜದ ಆಗ್ರಹವನ್ನು ಖಾಸಗಿ ಕ್ಷೇತ್ರ-ಅಧಿಕಾರ ಹಾಗೂ ಸಂಪತ್ತಿನ ದರ್ಪದಿಂದ-ತಿರಸ್ಕರಿಸುತ್ತದೆ. ಹಾಗೇನಾದರೂ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡಿದರೆ ಈವರೆಗೆ ಜಾತಿ ಸೋಂಕಿನಿಂದ ಹೊರಗಿದ್ದ ಖಾಸಗಿ ಕ್ಷೇತ್ರಕ್ಕೂ ಜಾತೀಯತೆಯ ಸೋಂಕು ಹತ್ತಿಬಿಡುತ್ತದೆಂದು ಈ ದೇಶದ ಬೃಹತ್ ಉದ್ಯಮಿಗಳ ಒಕ್ಕೂಟವಾದ CIIನ ಅಧ್ಯಕ್ಷ ಶೇಷಶಾಯಿ ಹೇಳಿದ್ದಾನೆ. ಬಂಡವಾಳಕ್ಕೆ, ತಂತ್ರಜ್ಞಾನಕ್ಕೆ, ಎಲ್ಲಕ್ಕೂ ಅಮೆರಿಕವನ್ನು ಅನುಕರಿಸುವ ಈ ಸ್ವಾರ್ಥಿ ಉದ್ಯಮಿಗಳು, ಆ ದೇಶದಲ್ಲಿ ಉದ್ಯಮಿಗಳು ಸಮಾಜದ ಎಲ್ಲಾ ಸ್ತರವನ್ನು ಕಡ್ಡಾಯವಾಗಿ ಒಳಗೊಳ್ಳಬೇಕೆಂಬ ಅಫರ್ಮೇಟಿವ್ ಶಾಸನವನ್ನು ಮಾತ್ರ ತಿರಸ್ಕರಿಸುತ್ತಾರೆ. 'ಇದರಿಂದ ಕಂಪನಿಗಳ ಸ್ಪರ್ಧಾತ್ಮಕತೆ ಹಾಳಾಗುತ್ತದೆ; ಲಾಭದಾಯಕತೆ ಕುಸಿಯುತ್ತದೆ' ಎಂದೆಲ್ಲಾ ರಾಗ ಎಳೆಯುತ್ತಾರೆ. ಈ ದೇಶದ ಜನರಿಗೆಲ್ಲಾ ಒಂದೇ ಸಂವಿಧಾನವಾದರೆ, ಉಧ್ಯಮಿಗಳಿಗೆ ಮಾತ್ರ ಅದು ಅನ್ವಯವಾಗುವುದಿಲ್ಲ ವೇಕೆ? ಸರ್ಕಾರದ ಮೌನವೇಕೆ?

ಚಾರ್ವಾಕ


- ಶಿವಸುಂದರ್-

ಸತ್ಯಾಗ್ರಹ ಮತ್ತು ಅಸತ್ಯಾಗ್ರಹ

ಸತ್ಯವನ್ನು ಆಗ್ರಹಿಸುವುದೇ ಸತ್ಯಾಗ್ರಹ ಎಂದರಂತೆ ಅಂದು ಗಾಂಧಿ. "ಸತ್ಯವನ್ನು ಆಗ್ರಹಿಸುವುದರಿಂದ ಒಂದು ನೈತಿಕ ಶಕ್ತಿ ಒದಗುತ್ತದೆ. ಅದರಿಂದ ಉಪವಾಸ ಮಾಡಲು ಆತ್ಮಸ್ಥೈರ್ಯ ಬರುತ್ತದೆ" ಎಂಬುದು ಗಾಂಧೀವಾದಿಗಳ ವಿವರಣೆಯಾಗಿತ್ತು, ಆದರೆ ಇವೆಲ್ಲವನ್ನು ಅಸತ್ಯವೇ ಮೂರ್ತಿವೆತ್ತಂತಿರುವ ಮೋದಿ ಸುಳ್ಳು ಮಾಡಿದ್ದಾನೆ.



ನರ್ಮದಾ ಅಣೆಕಟ್ಟನ್ನು ಎತ್ತರಿಸುವು ದರಿಂದ 35,000 ಕುಟುಂಬಗಳು ಬೀದಿ ಪಾಲಾಗುತ್ತವೆ. ಕನಿಷ್ಠ ಅವರಿಗೆ ಸೂಕ್ತ ಪುನರ್‌ವಸತಿ ಒದಗಿಸುವ ತನಕವಾದರೂ ಅಣೆಕಟ್ಟನ್ನು ಎತ್ತರಿಸಬಾರದೆಂಬ ಸತ್ಯದ ಹಾಗೂ ಸಾತ್ವಿಕ ಆಕ್ರೋಶದ ಶಕ್ತಿಯಿಂದ ಮೇಧಾ ಪಾಟ್ಕರ್ ಹಾಗೂ ಇನ್ನಿತರರು 19 ದಿನ ಉಪವಾಸ ಕೂತರು. ಅವರ ಆಗ್ರಹಕ್ಕೆ ಮಣಿದು ಸರ್ಕಾರ ಅಣೆಕಟ್ಟನ್ನು ಎತ್ತರಿಸುವ ಕಾಮಗಾರಿಯನ್ನು ಸ್ಥಗಿತಗೊಳಿಸುವ ಸೂಚನೆ ನೀಡುತ್ತಿದ್ದಂತೆ, ನಿರ್ವಸಿತರಿಗೆ ಎಲ್ಲಾ ಪುನರ್‌ವಸತಿ ಕಲ್ಪಿಸಲಾಗಿದೆ ಎಂಬ ಅಸತ್ಯವನ್ನಾಡುತ್ತಾ ಗುಜರಾತಿನ ಶ್ರೀಮಂತ ರೈತರ-ಕಂಟ್ರಾಕ್ಟರುಗಳ ಪರವಾಗಿ ಮೋದಿ 51 ಗಂಟೆಗಳ ಅಸತ್ಯಾಗ್ರಹ ಕೂತ. ಅದಕ್ಕೆ ಮಣಿದ ಸರ್ಕಾರ ತನ್ನ ಆದೇಶ ಹಿಂತೆಗೆದುಕೊಂಡಿತು. ಸುಪ್ರೀಂ ಕೋರ್ಟ್ ಆದೇಶ ನೀಡಿ ಪರೋಕ್ಷವಾಗಿ ಅಸತ್ಯಕ್ಕೇ ಜಯ ಸಿಗುವಂತೆ ಆದೇಶ ನೀಡಿತು.



ಪರಿಣಾಮವಾಗಿ ಮೋದಿ-ಮೇಧಾ ಇಬ್ಬರೂ ತಮ್ಮ ಆಗ್ರಹಗಳನ್ನು ಹಿಂತೆಗೆದುಕೊಂಡರು. ಅವರಿಬ್ಬರ ತರ್ಕವೇನೇ ಇದ್ದರೂ ನರ್ಮದಾದಿಂದ ನಿರ್ವಸಿತರಾಗುವ ಆದಿವಾಸಿಗಳ ಮಟ್ಟಿಗೆ ಈ ದೇಶದಲ್ಲಿ "ಅಸತ್ಯಮೇವ ಜಯತೇ"!!!

ಒಂದು ಸತ್ಯ:

ಭಾರತದಲ್ಲಿ ಕಾಡಿನ ಪ್ರಮಾಣ ಕಡಿಮೆಯಾಗುತ್ತಿರುವುದರ ಬಗ್ಗೆ ಭಾರತದ ಕೈಗಾರಿಕೋದ್ಯಮಿಗಳಿಗೆ ಇದ್ದಕ್ಕಿದ್ದಂತೆ ಕಾಳಜಿ ಹೆಚ್ಚಾಗಿದೆ. ಭಾರತದಲ್ಲಿ ಕಾಡಿನ ಪ್ರಮಾಣ ಶೇ. 22ರಷ್ಟಿದ್ದು ಅದನ್ನು 2012ರ ವೇಳೆಗೆ ಶೇ. 33ಕ್ಕೆ ಹೆಚ್ಚಿಸಬೇಕೆಂಬುದು ರಾಷ್ಟ್ರೀಯ ಗುರಿಯಂತೆ. ಅದಾಗಬೇಕೆಂದರೆ ಒಣ ಮತ್ತು ವೇಸ್ಟ್ ಎಂದು ಸರ್ಕಾರ ವರ್ಗೀಕರಿಸುವ ಜಮೀನುಗಳ ಮೇಲೆ ಹಸಿರು ಹೊದಿಸಬೇಕು. ಅಷ್ಟೊಂದನ್ನು ಮಾಡಲು ಬೇಕಾದ ಲಕ್ಷಾಂತರ ಕೋಟಿ ಹಣ ಸರ್ಕಾರದ ಬಳಿ ಇಲ್ಲ. ಆದ್ದರಿಂದ ಖಾಸಗಿ ಕಂಪನಿಗಳು "ನಾವು ಕಾಡು ಕಟ್ಟಿಕೊಡುತ್ತೇವೆ" ಎಂದು ಮುಂದೆ ಬಂದಿದ್ದಾರೆ. ಆದರೆ ಅದಕ್ಕಾಗಿ ಕಾಡುಗಳಿರುವ ಇಡೀ ಭೂಮಿಯನ್ನೇ ಅವರಿಗೆ ಬಿಟ್ಟುಕೊಡಬೇಕಂತೆ.



ಕಾಡಿನ ಪ್ರಮಾಣವನ್ನು ಮುಂದೆ ಶೇ. 33ಕ್ಕೆ ಹೆಚ್ಚಿಸುವುದಿರಲಿ, ಇರುವ ಶೇ. 22ರಷ್ಟು ಕಾಡಿನ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿರುವ ಕಾರಣವೇ ಈ ಉದ್ಯಮಿಗಳು. ಹಾಗಿರುವಾಗ ಇದೇ ಉದ್ಯಮಿಗಳಿಗೆ ಕಾಡಿನ ಬಗ್ಗೆ ಆಸಕ್ತಿ ಬರಲು ಕಾರಣ ವೇನು?

ಸತ್ಯವೇನೆಂದರೆ ಈ ಯೋಜನೆ ಹಿಂದಿರುವ ಖಾಸಗಿ ಕಂಪನಿಗಳಿಗೆ ಕಚ್ಚಾವಸ್ತುವಾಗಿ ಮರಮುಟ್ಟು ಬೇಕು. ಅದನ್ನು ರೈತರಿಂದ-ಆದಿವಾಸಿಗಳಿಂದ, ಸರ್ಕಾರದಿಂದ ಕೊಂಡರೆ ಟನ್ನಿಗೆ 2500ರೂ. ಅದೇ ತನ್ನದೇ ಸ್ವಂತ ಕ್ಯಾಪ್ಟಿವ್ ಕಾಡಿದ್ದರೆ ಟನ್ನಿಗೆ ಕೇವಲ 1000ರೂ. ತಗಲುತ್ತದೆ.

ಇದೇ ಉದ್ಯಮಿಗಳ ಕಾಡು ಕರುಣೆಯ ಹಿಂದಿನ ಲಾಭಕೋರತನದ ಸತ್ಯ!

ಒಂದು ಪ್ರಶ್ನೆ:

ಇನ್ನೇನು ಹೊಸ ಅಕಾಡೆಮಿಕ್ ವರ್ಷ ಪ್ರಾರಂಭವಾಗುವ ಸಮಯ. ಎಲ್ಲೆಂದರಲ್ಲಿ ಹೊಸ ಶಾಲೆಗಳು, ಹೊಸ ಕಾಲೇಜುಗಳು ಅಡ್ಮಿಷನ್ ಓಪನ್ ಮಾಡಿ ಗಿರಾಕಿಗಳಿಗೆ ಗಾಳ ಹಾಕಲು ಪ್ರಾರಂಭಿಸುತ್ತಿವೆ. ಬೆಂಗಳೂರು ಮಹಾನಗರದಲ್ಲಿನ ಪ್ರತಿಷ್ಠಿತ ಶಾಲೆಗಳಲ್ಲಿ LKG, UKG,1ನೇ ತರಗತಿಯ ಅಡ್ಮಿಷನ್ನಿಗೆ 20,000-1,00,000ರೂ. ಡೊನೇಷನ್ ಕೇಳಲಾಗುತ್ತಿದೆ. ಬಡಾವಣೆಗಳಲ್ಲೂ ಆಕ್ಸ್‌ಫರ್ಡ್, ಹಾರ್ವರ್ಡ್ ಹೆಸರಿಟ್ಟುಕೊಂಡಿರುವ ಕೊಟ್ಟಿಗೆಯಂತಾ ಶಾಲೆಗಳೂ ಸಾವಿರಗಟ್ಟಲೆ ಡೊನೇಷನ್ ವಸೂಲಿ ಮಾಡುತ್ತಿವೆ.

ಅವೆಲ್ಲಾ ಇರಲಿ ಈಗಿನ ಪ್ರಶ್ನೆಯೆಂದರೆ, ಕರ್ನಾಟಕದಲ್ಲಿ ಡೊನೇಷನ್ ವಿರೋಧ ಕಾಯಿದೆಯಿದೆಯಂತಲ್ಲಾ?

ಅದೆಲ್ಲಿ ಹೋಯಿತು?



No Comments




ಪುನರ್‌ವಸತಿ ಬಗ್ಗೆ ಕೇಂದ್ರ ಸರ್ಕಾರ ಬರೀ ಬಾಯಿ ಪ್ರಚಾರದ ಮಾತುಗಳನ್ನಾಡುತ್ತಿದೆ. ಒಟ್ಟಿನಲ್ಲಿ ನಾವೀಗ ಕ್ರೌರ್ಯದ ಹೊಸ ಯುಗದಲ್ಲಿದ್ದೇವೆ. ದೇಶದ ಯಾವ ಬೃಹತ್ ಯೋಜನೆಗಳ ವಿಚಾರದಲ್ಲೂ ಮನೆ-ಮಠ ಕಳೆದುಕೊಂಡು ಬೀದಿಪಾಲಾಗುವ ನತದೃಷ್ಟರ ಬಗ್ಗೆ ಯೋಚಿಸುತ್ತಿಲ್ಲ, ಸುಪ್ರೀಂ ಕೋರ್ಟೇ ಅಣೆಕಟ್ಟು ಕಾಮಗಾರಿ ನಡೆಯಲಿ ಎಂದ ಮೇಲೆ ಇನ್ನೇನು ಉಳಿದಿದೆ?

ಜನರೇಕೆ ಛತ್ತೀಸ್‌ಗಡ, ಒರಿಸ್ಸಾ ಮತ್ತು ಜಾರ್ಖಂಡ್‌ಗಳಲ್ಲಿ ಶಸ್ತ್ರಧಾರಿಗಳಾಗಿ ಬೀದಿಗಿಳಿದಿದ್ದಾರೆಂಬುದು ದೇಶದ ಬಡವರಿಗೆಲ್ಲಾ ಗೊತ್ತಾಗಿದೆ. ಎಲ್ಲವೂ ಕೈ ಮೀರಿ ಹೋಗುತ್ತಿದೆ. ಇದನ್ನೆಲ್ಲಾ ದೇಶದ ಜನ ಬೀದಿಗಿಳಿದು ಪ್ರಶ್ನಿಸುವುದಂತೂ ದಿಟ.

-ಅರುಂಧತಿ ರಾಯ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



ನೈಸ್ ಕಂಪನಿಯ BMIC ಯೋಜನೆ ರಾಜ್ಯದ ಒಟ್ಟಾರೆ ಅಭಿವೃದ್ಧಿಗೆ ಪೂರಕ ಎಂಬುದರ ಬಗ್ಗೆ ಸುಪ್ರೀಂಕೋರ್ಟಿಗೆ ಸಮ್ಮತಿ ಇದೆ.

-ಸುಪ್ರೀಂಕೋರ್ಟ್

ದೇಶೀ ಗೋತಳಿಯನ್ನು ಅಭಿವೃದ್ಧಿ ಮಾಡಿದರೆ ದೇಶದ ಅರ್ಥ ವ್ಯವಸ್ಥೆಗೆ ಬಲ ಬರುತ್ತದೆ.

-ರಾಜ್ಯಪಾಲ ಟಿ.ಎನ್. ಚತುರ್ವೇದಿ.

ಪೋಲೀಸರು ಲೈಸೆನ್ಸ್ ಇರುವ ಗೂಂಡಾಗಳು. ಮನೆಯಲ್ಲಿ ಕತ್ತಿಗಳಿವೆ ಎಂದು ನಮ್ಮನ್ನೂ ಅರೆಸ್ಟ್ ಮಾಡುವ ನಿಪುಣರು.

-ಆಂಧ್ರ ಹೈಕೋರ್ಟ್

ಪೋಲೀಸರೆಂದರೆ ಎಲ್ಲರಿಗೂ ಗೊತ್ತು; ನಿಜವಾದ ಅಪರಾಧಿಗಳು ಅವರೆ.

-ಆಂಧ್ರ ಹೈಕೋರ್ಟ್

'ಮಗುವು ಮಾನವನಾಗಿ, ನಾಗರಿಕನಾಗಿ ಎಲ್ಲರೊಡನೆ ಸ್ನೇಹ, ಗೌರವ, ಘನತೆಗಳಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ' ಎಂದು ಡಾ. ರಾಧಾಕೃಷ್ಣನ್ ಹೇಳಿದ್ದರು. ಅವರಂತೆ ಶಿಕ್ಷಣ ಕುರಿತು ಹಲವಾರು ಮೇಧಾವಿಗಳು ಮಾತನಾಡಿದ್ದಾರೆ. ಅವುಗಳಲ್ಲಿ ಹಲವನ್ನು ಆಯ್ಕೆ ಮಾಡಿ ನಮ್ಮ ರಾಯಚೂರಿನ ವರದಿಗಾರ ಮತ್ತು ಸೂಕ್ಷ್ಮ ಮನಸ್ಸಿನ ಹುಡುಗ ಅಶೋಕ್ ನೀಮಕರ್ ಈ ವಾರದ ಸೂಕ್ತಿಗಳನ್ನಾಗಿ ಕಳುಹಿಸಿದ್ದಾರೆ.

-ಗೌರು


ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ -ವಿಲಿಯಂ ಕಿಲ್ ಪ್ಯಾಟ್ರಿಕ್

ಬದುಕಿನ ಭರವಸೆ ಕಳೆದುಕೊಂಡ ರೈತನ ಮಾತು

ಈ ವಾರ ಅಹಿಂಸಾತ್ಮಕ ಮತ್ತು ಪ್ರಜಾಸತ್ತಾತ್ಮಕ ಹೋರಾಟ ನಡೆಸುತ್ತಿರುವ ಮೇಧಾ ಪಾಟ್ಕರ್‌ರವರನ್ನು ಸರ್ಕಾರ ಹೇಗೆ ವಂಚಿಸಿತು ಎಂಬುದರ ಬಗ್ಗೆ ಬರೆಯಬೇಕೆಂದಿದ್ದೆ.... ನೇಪಾಳದಲ್ಲಿ ದುಷ್ಟ ಸರ್ವಾಧಿಕಾರಿ ರಾಜ ಗ್ಯಾನೇಂದ್ರನ ವಿರುದ್ಧ ಜನಸಾಮಾನ್ಯರು ಗೆಲುವು ಸಾಧಿಸುತ್ತಿರುವುದರ ಬಗ್ಗೆ ಬರೆಯಬೇಕೆಂದಿದ್ದೆ... ಆದರೆ ಮೇಧಾ ಪಾಟ್ಕರ್‌ಗಿಂತಲೂ, ನೇಪಾಳದಲ್ಲಿನ ಪ್ರಜಾಪ್ರಭುತ್ವವಾದಿ ಹೋರಾಟಗಾರರಿಗಿಂತಲೂ ನನ್ನ ಮನಸ್ಸನ್ನು ತಾಕಿದ್ದು ಲಕ್ಷ್ಮಣ ರೆಡ್ಡಿ ಎಂಬ ಚಿತ್ರದುರ್ಗದ ರೈತರೊಬ್ಬರ ಕತೆ.

ಕಳೆದ ಬುಧವಾರ ನಮ್ಮ ಮಾಸಿಕ 'ಗ್ರೀಡ್' ಅನ್ನು ಮುದ್ರಣಕ್ಕೆ ಕಳುಹಿಸುವ ಒತ್ತಡದಲ್ಲಿದ್ದರೂ, ನಮ್ಮ ಆಫೀಸಿಗೆ ಬಂದಿದ್ದ ಈ ಅಪರಿಚಿತ ರೈತರನ್ನು ಒಂದೆರಡು ನಿಮಿಷ ಮಾತನಾಡಿಸುವುದಾಗಿ ನಿರ್ಧರಿಸಿದೆ. ನನ್ನ ಸಮಯದ ಅಭಾವ ಅವರಿಗೂ ಅರ್ಥವಾಗಿತ್ತು. ನನ್ನ ಮುಂದೆ ಕೂತವರೇ ನೇರವಾಗಿ ಮಾತಿಗಿಳಿದರು.

"ನಾನು ಲಂಕೇಶ್‌ರವರ ಅಭಿಮಾನಿ. ಅವರ ಪತ್ರಿಕೆಯನ್ನು ಓದುತ್ತಲೇ ಒಂದಿಷ್ಟು ವೈಚಾರಿಕತೆ, ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಂಡವನು. ಆದರೆ ಈಗ ತುಂಬಾ ಕಷ್ಟದಲ್ಲಿದ್ದೇನೆ. ನನ್ನ ಹೊಲದಲ್ಲಿದ್ದ ಬಾವಿ ಬತ್ತಿ ಹೋಗಿದೆ. ಒಂದು ಹನಿ ನೀರಿಲ್ಲದೆ ನನ್ನ ಹೊಲ ಪಾಳುಬಿದ್ದಿದೆ. ಹಿಂದೊಮ್ಮೆ ಅನುಕೂಲಸ್ಥನಾಗಿದ್ದ ನಾನೇ ಈಗ ಕೂಲಿಗೆ ಹೋಗುತ್ತೇನೆ. ನನಗೆ ಬರುವ ದುಡ್ಡಿಂದ ಊಟ ಮಾಡುತ್ತೇವೆ. ನನ್ನ ಹೆಂಡತಿ ಒಂದು ಎಮ್ಮೆ ಸಾಕಿದ್ದಾಳೆ. ಅದು ಕೊಡುವ ಹಾಲಿನಿಂದ ದಿನಕ್ಕೆ ಐದು ರೂಪಾಯಿ ಸಿಗುತ್ತೆ. ನಿಮ್ಮ ಪತ್ರಿಕೆಯ ಬೆಲೆ ಹತ್ತು ರೂಪಾಯಿ. ನಾನು ನಿಮ್ಮ ಪತ್ರಿಕೆ ಕೊಂಡುಕೊಳ್ಳುವುದಕ್ಕೆ ನಮ್ಮ ಎಮ್ಮೆ ನೀಡುವ ಎರಡು ದಿನದ ಹಾಲಿನ ದುಡ್ಡನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ನಾನು ಪ್ರತಿ ವಾರ ನಿಮ್ಮ ಪತ್ರಿಕೆ ಓದುತ್ತೇನೆ ಎಂದು ಸುಳ್ಳು ಹೇಳುವುದಿಲ್ಲ. ನನ್ನ ಹೆಂಡತಿಯ ಗೊಣಗಾಟದ ಮಧ್ಯೆಯೂ ಸಾಧ್ಯವಾದಾಗ ನಿಮ್ಮ ಪತ್ರಿಕೆ ಕೊಂಡು ಓದುತ್ತೇನೆ" ಎಂದು ರೆಡ್ಡಿ ಹೇಳಿದಾಗ ನಾನು ದಂಗಾದೆ. ಏಕೆಂದರೆ ಇದು ಪತ್ರಿಕೆ ಬಗೆಗಿನ ಅಭಿಮಾನ ಮಾತ್ರವಾಗಿರದೇ, ತಮ್ಮ ಎಲ್ಲ ಕಷ್ಟಗಳ ನಡುವೆಯೂ ಪತ್ರಿಕೆ ಅವರಿಗೆ ಅಗತ್ಯವಾಗಿರುವುದನ್ನು ನೋಡಿ ಏನು ಹೇಳಬೇಕೆಂದೇ ತೋಚಲಿಲ್ಲ.



ರೆಡ್ಡಿ ತಮ್ಮ ಮಾತು ಮುಂದುವರಿಸುತ್ತಾ ಬೆಂಗಳೂರಿಗೆ ಬಂದಿದ್ದರ ಬಗ್ಗೆ ಹೇಳಿದರು. "ನನ್ನ ಮಗನನ್ನು ಇಲ್ಲಿ ಕೆಲಸಕ್ಕೆ ಬಿಟ್ಟಿದ್ದೇನೆ. ಅವನು ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ತಿಂಗಳಿಗೆ 2500 ರೂಪಾಯಿ ಸಂಬಳ. ಬೆಂಗಳೂರಿನಲ್ಲಿ ಅದು ಅವನಿಗೇ ಸಾಕಾಗುವುದಿಲ್ಲ. ಅವನು ನಮಗೆ ಹಣ ಕಳುಹಿಸದಿದ್ದರೂ ಮನೆಯಲ್ಲಿ ಒಂದು ಬಾಯಿ ಕಡಿಮೆ ಎಂಬುದಷ್ಟೇ ನೆಮ್ಮದಿ. ಮೊನ್ನೆ ರಾಜ್‌ಕುಮಾರ್ ನಿಧನರಾದ ಸುದ್ದಿ ಕೇಳಿ ನನ್ನ ಮಗ ತನ್ನ ಸ್ನೇಹಿತರೊಂದಿಗೆ ಅವರ ಸದಾಶಿವನಗರದ ಮನೆಗೆ ಹೋಗಿದ್ದನಂತೆ. ಪೋಲೀಸರು ಅವರನ್ನೆಲ್ಲ ಬಂಧಿಸಿ ಜೈಲಿಗೆ ಹಾಕಿದ್ದಾರೆ. ಅವನನ್ನು ನೋಡಲು ಊರಿನಲ್ಲಿ ಸಾಲ ಮಾಡಿ ಬಂದಿದ್ದೇನೆ. ನನ್ನ ಮಗನಿಗೆ ಯಾಕೆ ಬೇಕಿತ್ತು ಈ ರಗಳೆ? ಅವನನ್ನು ಯಾವಾಗ ಬಿಡುಗಡೆ ಮಾಡುತ್ತಾರೋ ಗೊತ್ತಿಲ್ಲ. ಅವನಿಗೆ ಬೇಲ್ ಕೊಡಿಸುವುದಕ್ಕೆ, ಮತ್ತೆ ಬೆಂಗಳೂರಿಗೆ ಬರುವುದಕ್ಕೆ ನನ್ನಲ್ಲಿ ಹಣ ಇಲ್ಲ. ಅವನು ಏನು ಬೇಕಾದರೂ ಮಾಡಿಕೊಳ್ಳಲಿ. ನಾನು ಊರಿಗೆ ಹೋಗುತ್ತೇನೆ" ಎಂದು ಅವರು ಹೇಳಿದಾಗ ಅವರ ಮುಖದಲ್ಲಿ ಮಗನ ಬಗೆಗಿನ ಪ್ರೀತಿ, ನೋವು, ಅಸಹಾಯಕತೆ ಎಲ್ಲವೂ ವ್ಯಕ್ತವಾಗುತ್ತಿತ್ತು.

ಅದೇ ಹೊತ್ತಿಗೆ ನಮ್ಮ ಲಾಯರ್ ಮಿತ್ರರೊಬ್ಬರು ಆಫೀಸಿಗೆ ಬಂದರು. ಕೂಡಲೇ ಅವರು ಸದಾಶಿವ

ಕಂಡಹಾಗೆ



ನಗರದ ಪೋಲೀಸ್ ಠಾಣೆಗೆ ಫೋನ್ ಮಾಡಿ ರೆಡ್ಡಿಯವರ ಮಗನ ಬಗೆಗಿನ ವಿವರ ಪಡೆಯಲು ಹೋದರು. ಆದರೆ ರೆಡ್ಡಿಯವರು ನಮ್ಮಿಂದ ಯಾವುದೇ ಸಹಾಯ ಪಡೆಯಲು ಬಂದಿರಲಿಲ್ಲ. ಬದಲಾಗಿ ಪತ್ರಿಕೆಯ ಆಫೀಸಿಗೆ ಬಂದು ಒಂದಿಷ್ಟು ಸಮಯ ಕಳೆದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿ ನೆಮ್ಮದಿ ಪಡೆಯಲು ಬಂದಿದ್ದರು. ಹಾಗೆ ಬಂದವರಿಗೆ ನಮ್ಮ ಆಫೀಸು ಎಲ್ಲಿದೆ ಎಂದು ಫೋನ್ ಮಾಡಿ ತಿಳಿಯಲೂ ದುಡ್ಡಿರಲಿಲ್ಲವಾದ್ದರಿಂದ ಪರಪ್ಪನ ಅಗ್ರಹಾರದಿಂದ ಗಾಂಧಿ ಬಜಾರಿಗೆ ನಡೆದುಕೊಂಡು ಬಂದು ನಮ್ಮ ಆಫೀಸನ್ನು ತಲುಪಿದ್ದರು!

"ಇವತ್ತು ನಮ್ಮ ಸರ್ಕಾರಕ್ಕೆ ರೈತರೇ ಬೇಡವಾಗಿದ್ದಾರೆ. ಅವರಿಂದ ನಮಗೆ ಒಂದಿಷ್ಟೂ ಉಪಯೋಗವಾಗುತ್ತಿಲ್ಲ. ನೀರನ್ನು ಉಣ್ಣಿಸಿ, ನೀರನ್ನು ಕುಡಿಯುವುದಷ್ಟೇ ನಮಗೆ ಗೊತ್ತಿರುವುದು. ಆದರೆ ಈ ಸರ್ಕಾರಗಳ ಆರ್ಥಿಕ ನೀತಿ ನಮನ್ನೆಲ್ಲ ವಿಷ ಕುಡಿಯುವಂತೆ ಮಾಡುತ್ತಿದೆ. ಮುಂದಿನ ವರ್ಷದವರೆಗೆ ನಾನು ಬದುಕಿರುತ್ತೇನೆ ಎಂಬ ಭರವಸೆಯೇ ನನಗಿಲ್ಲ. ನಾನೂ ವಿಷ ಕುಡಿದು ಸಾಯಬಹುದು. ನಮ್ಮನ್ನು ಹೀಗೆ ಅತಂತ್ರರನ್ನಾಗಿಸುವ ಬದಲಾಗಿ ಸರ್ಕಾರ ನಮ್ಮನ್ನೆಲ್ಲ ಗುಂಡಿಟ್ಟು ಸಾಯಿಸಬಾರದೇಕೆ" ಎಂದು ರೆಡ್ಡಿಯವರು ಹೇಳಿದಾಗ ಅವರ ಕಣ್ಣಲ್ಲಿ ನೀರು ಬತ್ತಿಹೋಗಿದ್ದರೂ ನನ್ನ ಕಣ್ಣಾಲಿಗಳು ತುಂಬಿಕೊಂಡವು.

ಅವರ ಪ್ರಶ್ನೆಗಳಿಗೆ ಉತ್ತರಗಳು ನನ್ನಲ್ಲಿರಲಿಲ್ಲ. ಏನು ಹೇಳಬೇಕು ಎಂದೂ ತೋಚಲಿಲ್ಲ. "ಏನೋ ನಿಮ್ಮ ಆಫೀಸಿಗೆ ಬರಬೇಕು, ಮಾತನಾಡಿಸಬೇಕು ಅನ್ನಿಸಿತು. ಅದಕ್ಕೆ ಬಂದೆ. ನಾನು ಬರುತ್ತೇನೆ" ಎಂದು ಹೇಳಿ ರೆಡ್ಡಿ ಹೊರಟು ಹೋದರು.

ಇವತ್ತು ಮೇಧಾ ಪಾಟ್ಕರ್, ರೆಡ್ಡಿಯಂತಹ ಸಾವಿರಾರು ದನಿ ಇಲ್ಲದವರ ಪರವಾಗಿ ಹೋರಾಡುತ್ತಿದ್ದರೆ ನಮ್ಮ ಸರ್ಕಾರ ಅವರ ಮೇಲೇ ಲಾಟಿ ಚಾರ್ಜ್ ಮಾಡುತ್ತದೆ, ಹಲವಾರು ದೂರುಗಳನ್ನು ದಾಖಲಿಸುತ್ತದೆ... ಆದರೆ ಭಾರತಕ್ಕಿಂತಲೂ ಹಿಂದುಳಿದಿರುವ, ಬಡತನ-ಅನಕ್ಷರತೆ ತಾಂಡವವಾಡುತ್ತಿರುವ ಪಕ್ಕದ ನೇಪಾಳದಲ್ಲಿ ರೆಡ್ಡಿಯಂತಹ ಸಾವಿರಾರು ರೈತರು, ಜನಸಾಮಾನ್ಯರು ತಮ್ಮನ್ನಾಳುತ್ತಿರುವ ರಾಜ ಮತ್ತು ಪಟ್ಟಭದ್ರರ ವಿರುದ್ಧ ಬೀದಿಗಿಳಿದು ಹೋರಾಡುತ್ತಾರೆ. ಸೈನಿಕರ ಗುಂಡುಗಳಿಗೂ ಹೆದರದೆ, ಪೋಲೀಸರ ಲಾಠಿ ಚಾರ್ಜಿಗೂ ಬೆದರದೆ ತಮ್ಮ ಹಕ್ಕುಗಳಿಗಾಗಿ, ಬದುಕಬೇಕು ಎಂಬ ಆಶಯಕ್ಕಾಗಿ ಜೀವನದ ಹಂಗನ್ನೂ ತೊರೆದು ಗಟ್ಟಿಯಾಗಿ ನಿಂತಿದ್ದಾರೆ. ಪುಟ್ಟ ನೇಪಾಳದಲ್ಲಿ ಸಾಧ್ಯವಾಗಿರುವ ಜನಪರ ಚಳವಳಿ ನಮ್ಮ ದೊಡ್ಡ ದೇಶದಲ್ಲಿ ಯಾಕೆ ಸಾಧ್ಯವಾಗಿಲ್ಲ?

ಅಂದಹಾಗೆ, ನೇಪಾಳ ಮತ್ತು ಭಾರತದ ನಡುವೆ ಒಂದು ಸಣ್ಣ ವ್ಯತ್ಯಾಸವನ್ನು ಹೇಳಬೇಕಿದೆ. ನಮ್ಮ ಈ ದೇಶದಲ್ಲಿ ಇರುವುದು ಪ್ರಜಾಪ್ರಭುತ್ವವಾದರೂ ಇಲ್ಲಿ ಪ್ರಜೆಗಳು ಒಂದೆಡೆ, ಪ್ರಭುತ್ವ ಇನ್ನೊಂದೆಡೆ ಇದೆ. ಈ 'ಪ್ರಜೆ' ಎಂಬ ಪದವನ್ನೇ ನೋಡಿ. ಇದರಲ್ಲಿ 'ಆಳಿಸಿಕೊಳ್ಳುತ್ತಿರುವವನು' ಎಂಬ ಅರ್ಥ ಅಡಕವಾಗಿದೆ. ಆದ್ದರಿಂದಲೇ ಇವತ್ತು ನೇಪಾಳದ ಜನ ಈ ಪದವೇ ಬೇಡ ಎಂದು ಹೇಳಿ 'ಲೋಕತಂತ್ರ' ಅಥವಾ 'ಗಣತಂತ್ರ' ಬೇಕೆಂದು ಹೇಳುತ್ತಿದ್ದಾರೆ.

ನಮ್ಮ ದೇಶದಲ್ಲೂ ಬದುಕಿನ ಆಸೆಯನ್ನೇ ಕಳೆದುಕೊಂಡು ಸಾವಿಗಾಗಿ ಕಾಯುತ್ತಿರುವ ರೆಡ್ಡಿಯಂತಹ ಜನರೂ ಈ ನಾಡಿನ 'ಗಣತಂತ್ರ'ದ ಅಂಗ ಆಗುವುದು ಯಾವಾಗ?

-ಗೌರಿ ಲಂಕೇಶ್

ಸ್ತ್ರೀಯರ ಎರಡು ಮುಖ

ಅವಳ ಹೆಸರು ಕಾಮಿನಿ. ಮೇಲುವರ್ಗದ ಆಕೆಗೆ ಮದುವೆ ಆಗಿ ನಾಲ್ಕು ತಿಂಗಳಾಗಿತ್ತಷ್ಟೇ. ಆ ನಾಲ್ಕು ತಿಂಗಳಲ್ಲಿ ಆಕೆ ಗಂಡನ ಮನೆಯಲ್ಲಿ ಇದ್ದದ್ದು ಒಂದು ತಿಂಗಳು ಮಾತ್ರ. ಆದರೆ ಆಗಲೇ ನಮ್ಮ ಆಫೀಸಿಗೆ ಬಂದು ತನಗೆ ವಿಚ್ಛೇದನೆ ಬೇಕೆಂದು ಹೇಳುತ್ತಿದ್ದಳು. ಯಾವುದೋ ಕಾರಣಕ್ಕೆ ಈ ಮದುವೆ ಸರಿ ಬರದೆ ಅದರಿಂದ ಬಿಡುಗಡೆ ಪಡೆಯಬೇಕು ಎಂದು ಕಾಮಿನಿ ಆಶಿಸುತ್ತಿದ್ದರಲ್ಲಿ ತಪ್ಪೇನಿರಲಿಲ್ಲ. ಆದರೆ ವರದಕ್ಷಿಣೆ ಕಾಯ್ದೆಯ ಬಗ್ಗೆ ಚೆನ್ನಾಗಿ ಅರಿತಿದ್ದ ಕಾಮಿನಿ ಗಂಡನ ಮನೆಯವರ ಬಗ್ಗೆ ದೂರುಗಳ ಪಟ್ಟಿಯನ್ನೇ ಇಟ್ಟಳು. ಅಷ್ಟೇ ಅಲ್ಲ, ತನ್ನ ಗಂಡನ ತಂದೆ-ಅಂದರೆ ಮಾವ - ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದರು ಎಂದೆಲ್ಲ ಹೇಳುತ್ತಿದ್ದಳು. ಕಾಮಿನಿಯೊಂದಿಗೆ ಬಂದಿದ್ದ ಸಹೋದರ "ಅವರು ಸುಮ್ಮನೆ ವಿಚ್ಛೇದನೆ ಕೊಡದಿದ್ದರೆ ಅವರ ಮಾನ, ಮರ್ಯಾದೆಯನ್ನು ಬೀದಿಪಾಲು ಮಾಡಬೇಕು. ನಮಗೆ ಹತ್ತು ಲಕ್ಷ ರೂಪಾಯಿ ಕೊಟ್ಟರೆ ಮಾತ್ರ ಸುಮ್ಮನಾಗುತ್ತೇವೆ" ಎಂದು ಹೂಂಕರಿಸುತ್ತಿದ್ದ. ಕಾಮಿನಿ ಮತ್ತು ಸಹೋದರನಲ್ಲಿ ದುರಾಸೆ ತುಂಬಿ ತುಳುಕುತ್ತಿತ್ತು.



ಕಾಮಿನಿಯ ಕತೆ ಕೇಳುತ್ತಿದ್ದಂತೆಯೇ ನನ್ನ ಶಾಲಾ ಗೆಳತಿ ಚಂದ್ರಕಲಾ ನೆನಪಾದಳು. ನನ್ನ ಮುಂದೆ ಕೂತಿದ್ದ ಕಾಮಿನಿ ಕಲ್ಪಿಸಿಕೊಂಡು ಹೇಳುತ್ತಿದ್ದ ದೂರುಗಳು ನನ್ನ ಗೆಳತಿ ಚಂದ್ರಕಲಾಳ ಜೀವನದಲ್ಲಿ ಘೋರ ಸತ್ಯವಾಗಿತ್ತು.

ಬಡ ಕುಟುಂಬದಿಂದ ಬಂದಿದ್ದ ಚಂದ್ರಕಲಾಳನ್ನು ಭಾರತ ಸೈನ್ಯದಲ್ಲಿದ್ದ ಸಿಪಾಯಿಯೊಬ್ಬನಿಗೆ ಕೊಟ್ಟು ಮದುವೆ ಮಾಡಿದ್ದರು. ಚಂದ್ರಕಲಾಳ ಗಂಡ ತನ್ನ ಇಬ್ಬರು ಅಣ್ಣಂದಿರು ಮತ್ತವರ ಹೆಂಡತಿ, ಮಕ್ಕಳೊಂದಿಗೆ ಮುಂಬೈಯಲ್ಲಿ ಮನೆ ಮಾಡಿದ್ದ. ಹೇಗಿದ್ದರೂ ಸಿಪಾಯಿ ಗಂಡನನ್ನು ತಿಂಗಳಾನುಗಟ್ಟಲೇ ಗಡಿ ಪ್ರದೇಶಗಳಿಗೆ ಕಳುಹಿಸುತ್ತಿದ್ದರಿಂದ ಚಂದ್ರಕಲಾ ಕೂಡ ಆತನ ಅಣ್ಣಂದಿರ ಮನೆಯಲ್ಲೇ ವಾಸಿಸುವುದಾಗಿ ನಿರ್ಧರಿಸಿದರು. ಮದುವೆಯಾದ ನಂತರ ಚಂದ್ರಕಲಾಳನ್ನು ಮುಂಬೈಗೆ ಕರೆದುಕೊಂಡು ಹೋದ ಒಂದೆರಡು ವಾರಗಳ ನಂತರ ಆತ ದೂರದ ಪಂಜಾಬಿಗೆ ಹೋದ.

ಅಪರಿಚಿತ ಊರು, ಅಪರಿಚಿತರೊಂದಿಗೆ ಜೀವನ... ಚಂದ್ರಕಲಾ ಏಕಾಂಗಿಯಾದಳು. ಆಗ ಗಂಡನ ಅಣ್ಣಂದಿರ ಕಾಟ ಶುರುವಾಯಿತು. ಪ್ರತಿ ದಿನ ಆಕೆ ತಮ್ಮೊಂದಿಗೆ ಮಲಗಬೇಕು ಎಂದು ಒತ್ತಾಯಿಸಲಾರಂಭಿಸಿದರು. ಇದರ ಬಗ್ಗೆ ಅವರ ಹೆಂಡತಿಯರಿಗೆ ದೂರಿದರೆ "ನಿನಗೆ ಅನ್ನ ಹಾಕುತ್ತಿಲ್ಲವಾ? ಅವರು ಹೇಳಿದಂತೆ ಮಾಡು" ಎಂದು ಗದರಿಸಿದರು. ಚಂದ್ರಕಲಾಳಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಗಂಡ ಎಲ್ಲೋ ದೂರದಲ್ಲಿದ್ದಾನೆ. ಮಗಳನ್ನು ಅದು ಹೇಗೋ ಸಾಗಹಾಕಿದ್ದರ ಬಗ್ಗೆ ಬಡ ಅಪ್ಪ-ಅಮ್ಮ ನೆಮ್ಮದಿಯಾಗಿದ್ದಾರೆ. ಮುಂಬೈನಂತಹ ನಗರದಲ್ಲಿ ಜನ ಗೊತ್ತಿಲ್ಲ, ಭಾಷೆ ಗೊತ್ತಿಲ್ಲ... ಚಂದ್ರಕಲಾ ಬದುಕು ನರಕವಾಯಿತು.

ಗಂಡನ ಅಣ್ಣಂದಿರ ಆಸೆಗಳಿಗೆ ಬಗ್ಗದೆ ಅವರ ಹೊಡೆತಗಳನ್ನು ಅನುಭವಿಸುತ್ತಾ, ಅವರ ಹೆಂಡತಿಯರು ತನ್ನನ್ನು ಮನೆ ಕೆಲಸದವಳಂತೆ ನೋಡಿಕೊಳ್ಳುವುದನ್ನೂ ಸಹಿಸಿಕೊಳ್ಳುತ್ತಾ ಚಂದ್ರಕಲಾ ತನ್ನ ಗಂಡನಿಗಾಗಿ ಕಾದಳು.

ಆತ ಬಂದಾಗ ತನಗಾಗಿದ್ದನ್ನೆಲ್ಲ ಅವನಿಗೆ ಹೇಳಿದಳು. ಆದರೆ ಆತನೂ ಅವಳಷ್ಟೇ ಅಸಹಾಯಕನಾಗಿದ್ದ. ಸೈನಿಕನಾದ ತನ್ನೊಂದಿಗೆ ಹೆಂಡತಿಯನ್ನು ಕರೆದುಕೊಂಡು ಹೋಗುವಂತಿಲ್ಲ, ಅವಳಿಗಾಗಿ ಮುಂಬೈನಲ್ಲಿ ಬೇರೆ ಮನೆ ಮಾಡುವಷ್ಟು ಆರ್ಥಿಕ ಬಲವೂ ಇಲ್ಲ.... "ನಾನು ಇಲ್ಲದಾಗ ಅದು ಹೇಗೋ adjust ಮಾಡಿಕೊಂಡು



ಇರು. ನಾವಿಬ್ಬರೂ ಅಸಹಾಯಕರು" ಎಂದು ಹೇಳಿ ಆತ ಮತ್ತೆ ಹೊರಟೇಬಿಟ್ಟ. ಗಂಡನಾದರೂ ತನ್ನ ನೆರವಿಗೆ ಬರುತ್ತಾನೆಂದು ಆಶಿಸಿದ್ದ ಚಂದ್ರಕಲಾ ತತ್ತರಿಸಿಹೋದಳು.

ಕೊನೆಗೆ ಹೇಗಾದರೂ ಮಾಡಿ ಆ ನರಕದಿಂದ ಪಾರಾಗಬೇಕೆಂದು ನಿರ್ಧರಿಸಿದಳು. ಕೈಯಲ್ಲಿ ಐವತ್ತು ರೂಪಾಯಿ ಹಿಡಿದು ಬೆಂಗಳೂರಿನ ಟ್ರೈನ್ ಹತ್ತಿದಳು. Unreserved ಬೋಗಿಯಲ್ಲಿದ್ದ ಚಂದ್ರಕಲಾಳಷ್ಟೇ ನಿರ್ಗತಿಕರು ಆಕೆಗೆ ತಮ್ಮ ಕೈಲಾದಷ್ಟು ಸಹಾಯ ಮಾಡಿದರು. ಬೆಂಗಳೂರಿಗೆ ಬಂದವಳೇ ನಮ್ಮ ಮನೆಯ ಮುಂದೆ ಪ್ರತ್ಯಕ್ಷಳಾಗಿದ್ದಳು.

ಚಂದ್ರಕಲಾಳ ಕತೆ ಕೇಳಿ ಅಪ್ಪ-ಅಮ್ಮ ಕರಗಿ ಹೋದರು. ಪಿಯುಸಿಯಲ್ಲೇ ಓದನ್ನು ನಿಲ್ಲಿಸಿದ್ದ ಆಕೆಗೆ ಅಪ್ಪ ತಮ್ಮ ಸ್ನೇಹಿತರ ಕಾರ್ಖಾನೆಯಲ್ಲಿ ಕೆಲಸ ಕೊಡಿಸಿದರು. ನನ್ನ ಸ್ನೇಹಿತರು ವಿಚ್ಛೇದನ ಪಡೆಯುವುದರಲ್ಲಿ ಸಹಾಯ ಮಾಡಿದರು. ಇದೆಲ್ಲ ಆಗಿ ನಾಲ್ಕೈದು ವರ್ಷಗಳಾಗಿವೆ. ಅವಳ ದೇಹದ ಮೇಲಿನ ಸುಟ್ಟ ಸಿಗರೇಟ್ ಕಲೆಗಳು ಇನ್ನೂ ಮಾಸಿಲ್ಲ, ಪ್ರಾಯಶಃ ಎಂದೂ ಮಾಸುವುದಿಲ್ಲ. ಆದರೆ ಇವತ್ತು ಚಂದ್ರಕಲಾ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾಳೆ....


ಚಂದ್ರಕಲಾಳ ನೆನಪುಗಳಿಂದ ಹೊರಬಂದಾಗ ಕಾಮಿನಿ ತನ್ನ ರಗಳೆಯನ್ನು ಮುಂದುವರೆಸಿದ್ದಳು.


ಕಾಮಿನಿ ಮತ್ತು ಚಂದ್ರಕಲಾಳ ನಡುವೆ ಎಷ್ಟು ವ್ಯತ್ಯಾಸ..... ಒಂದೆಡೆ ತನ್ನ ಸ್ವಾರ್ಥಕ್ಕಾಗಿ ಏನನ್ನು ಮಾಡಲೂ ಹೇಸದ ಕಾಮಿನಿ. ಇನ್ನೊಂದೆಡೆ ಬಡತನ, ಅಸಹಾಯಕತೆಯಲ್ಲೂ ಒಂದಿಷ್ಟು ನೆಮ್ಮದಿ, ಅಕ್ಕರೆಗಾಗಿ ಹಂಬಲಿಸುವ ಚಂದ್ರಕಲಾ....


ಇಬ್ಬರೂ ಸ್ತ್ರೀಯರೇ. ಆದರೆ ಭಿನ್ನ ಮುಖಗಳು!

-ಶಾರದೆ

ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ -ಅರಿಸ್ಟಾಟಲ್


ದೇವೇಗೌಡ


ಡಿ.ಕೆ.ಶಿವಕುಮಾರ್


ಚನ್ನಿಗಪ್ಪ

ಎಲ್ಲಾ ಕಾಯ್ದೆ ಕಾನೂನುಗಳನ್ನು ಕಾಲ ಕಸ ಮಾಡಿಕೊಂಡು ಅಕ್ರಮ ಗ್ರಾನೈಟ್ ದಂಧೆ ನಡೆಸುತ್ತಿದ್ದ ಡಿಕೆ ಬ್ರದರ್ಸ್ ಪಾಳಯಕ್ಕೆ ಕುಮಾರಸ್ವಾಮಿ ಸರ್ಕಾರ ದಂಡೆತ್ತಿ ಹೋಗಿದೆ. ಅರಣ್ಯ ಸಚಿವ ಚನ್ನಿಗಪ್ಪ ಕನಕಪುರದಲ್ಲೇ ಮೊಕ್ಕಾಂ ಹೂಡಿ 'ತನಿಖೆ' ಶುರು ಮಾಡಿದ್ದಾರೆ. ಇದು ಸೇಡಿನ ಕ್ರಮವಾ ಅಥವಾ ಡಿಕೆಶಿ ನಿಜವಾಗಿಯೂ ಗ್ರಾನೈಟ್ ಕಳ್ಳನಾ ಎಂಬ ಬಗ್ಗೆ ವರದಿ....

ಡಿಕೆಶಿಗೆ ಗೌಡರ ಕಲ್ಲೇಟು


ಕನಕಪುರ-ಸಾತನೂರಿನ ಎಲ್ಲಾ ಮೂಲೆಗಳಿಗೂ ಡೈನಾಮೆಟ್ ಇಟ್ಟು ಸ್ಫೋಟಿಸಿ ಗ್ರಾನೈಟ್ ಕದಿಯುತ್ತಿದ್ದ ಡಿಕೆ ಬ್ರದರ್ಸ್ ತಲೆಯ ಮೇಲೆ ಈಗ ಅನಾಮತ್ತಾಗಿ ಒಂದು ಬಾಂಬ್ ಸಿಡಿಸಲಾಗಿದೆ.

ಈ ಏರಿಯಾದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಗೆ ತಡೆ ಹಾಕಿ, ತನಿಖೆ ನಡೆಸುವ ಬಾಂಬ್ ಅದು. ಇದರ ಟಾರ್ಗೆಟ್ ಡಿಕೆಶಿಯಲ್ಲದೆ ಬೇರಾರೂ ಅಲ್ಲ, ಹಾಗೂ ಈ ತನಿಖೆಯ ಡೈನಾಮೈಟ್ ಸಿಡಿಸಿರುವುದು ಜೆಡಿಎಸ್ ಸುಪ್ರಿಮೋ ಹಾಗೂ ಡಿಕೆಶಿಯ ಕಡುವೈರಿ ಸಾಕ್ಷಾತ್ ದೇವೇಗೌಡರೇ!

ಕಳೆದ ಆರೆಂಟು ವರ್ಷಗಳಿಂದ ದೇವೇಗೌಡರ ಕುಟುಂಬಕ್ಕೆ ಇನ್ನಿಲ್ಲದ ಕಿರುಕುಳ ನೀಡುತ್ತಾ ಬಂದಿದ್ದ ಕಾಂಗ್ರೆ ಪುಂಡು ನಾಯಕ ಹಾಗೂ ಸಾತನೂರಿನ ತುಂಡರಸ ಡಿ.ಕೆ. ಶಿವಕುಮಾರ್ ಮೇಲೆ ಅಕ್ರಮ ಗ್ರಾನೈಟ್ ದಂಧೆಯ ತನಿಖೆ ನೆಪ ಇಟ್ಟುಕೊಂಡು ದಂಡೆತ್ತಿ ಹೋಗಿರುವ ಮುಖ್ಯಮಂತ್ರಿ ಕುಮಾರಸ್ವಾಮಿ ಡಿಕೆ ಬ್ರದರ್ಸ್ ಪಾಳಯದಲ್ಲಿ ನಡುಕ ಹುಟ್ಟಿಸಿಬಿಟ್ಟಿದ್ದಾರೆ. ಕನಕಪುರ, ಸಾತನೂರು ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಒಂದೂವರೆ ದಶಕದಿಂದ ಅಕ್ರಮ ಗ್ರಾನೈಟ್ ಸ್ಮಗಲಿಂಗ್ ದಂಧೆಯಲ್ಲಿ ನಿರತನಾಗಿದ್ದ ಕೊಬ್ಬಿದ ಗೂಳಿ ಡಿಕೆಶಿಯ ಕೊಂಬಿಗೇ ಕೈ ಹಾಕಿ ಬೀಳಿಸಿ, ಬಾಲ ಕಟ್ ಮಾಡಲಾಗಿದೆ. ಇನ್ನು ಡಿಕೆಶಿಯ ತಮ್ಮ ಸಾತನೂರಿನ ಮರಿ ಕೊತ್ವಾಲ ಡಿಕೆ ಸೂರಿಯ ದನಿಯೇ ಅಡಗಿ ಹೋಗಿದೆ. ಈ ಏರಿಯಾದಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆ, ನಕಲಿ ಪರ್ಮಿಟ್, ನಕಲಿ ಲೀಸ್‌ಗಳ ಪ್ರತಿ ರೆಕಾರ್ಡ್‌ನ್ನು ಪರಿಶೀಲಿಸಿ ತನಿಖೆ ಮಾಡಲು ಸಾಕ್ಷಾತ್ ಅರಣ್ಯ ಸಚಿವ ಚನ್ನಿಗಪ್ಪನವರೇ ಬಂದು ಕನಕಪುರದಲ್ಲಿ ಮೊಕ್ಕಾಂ ಮಾಡಿಬಿಟ್ಟಿದ್ದಾರೆ. ಈಗಾಗಲೇ ಆರು ಮಂದಿ ಸರ್ಕಾರಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ.


ಇದೆಲ್ಲಾ ಡಿಕೆಶಿ ವಿರುದ್ಧ ದೇವೇಗೌಡರ ಕುಟುಂಬದ ಸೇಡಿನ ಕೆಲಸ ಎಂಬುದು ನಿಜ. ಆದರೆ ಈ ಡಿಕೆ ಬ್ರದರ್ಸ್ ಎಲ್ಲಾ ಅಕ್ರಮ ಮಾರ್ಗಗಳ ಮೂಲಕ, ಅರಣ್ಯ ನಾಶ ಮಾಡಿ ಗ್ರಾನೈಟ್ ಕಳ್ಳ ಸಾಗಾಣಿಕೆ ಮಾಡುತ್ತಿದ್ದುದೂ ನಿಜ. ಅವರಿಗೆ ತಕ್ಕ ಶಾಸ್ತಿಯಾಗುತ್ತಿದೆ ಈಗ.

ಅತ್ತ ಒಂದೇ ಸಮನೆ ಸರ್ಕಾರಿ ಒದೆ ತಿನ್ನುತ್ತಿರುವ ಡಿಕೆಶಿಗೆ ತಾನು ದೇವೇಗೌಡರನ್ನು ಬಾಯಿಗೆ ಬಂದಂತೆ ಬೈಯ್ದಿದ್ದು, ಕುಮಾರಸ್ವಾಮಿ ಕಾಲರ್ ಪಟ್ಟಿ ಹಿಡಿದು ಎಳೆದಾಡಿದ್ದು, ಕನಕಪುರ ಸಂಸತ್ ಚುನಾವಣೆಯಲ್ಲಿ ಗೌಡರ ವಿರುದ್ಧ ತೇಜಸ್ವಿನಿಯನ್ನು ನಿಲ್ಲಿಸಿ ಗೆಲ್ಲಿಸಿದ್ದ ಘಟನೆಗಳೆಲ್ಲಾ ಈಗ ಶನಿ ರೂಪದಲ್ಲಿ ಕಾಡಬಹುದೆಂಬ ಕಲ್ಪನೆಯೂ ಇರಲಿಲ್ಲವೆಂದು ಕಾಣುತ್ತಿದೆ.


ಡಿಕೆ ಬ್ರದರ್ಸ್ 'ಮಹಾರಾಜರ ಕಟ್ಟೆ'ಯಲ್ಲಿ ನಡೆಸುತ್ತಿರುವ ಅಕ್ರಮ ಗಣಿಗಾರಿಕೆ

ಇಬ್ಬಳಿಗೆ ರಾಗಿನಾ ಅಥವಾ ಚಿನ್ನನಾ?

ಒಂದು ಕಾಲದಲ್ಲಿ ಮಾಫಿಯಾ ಎಲಿಮೆಂಟ್ ಕೊತ್ವಾಲ ರಾಮಚಂದ್ರನಿಗೆ ಬೀಡಿ, ಸಿಗರೇಟು ತಂದು ಕೊಡುವಷ್ಟು ಲೋ ಲೆವೆಲ್‌ನಲ್ಲಿದ್ದ ಡಿ.ಕೆ. ಶಿವಕುಮಾರ್ ಇವತ್ತು ಒಂದೂವರೆ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ 'ಶೋಬಾ ಶಾಪಿಂಗ್ ಮಾಲ್' ಕಟ್ಟಿಸುವಷ್ಟು ಕುಬೇರನಾಗಿದ್ದಾನೆ. ಡಿಕೆ ಇಷ್ಟು ಹಣ ದುಡಿದದ್ದೇ ರೋಲ್‌ಕಾಲ್, ಗ್ರಾನೈಟ್ ಹಾಗೂ ರಿಯಲ್ ಎಸ್ಟೇಟ್ ದಂಧೆಗಳಿಂದ. ಈಗ ಹೈ ಪ್ರೊಫೈಲ್ ಕುಬೇರರೊಂದಿಗೆ ಈ ಡಿಕೆಶಿ ಮಾತನಾಡುವಾಗ 'ನಮ್ಮ ತಂದೆ ದೊಡ್ಡಾಲಳ್ಳಿ ಕೆಂಪೇಗೌಡರು ಇಬ್ಬಳಿಗೇಲಿ ಚಿನ್ನ ಅಳೆಯುತ್ತಿದ್ದರು ಕಣ್ರೀ...' ಎಂದು ಕೊಚ್ಚಿಕೊಳ್ಳುತ್ತಿರುತ್ತಾನೆ.


ಇನ್ಸ್‌ಪೆಕ್ಟರ್ ರಾಚಯ್ಯ

ಇಬ್ಬಳಿಗೆ ಎಂದರೆ ಧಾನ್ಯ ಅಳೆಯುವ ಸೇರಿನಂತಹ ಒಂದು ಸಾಧನ. ಮೂರು ಸೇರು ಹಿಡಿಸುವ ಇಬ್ಬಳಿಗೆಗೆ ಪಡಿ ಎಂತಲೂ ಕರೆಯುತ್ತಾರೆ. ಡಿಕೆಶಿ ತಂದೆ ಕೆಂಪೇಗೌಡರು ಹಳ್ಳಿಹಳ್ಳಿ ತಿರುಗಿ ರೈತರಿಂದ ರಾಗಿ ಖರೀದಿಸಿ ಮಾರುತ್ತಿದ್ದ ಒಬ್ಬ ಸಾಮಾನ್ಯ ಧಾನ್ಯ ವ್ಯಾಪಾರಿಯಾಗಿದ್ದರು. ಇವತ್ತಿನ ಡಿಕೆಶಿಗೆ ಹೋಲಿಸಿದರೆ ಅವತ್ತಿನ ಇಬ್ಬಳಿಗೆ ಕೆಂಪೇಗೌಡರು ನ್ಯಾಯಸ್ಥರೆಂದೇ ಹೇಳಬಹುದು. ಬೆಂಗಳೂರಿಗೆ ಓದಲು ಬಂದ ಡಿಕೆಶಿ ಯೂತ್ ಕಾಂಗ್ರೆಸ್ ಸೇರಿ 1987 ರಲ್ಲಿ ಜಿಲ್ಲಾ ಪಂಚಾಯಿತಿ ಮೆಂಬರ್ ಆದ. ನಂತರ 1989 ರಲ್ಲಿ ಸಾತನೂರು ಅಸೆಂಬ್ಲಿಗೂ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದ. ಆದರೆ 1984 ರಲ್ಲೇ ಅಸೆಂಬ್ಲಿಗೆ ಸ್ಪರ್ಧಿಸಿ ಸೋತಿದ್ದ ಡಿಕೆಶಿಗೆ ಅವತ್ತು ಎದುರಾಳಿಯಾಗಿದ್ದಿದ್ದು ಸ್ವತಃ ದೇವೇಗೌಡರೆ.

ಕನಕಪುರ, ಸಾತನೂರು ಏರಿಯಾಗಳಲ್ಲಿದ್ದ ಭಾರಿ ಗ್ರಾನೈಟ್ ನಿಕ್ಷೇಪಕ್ಕೆ ಬೇಡಿಕೆ ಕುದುರುತ್ತಿದ್ದ ಕಾಲ ಅದು. ಅದೇ ಸಮಯಕ್ಕೆ ರಾಜಕಾರಣಿಯಾಗಿ 89 ರಲ್ಲಿ ಶಾಸಕನಾದ ಡಿಕೆಶಿ ಗ್ರಾನೈಟ್ ದಂಧೆಯ ಮೇಲೆ ಪೂರ್ತಿ ಕಂಟ್ರೋಲ್ ಪಡೆದುಕೊಂಡ. ತಾನೇ ಅಕ್ರಮ, ಸಕ್ರಮ ಕ್ವಾರಿಗಳನ್ನೂ ಶುರು ಮಾಡಿದ. ಟ್ರೇಡಿಂಗ್‌ಗೂ ಕೈಯಿಟ್ಟ. ಗ್ರಾನೈಟ್ ಬ್ಯುಸಿನೆಸ್ ನಡೆಸಲು ಹೊರಗಿನಿಂದ ಸಾತನೂರಿಗೆ ಬಂದವರಿಂದ ಮೀಟರ್‌ಗಿಷ್ಟೆಂದು ರೋಲ್‌ಕಾಲ್ ಕಿತ್ತ. ಹೀಗೆ ಒಂದಷ್ಟು ಕಾಸು ಮಾಡಿಕೊಂಡು ದುಂಡಗಾದ ಡಿಕೆಶಿ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ದೆಹಲಿಯಲ್ಲಿ ಹಣ ಕೊಟ್ಟು ಬಂಧಿಖಾನೆ ಮಂತ್ರಿಗಿರಿ ಖರೀದಿಸಿ ತಂದ. ಮಿನಿಸ್ಟರ್ ಆದೇಟಿಗೆ ಗ್ರಾನೈಟ್ ದಂಧೆಯ ಮೇಲೆ ಡಿಕೆಶಿಗೆ ಇನ್ನಷ್ಟು ಕಂಟ್ರೋಲ್ ಸಿಕ್ಕಿತು. ದುಡ್ಡೂ ಹರಿದು ಬಂತು.

ಕಾಂಗ್ರೆನವರ ಒಳಜಗಳದಿಂದಾಗಿ 1994 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ವಂಚಿತನಾದ ಡಿಕೆ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದಿದ್ದ. ಆಗ ಜೆಡಿಎಸ್ ಸರ್ಕಾರವಿದ್ದ ಕಾಲ. ನಂತರ 99 ರಲ್ಲಿ ಮತ್ತೆ ಗೆದ್ದ.

ಬಿಳಿದಾಳೆ ಈಶ

ಎಸ್.ಎಂ. ಕೃಷ್ಣ ಕ್ಯಾಬಿನೆಟ್‌ನಲ್ಲಿ ಸಹಕಾರ, ನಗರಾಭಿವೃದ್ಧಿಯಂತಹ ಪೊಗದಸ್ತಾದ ಖಾತೆಗಳನ್ನು ಗಿಟ್ಟಿಸಿ ಚೆನ್ನಾಗಿ ಮೇಯ್ದ ಡಿಕೆಶಿ ದೇವೇಗೌಡರ ಕುಟುಂಬಕ್ಕೆ ಎಡಬಿಡದೆ ಕಿರುಕುಳ ಕೊಟ್ಟಿದ್ದ. ಸ್ವತಃ ಕಾಂಗ್ರೆಸ್‌ನಲ್ಲೂ ಎಚ್. ವಿಶ್ವನಾಥ್, ಖರ್ಗೆ, ಎಚ್.ಕೆ. ಪಾಟೀಲರಿಗೆ ಮುಖಭಂಗ ಆಗುವಂತೆ ಅವರ ಪರಿಧಿಗಳಲ್ಲೂ ನುಗ್ಗಿ ಆಕ್ರಮಿಸಿಕೊಂಡಿದ್ದ. ದಿನ ಬೆಳಗಾದರೆ ದೇವೇಗೌಡರನ್ನು ತೆಗಳುವುದು, ತೋಳೇರಿಸಿಕೊಂಡು ಬೀದಿ ಜಗಳಕ್ಕೆ ನಿಲ್ಲುವುದು ಡಿಕೆಶಿಗೆ ರೂಢಿಯಾಗಿ ಹೋಗಿತ್ತು.

ಎಸ್.ಎಂ. ಕೃಷ್ಣ ಸಹ ಡಿಕೆಶಿಯನ್ನು ಚೆನ್ನಾಗಿ ಬಳಸಿಕೊಂಡು ತಮ್ಮ ಎದುರಾಳಿಗಳ ವಿರುದ್ಧ ಛೂ ಬಿಟ್ಟಿದ್ದರು. ಹೀಗೆ ಅಟ್ಟಹಾಸ ಮಾಡುತ್ತಲೇ ಹೋದ ಡಿಕೆಶಿ ಕನಕಪುರ ಪಾರ್ಲಿಮೆಂಟಿಗೆ ನಿಂತಿದ್ದ ದೇವೇಗೌಡರೆದಿರು ತೇಜಸ್ವಿನಿಯನ್ನು ತಂದು ನಿಲ್ಲಿಸಿ ಗೌಡರಿಗೆ ಮಣ್ಣು ಮುಕ್ಕಿಸಿದ್ದ.

ಇದಕ್ಕೆ ಡಿಕೆಶಿ ಕೂಡಲೇ ದಂಡ ತೆರಬೇಕಾಗಿ ಬಂತು. 2004ರ ಕಾಂಗ್ರೆ-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಡಿಕೆಶಿಗೆ ಜಾಗ ಸಿಗದಂತೆ ಮಾಡಿಬಿಟ್ಟಿದ್ದರು ಗೌಡರು. ಎಸ್.ಎಂ.ಕೃಷ್ಣ ಮಹಾರಾಷ್ಟ್ರಕ್ಕೆ ಹೋಗಿದ್ದರಿಂದ ಡಿಕೆಶಿ ರಕ್ಷಣೆಗೆ ಯಾರೂ ಇರಲಿಲ್ಲ. ಧರಂಸಿಂಗ್ ಸರ್ಕಾರ ಬೀಳಿಸುವ ಕೃಷ್ಣ-ಡಿಕೆಶಿ ತಂತ್ರವೂ ಫಲ ಕೊಡಲಿಲ್ಲ. ಕೊನೆಗೆ ಗೌಡರು ಕಾಂಗ್ರೆ ಸಖ್ಯ ತೊರೆದು ಬಿಜೆಪಿ ಜೊತೆ ಸೇರಿ 'ಕೋ-ಜಾ ಸರ್ಕಾರ' ರಚಿಸಿದಾಗಲೇ ಡಿಕೆಶಿ ಪಾಳೆಯದಲ್ಲಿ ನಡುಕ ಶುರುವಾಗಿತ್ತು.

ರಾಜಕೀಯದ ಚಕ್ರ ಒಂದು ಪೂರ್ಣ ಸುತ್ತು ತಿರುಗಿತ್ತು. ಡಿಕೆಶಿಯೇ ಹಿಯಾಳಿಸಿ, ಅವಮಾನಿಸಿದ್ದ ಕುಮಾರಸ್ವಾಮಿ ಅನಿರೀಕ್ಷಿತವಾಗಿ ಕರ್ನಾಟಕದ ಮುಖ್ಯಮಂತ್ರಿಯಾದರು.

ಡಿಕೆಶಿಯ ಅಕ್ರಮ ಗ್ರಾನೈಟ್ ದಂಧೆಯ ಮೇಲೆ ರೇಡು ನಡೆಯುತ್ತಿರುವುದರ ಹಿನ್ನೆಲೆಯಲ್ಲಿ ಇವೆಲ್ಲಾ ಇವೆ.

ಕುಮಾರಸ್ವಾಮಿ ಕೊರಳಪಟ್ಟಿ ಹಿಡಿದಿದ್ದ ಡಿಕೆ

ಡಿ.ಕೆ. ಶಿವಕುಮಾರ್ ಎಂತಾ ಹುಂಬ ಹಾಗೂ ಒರಟು ರಾಜಕಾರಣಿಯೆಂದರೆ ನಾಲ್ಕು ಅವಧಿಗೆ ಶಾಸಕನಾಗಿ, ಒಮ್ಮೆ ಕ್ಯಾಬಿನೆಟ್ ಮಿನಿಸ್ಟರ್ ಆದರೂ ಈತನ ನಡವಳಿಕೆ ಸುಧಾರಿಸಿಲ್ಲ.

ಕೊಬ್ಬು ದುರಹಂಕಾರದ ಮೊಟ್ಟೆ ಈ ಡಿಕೆ 2004 ರ ಮೇನಲ್ಲಿ ನಡೆದ ಅಸೆಂಬ್ಲಿ ಎಲೆಕ್ಷನ್ ಸಮಯದಲ್ಲಿ ಹಾಲಿ ಮುಖ್ಯಮಂತ್ರಿ ಹಾಗೂ ಅವತ್ತಿನ ಜೆಡಿಎಸ್ ಮುಖಂಡ ಕುಮಾರಸ್ವಾಮಿಯ ಕೊರಳ ಪಟ್ಟಿ ಹಿಡಿದು ಜಗ್ಗಾಡಿದ ಎಂದರೆ ನೀವು ನಂಬಲಾರಿರೇನೋ!

ಡಿಕೆ ಎದಿರು ಅವತ್ತು ಪ್ರತಿಸ್ಪರ್ಧಿಗಳಾಗಿದ್ದಿದ್ದು ಜೆಡಿಎಸ್‌ನ ದೊಂತೂರು ವಿಶ್ವನಾಥ್ ಹಾಗೂ ಬಿಎಸ್‌ಪಿಯ ಮಾರಸಂದ್ರ ಮುನಿಯಪ್ಪ. ಇವರಿಬ್ಬರ ಪ್ರಬಲ ಪೈಪೋಟಿಗೆ ಹೆದರಿ ಹೋಗಿದ್ದ ಡಿಕೆ "ಕನಕಪುರ ತಾಲ್ಲೂಕು ಅನಿವಾಸಿಗಳ ಸಂಘ" ಎಂಬ ಗುಂಪೊಂದನ್ನು ಬೆಂಗಳೂರಿನಲ್ಲಿ ಹುಟ್ಟುಹಾಕಿ ಎಲೆಕ್ಷನ್ ದಿನ ಹತ್ತು ಬಸ್ ತುಂಬಾ ನಕಲಿ ಮತದಾರರನ್ನು ಕರೆಸಿದ್ದ. ಈ ವಿಷಯ ಜೆಡಿಎಸ್‌ನವರಿಗೆ ಗೊತ್ತಾಗಿ ಕೆಲ ಬಸ್‌ಗಳನ್ನು ಕನಕಪುರದಲ್ಲೇ ತಡೆಯಲಾಗಿತ್ತು.

ಅವತ್ತು ಅಲ್ಲಿ ರಣರಂಗದಂತಹ ಸ್ಥಿತಿ ಇತ್ತು, ಒಂದು ಕಡೆ ಡಿಕೆಶಿ ಮತ್ತವನ ಬಂಟರು, ಮತ್ತೊಂದೆಡೆ ಕುಮಾರಸ್ವಾಮಿ ಜೊತೆಗೊಂದಿಷ್ಟು ಜನ ಪಾರ್ಟಿ ಕಾರ್ಯಕರ್ತರಿದ್ದರು.



ಮೈಮೇಲೆ ದೆವ್ವ ಬಂದಂತೆ ಹಾರಾಡುತ್ತಿದ್ದ ಡಿಕೆ ಜಗಳ ಬಿಸಿ ಏರಿದಾಗ ಸಾರ್ವಜನಿಕರು ಹಾಗೂ ಪತ್ರಕರ್ತರೆದುರೇ ನೇರ ನುಗ್ಗಿ ಕುಮಾರಸ್ವಾಮಿಯ ಕಾಲರ್ ಹಿಡಿದು ಎಳೆದಾಡಿಬಿಟ್ಟ.

ಡಿಕೆಯ ಅಂತಾ ಗೂಂಡಾಗಿರಿಯನ್ನು ಕುಮಾರಸ್ವಾಮಿ ಅವತ್ತಿನ ಮಟ್ಟಿಗೆ ಸಹಿಸಿಕೊಂಡರೇನೋ, ಆದರಿವತ್ತು ಅದೇ ಕುಮಾರಸ್ವಾಮಿ ಕರ್ನಾಟಕದ ಮುಖ್ಯಮಂತ್ರಿ. ಅಷ್ಟೇ ಅಲ್ಲ ಇದೇ ಕುಮಾರಸ್ವಾಮಿ ಜೊತೆ ಡಿಕೆ ಇನ್ನೊಮ್ಮೆ ಅತೀ ನೀಚವಾಗಿ ವರ್ತಿಸಿದ್ದ.


1999 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕುಮಾರಸ್ವಾಮಿ ಸಾತನೂರಿನಲ್ಲಿ ಡಿಕೆ ಎದಿರು ಸ್ಪರ್ಧಿಸಿ ಸೋತಿದ್ದರು. ನಂತರ ಆಕಸ್ಮಾತಾಗಿ ಇವರಿಬ್ಬರೂ ಒಂದೆಡೆ ಮುಖಾಮುಖಿಯಾದಾಗ ಈ ಡಿಕೆ ಕೇಂಕಾರದಿಂದ "ಏನ್ರೀ ಕುಮಾರಸ್ವಾಮಿ ನನ್ನ ಸಾತನೂರಿಗೆ ಬರೋಕೆ ನಿಮಗೆ ಎಷ್ಟು ಧೈರ್ಯ?" ಎಂದು ಗದರಿಸಿದ್ದ.

ಇಷ್ಟು ಅಹಂ, ಪೊಗರುಗಳನ್ನೆಲ್ಲಾ ಇಟ್ಟುಕೊಂಡು ಮೆರೆಯುತ್ತಿದ್ದ ಡಿಕೆ ದನಿ ಇವತ್ತು ಉಡುಗಿ ಹೋಗಿದೆ.

ಡಿಕೆಗೊಂದು ಕಾಲ.... ಎಚ್‌ಡಿಕೆಗೊಂದು ಕಾಲ ಅಷ್ಟೇ.

ಡಿಕೆ ಬ್ರದರ್ಸ್ 'ಸುವಿ' ರಾಗ

ಡಿಕೆಶಿ ಹಾಗೂ ಸೂರಿ ನಡೆಸುತ್ತಿರುವ ಗ್ರಾನೈಟ್ ದಂಧೆಯಲ್ಲಿ ಡಜನ್‌ಗಟ್ಟಲೆ ಬೋಗಸ್ ಕಂಪನಿಗಳಿವೆ. ಸುವಿ ಗ್ರಾನೈಟ್, ಎನ್‌ರಾಕ್ಸ್, ಸೆವೆನ್ ಹಿಲ್ಸ್, ಇಂಡಿಯಾ ರಾಕ್ಸ್, ಇಂಡಿಯನ್ ಬ್ಲ್ಯಾಕ್ ಗ್ರಾನೈಟ್ ಲಿಮಿಟೆಡ್ ಮುಂತಾದ ಹೆಸರುಗಳಲ್ಲಿ ಗ್ರಾನೈಟ್ ದಂಧೆ ನಡೆಸುತ್ತಿರುವ ಡಿಕೆ ಬ್ರದರ್ಸ್ ಗಣಿ ಇಲಾಖೆ, ಅರಣ್ಯ ಕಾಯಿದೆ, ಪರಿಸರ ರಕ್ಷಣೆಯ ಯಾವೊಂದು ನೀತಿ ನಿಯಮಗಳನ್ನೂ ಲೆಕ್ಕಿಸಿದವರಲ್ಲ.



ದೊಂತೂರು ವಿಶ್ವನಾಥ್

ಕನಕಪುರ ತಾಲ್ಲೂಕಿನ ಮರಳೆ, ಮುನೇಶ್ವರ ಬೆಟ್ಟ, ಕುರುಬನ ಕೆರೆ, ಕೊಳಗೊಂಡನಹಳ್ಳಿ, ಕಸಬಾ ಮಹಾರಾಜರ ಕಟ್ಟೆ, ತಿಪ್ಪೂರು, ಬಿಜ್ಜಳ್ಳಿ, ಅಚ್ಚಲು, ಕೋಟೆಕೊಪ್ಪ, ಕೂನೂರು, ಕೆಬ್ಬೆಹಳ್ಳಿ, ಹೊನ್ನಿಗನಹಳ್ಳಿಗಳಲ್ಲೆಲ್ಲಾ ಇವರ ಕಳ್ಳ ದಂಧೆಯ ಜಾಲ ಹರಡಿದೆ.

ಮರಳೆ ಲೀಸ್ ಸಕ್ರಮವಾಗಿದ್ದರೂ ಅದಕ್ಕೂ ಮುನ್ನ ಅಕ್ರಮವಾಗಿ ಅರಣ್ಯ ಪ್ರದೇಶದಿಂದಲೇ ಕೋಟ್ಯಾಂತರ ಮೊತ್ತದ ಗ್ರಾನೈಟನ್ನು ಡಿಕೆ ಬ್ರದರ್ಸ್ ದೋಚಿ ಬರಿದಾಗಿಸಿದ್ದರು. ಪ್ರತಿಭಟಿಸಿದ ಗ್ರಾಮದ ಜನರ ಮೇಲೆ ಗೂಂಡಾಗಳನ್ನು ಹಾಗೂ ಪೋಲೀಸರನ್ನು ಬಿಟ್ಟು ಹೊಡೆಸಿದ್ದರು. ಮರಳೆ ಗ್ರಾಮದ ಜಿಲ್ಲಾ ಪಂಚಾಯಿತಿ ಅಭ್ಯರ್ಥಿ ಪುಟ್ಟಮ್ಮನವರ ಮಗ ಶಾಂತಕುಮಾರನಿಗೆ ಏಟಾಗಿ ಸರ್ಕಾರಿ ಆಸ್ಪತ್ರೆಗೆ ಸೇರಿದ್ದಾಗ ಸೂರಿಯ ಬಂಟ ಮಲ್ಲೇಶ ಅಲ್ಲಿಗೂ ನುಗ್ಗಿ ಮತ್ತೆ ಹಲ್ಲೆ ನಡೆಸಿದ್ದ. ಅದೂ ಪೋಲೀಸರ ಎದುರಿಗೆ!


ಎನ್‌ರಾಕ್ಸ್ ಎಂಬ ಕಂಪನಿ ಸುಶೀಲ್ ಎಂಬುವನಿಗೆ ಸೇರಿದ್ದು, ನಂತರ ಅವನು ಅಗರ್‌ವಾಲ್ ಎಂಬುವನಿಗೆ ಮಾರಿಕೊಂಡಿದ್ದ. ಆದರೆ ಸುಶೀಲ್ ಆಮೇಲೆ ಎನ್‌ರಾಕ್ಸ್ ಹೆಸರಲ್ಲೇ ಲೀಸ್ ಗಿಟ್ಟಿಸಿ ಎರಡೆರಡು ಎನ್‌ರಾಕ್ಸ್ ಅಸ್ತಿತ್ವದಲ್ಲಿರುವಂತೆ ಬೋಗಸ್ ದಂಧೆ ನಡೆಸುತ್ತಿದ್ದ. ಡಿಕೆ ಬ್ರದರ್ಸ್ ಇವರಿಗೆ ಸಿಕ್ಕಿದ್ದ ಲೀಸು, ಪರ್ಮಿಟ್ಟು ಬಳಸಿಕೊಂಡು ತಮಗೆ ಬೇಕಿದ್ದ ಕಡೆ ಕ್ವಾರಿ ನಡೆಸುತ್ತಿದ್ದಾರೆ.

ಆದರೆ ಗಣಿ ಇಲಾಖೆ ಎನ್‌ರಾಕ್ಸ್‌ಗೆ ನೀಡಿದ್ದ ಲೀಸ್‌ಅನ್ನು 2001ರಲ್ಲೇ ರದ್ದು ಮಾಡಿದೆ. ಆದರೂ ಅವರಿಗೆ ಲೀಸ್ ಹೇಗೆ ಸಿಕ್ಕಿತೆಂಬುದೇ ಪವಾಡದಂತೆ ಕಾಣುತ್ತಿದೆ.



ಡಿಕೆಶಿ ವಿರುದ್ಧ ಮರಳೆ ಗ್ರಾಮಸ್ಥರ ಪ್ರತಿಭಟನೆ

ಸೆವೆನ್‌ಹಿಲ್ಸ್ ಕತೆಯೂ ಇದೆ. ರಾಘವನ್ ಶ್ರೀನಿವಾಸ್ ಎಂಬುವರ ಪಾಲುದಾರಿಕೆಯ ಈ ಕಂಪನಿ ನಂತರ ವಿಭಜನೆಯಾಗಿ ಶ್ರೀನಿವಾಸ ಇಡೀ ಕಂಪನಿಯನ್ನು ಮೂರು ಕೋಟಿಗೆ ಯಾರಿಗೋ ಮಾರಿಕೊಂಡರೆ ರಾಘವನ್ ಈಗಲೂ ಸೆವೆನ್ ಹಿಲ್ಸ್ ಹೆಸರಲ್ಲಿ ಆಪರೇಟ್ ಮಾಡುತ್ತಿದ್ದಾನೆ. ಡಿಕೆ ಅತ್ತೆ ಮಗ ವಾಸು ಅಲಿಯಾಸ್ ಸೆವೆನ್ ಹಿಲ್ಸ್ ವಾಸುನೇ ಇದರ ಹಿಂದಿರುವ ಸೂತ್ರಧಾರ.




ಶಿರಸ್ತೇದಾರ್ ಶಾಸ್ತ್ರೀ

ಹೀಗೆ ಅವರಿವರ ಹೆಸರಿನಲ್ಲಿರುವ ಲೀಸ್ ಬಳಸಿಕೊಂಡು ಗ್ರಾನೈಟ್ ಸಂಪತ್ತನ್ನು ಲೂಟಿ ಮಾಡಿದ ಡಿಕೆ ಬ್ರದರ್ಸ್ ಬೇರೆ ಯಾರೇ ಈ ದಂಧೆಗೆ ಬಂದರೂ ಮುಲಾಜಿಲ್ಲದೆ ಮೀಟರಿಗಿಷ್ಟೆಂದು ಹಫ್ತಾ ವಸೂಲಿ ಮಾಡುತ್ತಿದ್ದಾರೆ. ತಮ್ಮ ಮಾತಿಗೆ ಬಗ್ಗದವರನ್ನು ಪೋಲೀಸ್ ಗಣಿ, ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳನ್ನು ಬಳಸಿಕೊಂಡು ಪಳಗಿಸುವ ವಿದ್ಯೆಯೂ ಅವರಿಗೆ ಕರಗತವಾಗಿದೆ.



ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯ ಒಂದು ನೋಟ

ಕೋಡಿಹಳ್ಳಿ ಇನ್ಸ್‌ಪೆಕ್ಟರ್ ರಾಚಯ್ಯ, ಸಾತನೂರಿನ ಜಗದೀಶ್, ಸರ್ಕಲ್ ಇನ್ಸ್‌ಪೆಕ್ಟರ್ ಜಯಂತ ಶೆಟ್ಟಿ ಡಿಕೆಶಿ ಹಾಕಿದ ಗೆರೆ ದಾಟದವರಲ್ಲ. ಇನ್ನು ಕಳೆದ ಹದಿನೈದು ವರ್ಷಗಳಿಂದ ತಾಲ್ಲೂಕಾಫೀಸಿನ ಶಿರಸ್ತೇದಾರನಾಗಿ ಕುಳಿತಿರುವ ಗೋಪಾಲ ಶಾಸ್ತ್ರಿಯಂತೂ ಡಿಕೆಶಿಯ ಎಲ್ಲಾ ಅಕ್ರಮ ಗ್ರಾನೈಟ್ ದಂಧೆಗಳಿಗೂ ಆಡಳಿತಾತ್ಮಕ ಸಹಾಯ ಮಾಡಿಕೊಂಡು ಬಂದಿದ್ದಾನೆ. ಬೆಂಗಳೂರಿನ ಜೆಪಿ ನಗರದಲ್ಲಿ ಶಾಸ್ತ್ರಿ ಒಂದು ಕೋಟಿ ರೂ ಬೆಲೆಯ ಬಂಗಲೆ ಕಟ್ಟಿಸಿದ್ದಾನೆಂದರೆ ಈ ದಂಧೆಯಲ್ಲಿ ಗಳಿಸಿರುವ ಹಣ ಎಷ್ಟಿರಬಹುದೆಂದು ಯೋಚಿಸಿ. ಇವರೊಂದಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ರಾಜಣ್ಣ ಎಂಬುವನೂ ಶಾಮೀಲಾಗಿದ್ದು ಇಡೀ ತಾಲ್ಲೂಕಿನ ಅಕ್ರಮ ಗ್ರಾನೈಟ್ ದಂಧೆಗೆ ಕೈಜೋಡಿಸಿದ್ದಾನೆ.



ಗಣಿ ಅಧಿಕಾರಿ ರಾಜಣ್ಣ

ಜೀವನ ಪರ್ಯಂತ ಜೈಲಿನಲ್ಲಿರಬೇಕಾದಷ್ಟು ಕಾಯ್ದೆ ಕಾನೂನುಗಳ ಉಲ್ಲಂಘನೆಗಳು ಇವರಿಂದ ಆಗಿವೆ.

ಕನಕಪುರ ಹಾಗೂ ಸಾತನೂರಿನಲ್ಲಿ ಡಿಕೆ ಬ್ರದರ್ಸ್ ಕಟ್ಟಿರುವ ಅಕ್ರಮ ಗ್ರಾನೈಟ್ ದಂಧೆ ಹಾಗೂ ಗೂಂಡಾ ರಾಜಕೀಯದಲ್ಲಿ ಕೊಕ್ಕರೆ ಹೊಸಳ್ಳಿ ರಾಜೇಂದ್ರ, ಕೊತಗಳೆ ಲೋಕಿ, ಸಂತೆ ಕೋಡಳ್ಳಿ ಲೋಕೇಶ್, ಮಳಗಾಳು ಕಾಂತ, ಎಂಎಲ್‌ಸಿ ರವಿ, ಚಿಕ್ಕೊಂಡಹಳ್ಳಿ ವಿಶ್ವನಾಥನಂತವರಿದ್ದಾರೆ. ಇಡೀ ಕನಕಪುರ ತಾಲ್ಲೂಕನ್ನು ಜಹಗೀರೇನೋ ಎಂಬಂತೆ ಆಳುತ್ತಾ ಬಂದಿರುವ ಡಿಕೆ ಬ್ರದರ್ಸ್ ಲೀಸು, ಪರ್ಮಿಟ್ಟು, ರಾಯಲ್ಟಿ, ಲೋಡಿಂಗ್.... ಹೀಗೆ ಎಲ್ಲದರಲ್ಲೂ ಗೂಂಡಾಗಿರಿ ನಡೆಸುತ್ತಾ ಹಫ್ತಾ ವಸೂಲಿ ಮಾಡಿಕೊಂಡು ಬಲಿಷ್ಠರಾಗಿದ್ದಾರೆ.

ಇಟಲಿ,ಚೀನಾ, ಥೈವಾನ್, ಜರ್ಮನಿ ದೇಶಗಳಿಗೆಲ್ಲಾ ಕನಕಪುರದ ಗ್ರಾನೈಟ್ ಕಲ್ಲುಗಳು ರಫ್ತಾಗುತ್ತಿದ್ದು ಡಿಕೆಶಿಯ ಖಜಾನೆ ಭರ್ತಿ ಮಾಡಿವೆ. ಈಗಲೂ ಪ್ರತಿ ದಿನ ಕನಿಷ್ಟ ನಲವತ್ತು ಲೋಡಿನಷ್ಟು ಕಲ್ಲುಗಳು ಅಕ್ರಮವಾಗಿ ಬನ್ನೇರುಘಟ್ಟದಲ್ಲಿರುವ ಫ್ಯಾಕ್ಟರಿಗಳಿಗೆ ಸಾಗಾಣಿಕೆಯಾಗುತ್ತಿದೆ. ಇವರ್‍ಯಾರೂ ಸೇಲ್ಸ್ ಟ್ಯಾಕ್ಸ್ ಕಟ್ಟುವುದಿಲ್ಲ. ಒಂದಕ್ಕೂ ನೆಟ್ಟಗೆ ಪರ್ಮಿಟ್ ಇರಲ್ಲ.

ಡಿಕೆಶಿಯ ಈ ಎಲ್ಲಾ ಅಕ್ರಮ ದಂಧೆಗಳ ಬಗ್ಗೆ ವಿವರವಾದ ತನಿಖೆಯಾಗಬೇಕು ನಿಜ. ಇದರ ವಿರುದ್ಧ ಅಚ್ಚಲು ಶಿವರಾಜ್, ದುಂತೂರು ವಿಶ್ವನಾಥ್ ಮುಂತಾದವರು ಹಲವಾರು ವರ್ಷಗಳಿಂದ ಹೋರಾಟ ನಡೆಸಿಕೊಂಡು ಬಂದಿದ್ದರು. ಈಗ ಎಲ್ಲದಕ್ಕೂ ಕಾಲ ಕೂಡಿ ಬಂದಂತೆ ಕಾಣುತ್ತಿದೆ.

ಸರ್ಕಾರ ಈಗ ನಡೆಸುತ್ತಿರುವ ಈ ದಾಳಿಗಳ ಹಿಂದೆ ವೈಯಕ್ತಿಕ ಸೇಡಿನ ಕಾರಣವಿರುವುದು ಒಂದು ಮಟ್ಟಿಗೆ ನಿಜ. ಆದರೆ ಡಿಕೆಶಿ ಎಲ್ಲಾ ಕಾಯ್ದೆ-ಕಾನೂನು ಉಲ್ಲಂಘಿಸಿ ಗ್ರಾನೈಟ್ ಕಳ್ಳತನ ಮಾಡುತ್ತಿರುವುದೂ ನಿಜವಾಗಿದೆ.

ಕುಮಾರಸ್ವಾಮಿ ಸರ್ಕಾರ ಈಗ ತನಿಖೆಯನ್ನಾದರೂ ನಿಷ್ಪಕ್ಷಪಾತವಾಗಿ ನಡೆಸಲಿ. ಎಲ್ಲಾ ತಪ್ಪಿತಸ್ಥರಿಗೂ ಶಿಕ್ಷೆಯಾಗುವಂತೆ ನೋಡಿಕೊಳ್ಳಲಿ. ■

ಕಾಮ್ ಚೋರ್ ಸೂರಿ

ಡಿ.ಕೆ. ಶಿವಕುಮಾರ್ ಸಾತನೂರಿನ ಶಾಸಕನಾಗಿದ್ದರೂ ಇಡೀ ಕನಕಪುರ ತಾಲ್ಲೂಕಿನಲ್ಲಿ ಪಾಳೆಗಾರನಂತೆ ಮೆರೆದವನು ಅವನ ತಮ್ಮ ಡಿ.ಕೆ. ಸೂರಿ ಅಲಿಯಾಸ್ ಸುರೇಶ್.

ಗ್ರಾನೈಟ್ ಕಲ್ಲುಗಳ ಕಳ್ಳ ಸಾಗಾಣಿಕೆಯಿಂದ ಡಿಕೆ ಬ್ರದರ್ಸ್ ನೂರಾರು ಕೋಟಿ ಲೂಟಿ ಮಾಡಿದ ಮೇಲೂ ಈ ಡಿ.ಕೆ. ಸೂರಿ ಚಿಲ್ಲರೆ ಕೆಲಸ ಬಿಟ್ಟಿರಲಿಲ್ಲ. ಬರ ಪರಿಹಾರ ಕಾಮಗಾರಿಯಲ್ಲಿ ಕೆಲಸವನ್ನೇ ಮಾಡಿಸದೆ ಹಣ ಕದ್ದಿದ್ದು ಇವನ ಚಾಳಿಗಳಲ್ಲೊಂದು. ವಿಶ್ವಬ್ಯಾಂಕ್ ನೆರವಿನ ಜಲಾನಯನ ಹಾಗೂ ಕೆರೆ ಹೂಳು ತೆಗೆಸುವ ಯೋಜನೆಯಡಿ ಸಾತನೂರು ಕ್ಷೇತ್ರದ ಕೆರೆಗಳ ಹೂಳು ತೆಗೆಸುವ ಗುತ್ತಿಗೆಗಳನ್ನು ಬೇನಾಮಿ ಹೆಸರಲ್ಲಿ ಗಿಟ್ಟಿಸುತ್ತಿದ್ದ ಸೂರಿ ಲಕ್ಷಾಂತರ ರೂಪಾಯಿ ನುಂಗಿ ಹಾಕಿದ್ದಾನೆ. ಹಳ್ಳಿಗಳ ಬಡ ರೈತ ಕೂಲಿಗಳಿಗೆ ಉದ್ಯೋಗ ನೀಡುವ ಬದಲಿಗೆ ಜೆಸಿಬಿ ಯಂತ್ರ ತರಿಸಿ ಕೆರೆಗಳಲ್ಲಿ ಒಂದಿಷ್ಟು ಹೂಳು ಮಣ್ಣು ಬಗೆಸಿ ಪೂರ್ತಿ ಬಿಲ್ ಎತ್ತಿಕೊಳ್ಳುತ್ತಿದ್ದ ಈ ಸೂರಿ.



ಸೂರಿ


ಗೂಂಡಾ ಪಡೆಯಿಟ್ಟುಕೊಂಡು ತಿರುಗುವುದು, ಹಳ್ಳಿ ಹಳ್ಳಿಗಳಲ್ಲೂ ಜನರನ್ನು ವಿಭಜಿಸಿ ಹೊಡೆದಾಟಕ್ಕೆ ಹಚ್ಚುವುದು, ಸರ್ಕಾರಿ ಅಧಿಕಾರಿಗಳು, ಪೋಲೀಸರನ್ನು ನಾಯಿ ನರಿಗಳಂತೆ ಗದರಿಸುವುದು ಇವನ ದಿನಚರಿಯಾಗಿತ್ತು.

ಡಿಕೆ ಬ್ರದರ್ಸ್ ಸಾತನೂರಿನಲ್ಲಿ ಕಟ್ಟಿಕೊಂಡಿದ್ದ ಇಂತಹ ಪಾಳೆಗಾರಿಕೆ ಸಾಮ್ರಾಜ್ಯ ಈಗ ಕುಸಿದು ಬೀಳುತ್ತಿದೆ. ಈಗಿನ ಸರ್ಕಾರ ಕೇವಲ ಅಕ್ರಮ ಗ್ರಾನೈಟ್ ಕ್ವಾರಿಗಳ ಬಗ್ಗೆ ಮಾತ್ರವಲ್ಲ; ಸೂರಿ ನಡೆಸಿರುವ ಅಕ್ರಮ ಕಾಮಗಾರಿಗಳು, ಸೂರಿಯ ಬಂಟರ ವಶದಲ್ಲಿರುವ ಕೆರೆಗಳ ಅಕ್ರಮ ಮೀನು ಹರಾಜು ಹಕ್ಕುಗಳ ಬಗ್ಗೆಯೂ ಕೂಲಂಕಶ ತನಿಖೆಮಾಡಿಸಬೇಕಿದೆ. ಈ ಮೂಲಕ ಡಿಕೆ ಬ್ರದರ್ಸ್ ತಲೆಗೆ ತುಂಬಿರುವ ಹೂಳು ತೆಗೆಯಬೇಕಿದೆ.

ಬಿಎಸ್‌ಪಿ ಮುನಿಯಪ್ಪನ ಭಯ

ಕರ್ನಾಟಕದ ಎಲ್ಲೆಡೆ ಇರುವಂತೆ ಸಾತನೂರಿನಲ್ಲೂ ದಲಿತರ ಓಟುಗಳು ಮೊದಲಿಂದಲೂ ಕಾಂಗ್ರೆಸ್‌ಗೆ ಮೀಸಲಾಗಿದ್ದವು. ಆದರೆ ಬಹುಜನ ಸಮಾಜ ಪಾರ್ಟಿಯಿಂದ ಯಾವಾಗ ಮಾರಸಂದ್ರ ಮುನಿಯಪ್ಪ ಅಖಾಡಕ್ಕಿಳಿದರೋ 2004 ರ ಅಸೆಂಬ್ಲಿ ಎಲೆಕ್ಷನ್ ದೃಶ್ಯವೇ ಬದಲಾಗಿ ಹೋಗಿತ್ತು. ಅದುವರೆಗೂ ದಲಿತರನ್ನು ತನ್ನ ಓಟ್‌ಬ್ಯಾಂಕ್ ರಾಜಕೀಯಕ್ಕೆ ಮಾತ್ರ ಬಳಸಿಕೊಂಡು ಮೆರೆಯುತ್ತಿದ್ದ ಡಿಕೆಗೆ ಮುನಿಯಪ್ಪ ಬಿಸಿ ಮುಟ್ಟಿಸಿದ್ದರು. ಹಳ್ಳಿ ಹಳ್ಳಿಗಳಲ್ಲಿ ಸುತ್ತಿ ಸಂಘಟನೆ ಮಾಡಿದ ಮುನಿಯಪ್ಪ ಡಿಕೆಗೆ ಗೆಲುವು ಕಷ್ಟ ಎಂಬ ಪರಿಸ್ಥಿತಿ ನಿರ್ಮಿಸಿಬಿಟ್ಟಿದ್ದರು.

ಅಷ್ಟೇ ಅಲ್ಲ ಹೆಚ್ಚೂಕಡಿಮೆ ಹತ್ತು ಸಾವಿರ ಓಟು ಪಡೆದು ಡಿಕೆ ಪಾಳಯದಲ್ಲಿ ನಡುಕ ಸೃಷ್ಟಿಸಿದ್ದರು. ಸಾತನೂರಿನಲ್ಲಿ ಡಿಕೆ ಬ್ರದರ್ಸ್ ಪಾಳೆಗಾರಿಕೆಗೆ ಪೆಟ್ಟು ಕೊಟ್ಟವರಲ್ಲಿ ಬಿಎಸ್‌ಪಿಯ ಪಾತ್ರವೂ ದೊಡ್ಡದಿದೆ.



ಚೆಡ್ಡಿಗಳನ್ನು ಉರಿಸಿದ ಅಮಿರ್ ಖಾನ್

ಹಿಂದಿ ನಟ ಅಮಿರ್ ಖಾನ್ ನರ್ಮದಾ ಬಚಾವೊ ಆಂದೋಲನದವರ ನಿರಶನದಲ್ಲಿ ಭಾಗವಹಿಸಿದ್ದು ನಿಮಗೂ ಗೊತ್ತಾಗಿರಬೇಕಲ್ಲ.

ಸರ್ದಾರ್ ಸರೋವರ ಡ್ಯಾಂ ಬೇಕಿತ್ತೆ, ಬೇಡವೇ ಎಂಬುದಕ್ಕಿಂತಾ ನಿರಾಶ್ರಿತರಾದವರಿಗೆ ಸೂಕ್ತ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕೆಂಬುದು ಅಮಿರ್ ಖಾನ್‌ನ ಕಾಳಜಿಯಾಗಿದೆ. ಇದರಿಂದ ಚೆಡ್ಡಿಗಳಿಗೆ ಅದೇನು ಉರಿ ಹತ್ತಿತೋ ಏನೋ ಕಳೆದ ವಾರ ಗುಜರಾತಿನಲ್ಲಿ ಅಮಿರ್ ಖಾನ್ ಸಿನಿಮಾ ಪ್ರದರ್ಶನಕ್ಕೆ ತಡೆಯೊಡ್ಡಿದ್ದಾರೆ. ಅಂದರೆ, ಇಂಥಾ ಯೋಜನೆಗಳಿಗೆ ಬಲಿಯಾಗುವವರ ಪರವಾಗಿ ಯಾರಾದರೂ ದನಿ ಎತ್ತಿದರೆ ಜೋಕೆ ಎಂಬ ನಿಲುವು ಬಿಜೆಪಿಗಳದ್ದು ಎಂದಾಯಿತು.


ಅದಿರಲಿ, ಅಮಿರ್ ಖಾನ್ ಬಗ್ಗೆ ಅಸಲಿ ಹಾಸ್ಯಾಸ್ಪದ ಪ್ರತಿಕ್ರಿಯೆ ವ್ಯಕ್ತವಾಗಿರುವುದು ಕರ್ನಾಟಕದ ಪತ್ರಕರ್ತರಲ್ಲಿ. ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಒಂದು ಅಂಕಣ ಬರೆಯುವ ಪ್ರತಾಪ ಸಿಮ್ಹ ಎಂಬ ಬಾಲಕ "ಅಮಿರ್ ಖಾನ್ ಕಾಶ್ಮೀರಿ ನಿರಾಶ್ರಿತ ಪಂಡಿತರ ಬಗ್ಗೆ ಯಾಕೆ ಮಾತಾಡುತ್ತಿಲ್ಲ, ತಾನೇ ಡೈವೋರ್ಸ್ ಕೊಟ್ಟಿರುವ ಮೊದಲ ಹೆಂಡತಿ ಮಕ್ಕಳಿಗೆ ಯಾಕೆ ಪುನರ್ವಸತಿ ಕಲ್ಪಿಸಿಲ್ಲ" ಎಂದೆಲ್ಲಾ ಬಾಲಿಶತನದ ಮಾತಾಡಿದ್ದಾನೆ. ಈ ಉಗ್ರಪ್ರತಾಪಿಯ ಇಂಗಿತ ಏನೆಂದರೆ ಮುಸಲ್ಮಾನ್‌ನಾಗಿರುವ ಅಮಿರ್ ಖಾನ್ ಇಂಥ ವಿಷಯಗಳಲ್ಲೆಲ್ಲಾ ಬಾಯಿ ಹಾಕಬಾರದು ಎಂಬುದಷ್ಟೇ. ಅಷ್ಟೇ ಅಲ್ಲ, ಈ ಮೊದಲೆಲ್ಲಾ ಇಂಥ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳದಿದ್ದ ಅಮಿರ್ ಖಾನ್ ಈಗೇಕೆ ಮಾತನಾಡುತ್ತಿದ್ದಾನೆ ಎಂಬ ಕೊಂಕು ಪ್ರಶ್ನೆಯನ್ನು ಈ ಚೆಡ್ಡಿ ಪತ್ರಕರ್ತರು ಕೇಳುತ್ತಿದ್ದಾರೆ. ಇದೇ ಪ್ರಶ್ನೆಯನ್ನು ಕೊಂಚ ಬದಲಾಯಿಸಿ ಈ ಮೊದಲು ರಾಮ ಮಂದಿರ, ಬಾಬಾ ಬುಡನ್‌ಗಿರಿ ಬಗ್ಗೆ ಮಾತೇ ಆಡಿರದಿದ್ದ ಸಂಘ ಪರಿವಾರ ಈಗ್ಯಾಕೆ ಆ ವಿವಾದ ಹುಟ್ಟು ಹಾಕಿತೆಂದೂ ಕೇಳಬಹುದಲ್ಲವೆ?

ಈ ಕುಹಕಿಗಳ ಮಾತು ಬಿಡಿ, ಅಮಿರ್ ಖಾನ್ ಬಗ್ಗೆ ನಿಜವಾದ ತಾತ್ವಿಕ ಜಗಳವನ್ನು ಅರುಂಧತಿ ರಾಯ್ ತರದವರು ತೆಗೆದಿದ್ದಾರೆ. "ಈ ದೇಶದ ನದಿ, ಕಾಡು ಪರಿಸರದ ಬಗ್ಗೆ ಅಮಿರ್ ಖಾನ್‌ಗೆ ನಿಜವಾದ ಕಾಳಜಿ ಇರುವುದೇ ಆದರೆ ಕೇರಳದಲ್ಲಿ ಪ್ಲಾಚಿಮಡಾದ ಪರಿಸರವನ್ನೇ ನಾಶ ಮಾಡುತ್ತಿರುವ ಕೋಕಾ ಕೋಲಾಗೆ ಅಮಿರ್ ಏಕೆ ಜಾಹೀರಾತು ಮಾಡೆಲ್ ಆಗಿದ್ದಾನೆ" ಎಂದು ಕೇಳಿದ್ದಾರೆ ಅರುಂಧತಿ.

ಈ ಅಮಿರ್ ಖಾನ್ ಎಂಥಾ ಮುಗ್ಧ ಹಾಗೂ ವಿನಯವಂತನೆಂದರೆ "ಈ ವಿಷಯ ನನಗೆ ಗೊತ್ತಿರಲಿಲ್ಲ, ಏನೂಂತ ಪೂರಾ ತಿಳಿದುಕೊಂಡು ತೀರ್ಮಾನ ಮಾಡುತ್ತೇನೆ" ಎಂದಿದ್ದಾನೆ.

ಲಗಾನ್, ರಂಗ್‌ದೆ ಬಸಂತಿ, ಮಂಗಲ್ ಪಾಂಡೆಯಂತಹ ಭಾರತದ ಜನಪರ ಕಾಳಜಿಯ ಸಿನಿಮಾ ತೆಗೆದಿರುವ ಅಮಿರ್ ಖಾನ್ ದೇಶಭಕ್ತಿಯ ಪಾಠಗಳನ್ನು ಚಡ್ಡಿಗಳಿಂದಂತೂ ಕಲಿಯಬೇಕಿಲ್ಲ, ಆದರೆ ಪ್ರಗತಿಪರರಿಂದ ಅವನು ಕಲಿಯಬೇಕಾದ್ದು ಬೇಕಾದಷ್ಟಿದೆ. ಅದಕ್ಕೆ ಅಮಿರ್ ಸಿದ್ಧನಾಗುತ್ತಿರುವುದಂತೂ ಖುಷಿಯ ವಿಚಾರವೇ.

ರಾಜಕುಮಾರುನ್ನ ನಾಕ್ಕೈದು ಸತಿ ನೋಡಿದ್ದಿನಿ ಕಂಡ್ಯ!



ಸಾವಿನ ಮನೆಯಲ್ಲಿ ದುಃಖದ ಕಟ್ಟೆಯೊಡೆದು ಎಲ್ಲಾ ಖಾಲಿಯಾದ ನಂತರ ನಿಧಾನಕ್ಕೆ, ಸಾವಿಗೆ ತುತ್ತಾದವನ ಹೊಸ ಬದುಕಿಗೆ ಸ್ಫೂರ್ತಿಯಾಗುವಂತಹ ಸ್ಥಿತಿ ಆ ಹೋಟೆಲಿನಲ್ಲೂ ಕಾಣಿಸಿಕೊಳ್ಳತೊಡಗಿತ್ತು. ವಾರವೆಲ್ಲಾ ಅಣ್ಣನವರ ಗುಣಗಾನ ಮಾಡಿ ಮಾಡಿ ಅವರ ಸಿನಿಮಾದ ತುಣುಕುಗಳನ್ನು ನೆನೆಸಿ ಸಾಕಾದರೂ ಬೇಸರವಾಗಿರಲಿಲ್ಲ. ಅದೇ ಹುರುಪಿನಲ್ಲಿದ್ದ ಸೀರ,

"ರಾಜಕುಮಾರನ ತಿಥಿಗಾರ ಹೋಗಿ ಬರಬೇಕಾಗಿತ್ತು ಕಂಡ್ರ ಉಗ್ರಿ" ಎಂದ.

"ತಿಥಿಗಿಂತ ಮಕ ನೋಡಕ್ಕೆ ಹೋಗದೆ ಮುಖ್ಯ ಕಣೊ ಮಾವ. ನೀನು ರಾಜಕುಮಾರ ಸತ್ತಾಗ ಸುಮ್ಮನಿದ್ದೋನು ಈಗ ತಿಥಿಗೋಗಬೇಕಾಗಿತ್ತು ಅಂತಿ. ಎಷ್ಟೇ ಆಗಲಿ ಈ ಸುತ್ತಲ್ಲಿ ತಿಥಿ ಊಟ ಉಂಡೋನಲವೆ ನೀನು" ಎಂದು ಉಗ್ರಿ ಮೂದಲಿಸಿದ.

"ರಾಜಕುಮಾರನ ಸಾವುನ ಅಂಗೆ ಅದ್ವಾನ ಮಾಡಿದೋರು ಇನ್ನ ತಿಥಿ ಯಂಗ ಮಾಡಿದ್ರೊ ಕಾಣೆ" ಎಂದ ಕಾಳಮಾವ.

"ತಿಥಿ ಮಾಡಿದೋರು ಅವುನ ಮಕ್ಕಳು. ಚನ್ನಾಗೆ ಮಾಡಿದರಂತೆ. ಅವುನ್ನ ಕುಮಾರಸ್ವಾಮಿಯಂಗೆ ಅನ್ನಕಂಡ್ರ ನೀನು?" ಎಂದ ಉಗ್ರಿ.

"ಕುಮಾರಸ್ವಾಮಿಯೇಳು, ಆಡೋವುದ್ರಿಗೆ ಮದುವೆ ಮಾಡಿದ್ರೆ ಮಾಡೋ ಛಾಕ್ಕೆ ಮಣ್ಣಾಡಿದರಂತೆ ಅಂಗಾಯ್ತು ಇವುನು ಕರ್ನಾಟಕದ ಮುಖ್ಯಮಂತ್ರಿಯಾಗಿ" ಎಂದ ಸೀರ.

"ಅವುರಪ್ಪ ಹಿಂಗಿಂಗೆ ಮಾಡು ಅಂತ ಹೇಳಿಕೊಡಬೇಕಾಗಿತ್ತು," ಎಂದಳು ಜುಮ್ಮಿ.

"ಅವ್ರುನೇಳಿದಂಗೇ ಆಲವೇನೆ ಇವುನು ಮಾಡಿರದು?"

"ನಿಜವೇನ್ನ?"

"ಊ ಮತ್ತೆ. ಅವುನಿಗ್ಯಾವ ಅನುಭವಿದ್ದತೂ. ಅವರಪ್ಪನಿಗೆ ತಲಕೊಳ್ಳಿ ಹಿಡದು ತಿಥಿ ಮಾಡಿ ತಲೆಬೋಳಿಸಿಗಂಡಿದ್ರೆ, ರಾಜಕುಮಾರ ತೀರಿಕಂಡಾಗ ಜನ ನನ್ನಿಸಿಗಳಂಗೆ ಮಾಡಿರನು. ಯಾವಾಗ ಅಂತ ಅನುಭವ ಆಗಲಿಲ್ಲವೊ ಅದ್ನೆ ಹಿಂಗೆ ಮಾಡಿ, ಮೆಣಸಿಕ್ಕಂಡು ಕುಂತಗಂಡ. ಇದರಲ್ಲಿ ದ್ಯಾವೇಗೌಡನ ಕೈವಾಡಿಲ್ಲ ಅಂತ ಯಂಗೇಳ್ತೀ?"

"ಯಲ್ಲಾ ಕೈ ಮೀರಿದಾಗ ದ್ಯಾವೇಗೌಡ ತಾನೆ ಏನು ಮಾಡಾಕಾದತ್ತ ಉಗ್ರಿ?" ಎಂದ ಕಾಳಮಾವ.

"ಅಂಗಲ್ಲ ಕಣ ಮಾವ ನಾನೇಳ್ತಯಿರದು. ಕುಮಾರಸ್ವಾಮಿಗೆ ಯಾವ ಅನುಭವನೂ ಇಲ್ಲ ಅಂತ ಇಡೀ ದೇಸಕೆ ಗೊತ್ತದೆ. ಅಂತೆದ್ರುಲಿ ಗೊತ್ತಿರೋರ ಮುಂದಿಟ್ಕಗಂಡು ವ್ಯವಹಾರ ಮಾಡಬವುದಿತ್ತು."

"ಏನು ಬ್ಯಾಡ ಕಣೊ ಉಗ್ರಿ. ಅಪ್ಪ ಮಕ್ಕಳಿಬ್ಬರೂ ಬೆಂಗಳೂರು ಮೈಸೂರು ಕಾರಿಡಾರ್ ರಸ್ತೆಗೆ ಅಂತ ಒಡಾಡಿದರಲ್ಲ ಅಷ್ಟು ಇಂಟರೆಸ್ಟು ಕೊಟ್ಟಿದ್ರು ಸಾಕಾಗಿತ್ತು" ಎಂದ ವಾಟಿಸ್ಸೆ.

"ಈಗಾಯ್ತಲ್ಲ ಮುಂದಿನ ಮಾತಾಡಿರ್ಲ. ಅದ್ನೆ ಏನು ಕೆದುಕ್ತ ಕುಂತಿದ್ದೀರಿ" ಎಂದ ಕಾಳಮಾವ.

"ಅಂಗಲ್ಲ ದ್ವಡಪ್ಪ, ಗುಂಡೂರಾಯ ಮುಖ್ಯಮಂತ್ರಿಯಾಗಿದ್ದಾಗ ದೇವರಾಜ ಅರಸು ತೀರಿಕಂಡ. ಆಗ ಗುಂಡೂರಾಯ ಎಷ್ಟು ಚನ್ನಾಗಿ ಆದೂ ಜವಾಬ್ದಾರಿ ತಗಂಡು ಮಾಡಿದ ಗೊತ್ತೆ? ಆಗ್ಲು ಇದೇತರ ಅರಸುಗೊ, ಗುಂಡೂರಾಯನಿಗೂ ಆಯ್ತಿರಲಿಲ್ಲ" ಎಂದ ವಾಟಿಸ್ಸೆ.

"ಅಂಗರೆ ರಾಜಕುಮಾರನಿಗೂ ಕುಮಾರಸ್ವಾಮಿಗೂ ಆಯ್ತಿರಲಿಲ್ಲವೇನ್ನ?" ಎಂದಳು ಜುಮ್ಮಿ.

"ಇಲ್ಲ ಕಣಕ್ಕ, ಇವುನು ಸಿನುಮಾ ಡಿಸ್‌ಟ್ರಿಬ್ಯೂಟ್ ಮಾಡತಿದ್ನ ಪಾರ್ವತಮ್ಮನೂ ಮಾಡತಿದ್ರು. ಅಂಗಾಗಿ ಇಬ್ರಿಗೂ ಕಾಂಟೇಶನ್ ಇತ್ತಂತೆ."

"ಅಂಗರೆ ಕುಮಾರಸ್ವಾಮಿ ಸಿನುಮ ಇದು ಮಾಡತಿದ್ನೆ?"

"ಊ. ವಳೆ ನರಸೀಪುರದಲ್ಲಿ ಟಾಕೀಸು ಆದೆ. ಚೀಪ್‌ರೇಟಿಗೆ ಸಿನುಮ ತಗಂಡು ರಿಲೀಜ್ ಮಾಡಿಕಂಡು ದುಡ್ಡು ಮಾಡಿಕಂಡು ಪ್ರೊಡ್ಯೂಸರಾದ. ಯಾವಾಗ ಅವುನೂ ಸಿನುಮಾ ಫೀಲ್ಡಿಗೆ ಇಳುದ್ನೋ ಅವತ್ತಿಂದ ರಾಜಕುಮಾರ್ ಸಂಸ್ಥೆ ಮ್ಯಾಲೆ ಕಾಂಟೇಷನ್ ಸುರುವಾಗಿತ್ತಂತೆ. ಅಲ್ಲಿ ಜಗಳ ತಂದು ಅಣ್ಣಾವುರು ತೀರಿಕೊಂಡಾಗ ಸರಿಯಾದ ಯವಸ್ಥೆ ಮಾಡದೆ ನೆಗ್ಲೆಟ್ ಮಾಡಿ ಸೇಡು ತೀರಿಸಿಗಂಡನಂತೆ."

"ನೋಡೋ ವಾಟಿಸ್ಸೆ, ರಾಜಕುಮಾರನಿಗೆ ಕ್ಯಟ್ಟುದ್ದು ಮಾಡಿದೋನು ಯಾವನೂ ಉದ್ಧಾರಾಗಿಲ್ಲ. ಆ ಗುಂಡೂರಾಯನೂ ಇವುನಂಗೆ ಆಡಿದ. ಕಡಿಗೇನಾದ?" ಎಂದ ಉಗ್ರಿ.

"ಯಾರ ಮಾತ ನಿಜ ಅಂತ ನಂಬನಪ್ಪ? ವಸಿ ಜನ ಪೋಲೀಸ್‌ನೋರೆ ತಪ್ಪು ಮಾಡಿದ್ರು ಅಂತರೆ, ವಸಿ ಜನ ಆ ಶಿವುಕುಮಾರ್ ಹಿಂಗ್ಯಲ್ಲ ಮಾಡಿಸ್ದ ಅಂತರೆ, ಇನ್ನೊಸಿ ಜನ ಕುಮಾರಸ್ವಾಮಿಗೆ ಏನೂ ಗೊತ್ತಿಲ್ದೆ ಹಿಂಗಾಯ್ತು ಅಂತರೆ. ನಿಜ ಹೇಳೋ ಸೂಳೆ ಮಕ್ಕಳೆ ಇಲ್ಲ ಹೋಗು" ಎಂದು ಸೀರ ರೋಸಿದವನಂತೆ ಹೇಳಿತ್ತಿರುವಾಗ,

"ಈ ಸೂಳೆಮಗ ಮನೆ ಮಠ ಮರತೆ ಬುಟ್ಟ ಹೋಗತ್ತಗೆ. ಹಿಂಗೆ ಬದುಕದಕ್ಕಿಂತ ವಾಕರಬಟ್ಟೆ ಹೋಗಕ್ಕೇನಾಗ್ಯದೆ ಇವುನಿಗೆ" ಎಂದುಕೊಂಡು ಸಿದ್ದಮ್ಮ ಬಂದಳು.

"ಯಾಕೆ ಸಿದ್ದಮ್ಮ ಮಗನಿಗೆ ಸಾಪ ಹಾಕ್ತಿ?" ಎಂದಳು ಜುಮ್ಮಿ.

"ಇನ್ನೇನೆ ಮತ್ತೆ? ರಾಜಕುಮಾರ ತೀರಿಕಂಡಾಗಿಂದ ಮನೆಕಡಿಕೆ ಬಂದಿಲವಲ್ಲಾ, ಅಂತ ಪುಣಾತ್ಮ ಸಾಯದಕ್ಕಿಂತ ಇಂತ ನನ್ನ ಮಕ್ಕಳು ಹೋಗಿದ್ರೆ ಯದಿಗೆ ಕಲ್ಲಾಯ್ಕಂಡು ಸುಮ್ಮನಾಯ್ತಿದ್ದೊ ಅತ್ತಗೆ" ಎಂದಳು ಸಿದ್ದಮ್ಮ.

"ಬೆಂಗಳೂರಿಗೆ ಹೋಗಿದ್ರೆ ಸತ್ತೆ ಹೋಗನು. ಆದೇನೊ ಉಳಕಂಡವುನೆ. ಇಲ್ದಿದ್ರೆ ಪೋಲೀಸ್‌ನೋರ ಗುಂಡಿಗೆ ಇವುನು ಸಿಕ್ಕಿ ಸತ್ತಿರನು."

"ಅಂತ ರಾಜಕುಮಾರನೆ ಹೋದಮ್ಯಾಲೆ ಇಂತೋಇದ್ದು ಏನಾಗಬೇಕೇಳು?"

"ಮಗ ದುಡುದಾಕ್ತನೆ. ರಾಜಕುಮಾರ ಏನು ಕೊಡತಿದ್ನೆ ನಿನಗೆ?"



"ಏನು ಕೊಡದಬ್ಯಾಡ. ಆಲ್ಯವುನೆ ಅಂದಿದ್ರೆ ಸಾಕಿತ್ತು ಕಣೆ ತಾಯಿ. ಅಂತ ಪುಣ್ಯಾತ್ಮನಿಗೆ ಇಂತ ಸಾವು ಬರಬೇಕಾಗಿತ್ತೆ?"

"ವಳ್ಳೆ ಸಾವೆ ಬಂದದೆ ಕಣೆ. ಉಂಡು ಹಾಸಗೆ ಮ್ಯಾಲೆ ಮನಿಕಂಡೋನು ತಿರಗ ಎದ್ದಿಲ್ಲ. ಏಟು ಜನಕೆ ಅಂತ ಸಾವು ಬಂದತೇಳು?"

"ದೇವುರು ನನಿಗೂ ಅಂತದೊಂದು ಸಾವು ಕೊಡಲವ್ವ. ಸಾಕಾಯ್ತು ಕಣೆ ತಾಯಿ ಈ ಜಲ್ಮ. ಏಟು ಸತಿ ಸಾಯಕ್ಕೋದ್ರು ಸತ್ತಿಲ್ಲ ಈ ಜಲ್ಮ. ಯಮಧರ್ಮ ಮರತುಬುಟ್ಟ ನನ್ನ."

"ನಾನು ಒಂದು ಮಬೈಲ್ ಫೋನ್ ವಡದು ಜ್ಞಾಪುಸ್ತಿನಿ ಇರು ಸಿದ್ದಮ್ಮ. ನೀನ್ಯಾವುದ್ಕು ರಡಿಯಾಗು" ಎಂದ ವಾಟಿಸ್ಸೆ.

"ಯಾವಾಗ್ಲು ತಯಾರಾಗೆ ಇದ್ದಿನಿ ಕಂಡ್ಯ. ರಾಜಕುಮಾರನಂಥೋರೆ ಹೋದ ಮ್ಯಾಲೆ ಇನ್ನಿರಬಾರ್ದು"

"ರಾಜಕುಮಾರುನ್ನ ನೀನು ನೋಡಿದ್ದ ಸಿದ್ದಮ್ಮ."

"ನಾಕ್ಕೈದು ಸತಿ ನೋಡಿದ್ದೀನಿ ಕಂಡ್ಯ."

"ವಂಡ್ರುಫುಲ್. ಆದೆಲ್ಲಿ ನೋಡಿದ್ದೆ ಸಿದ್ದಮ್ಮ ನೀನೂ."

"ಒಂದು ಸತಿ ಮೈಸೂರಿಗೋಗಿದ್ದಾಗ ಸತಿಸಗತಿ ಅಂತ ಸಿನುಮ ನೋಡಿದೆ. ತಿರಗ ಇನ್ನೊಂದು ಸತಿ ಪುಡತಾಯಿ ಮದಿವಿಗೋಗಿದ್ದಾಗ ಮಲ್ಲಮ್ಮನ ಪವಾಡ ಅನ್ನೊ ಸಿನುಮ ತೋರಿದ ನಿಮ್ಮಾವ. ಒಂದು ಸತಿ ಈ ಉಗ್ರಿ ಕರಕಂಡೋಗಿ ಸೀನಿವಾಸ ಕಲ್ಯಾಣ ತೋರಿದ. ಆ ಬಸುರಾಜನ ಮದಿವಿಗೆ ಭದ್ರಾವತಿಗೋದಾಗ ಅದ್ಯಂತೆದಪ್ಪ ರಾಜ ನನ್ನ ರಾಜ ಅನ್ನೋ ಸಿನುಮ ನೋಡಿದೆ. ಆಗ್ಲೆ ಇಪ್ಪತ್ತೊರಸದ ಮ್ಯಾಲಾಯ್ತು ಕಂಡ್ಯ."

"ಥೂ ನಿನ್ನ, ನಾನೆಲ್ಲೊ ನಿಜವಾಗೇ ನೋಡಿದ್ದಿ ಅನ್ನಕಂಡೆ ಸಿದ್ದಮ್ಮಾ."

"ಅಂಗರೆ ಸಿನುಮದಲ್ಲಿ ಮಾಡಿರೋನು ನಿಜವಾದ ರಾಜಕುಮಾರಲವೇನ್ನ."

"ನಿಜವಾದ ರಾಜಕುಮಾರನೆ ಬುಡು. ಆದ್ರು ಕೇವಲ ನಾಕೇ ಸಿನುಮಕೆ ರಾಜಕುಮಾರನ ಅಭಿಮಾನಿ ಸಂಘದ ಅಧ್ಯಕ್ಷನಂಗೆ ಮಾತಾಡ್ತಿಯಲ್ಲಾ, ಇನ್ನೇನಾರ ಯಲ್ಲಾ ಸಿನುಮನು ನೋಡಿದ್ರೆ ನೀನಿನ್ನಂಗಾಡತಿದ್ದೆ?"

"ಮಯಿಸಾಸುರ, ಬಬ್ರುವಾನ, ಸತಿ ಸಾವಂತ್ರಿ ಇವುನ್ನಲ್ಲ ನೋಡಿದ್ದಿನಿ ಕಂಡ್ಯ. ಮೇಟ್ರು ಮನೆ ಟಿವಿಲಿ ಯಲ್ಲ ಬತ್ತವೆ. ಈ ಉಗ್ರಿ ವಳ್ಳೆ ಬುದ್ಧಿ ಕಲ್ತಿದ್ರೆ ಅವುನಂಗಾಗೋನು. ಏನು ಮಾಡ್ತಿಯೇಳು. ಯಾಕ್ಲ ಕಚ್ಚೆ ನಾರತಿ ಅಂದ್ರೆ ನಾನಿರೊ ಜಾಗವೆ ಅಂತೆದು ಅಂತಂತೆ. ಈ ಹಾಳೂರಲ್ಲಿ ಇದ್ದಕಂಡು ಈ ನನ್ನ ಮಗ ಏನೂ ಆಗದಂಗೆ ಹಾಳಾದ" ಎಂದಳು ಸಿದ್ದವ್ವ. ಆಗ ಪಕಾರೆಂದು ನಗಾಡಿದ ವಾಟಿಸ್ಸೆ,

"ಓಹೊ, ಸಿದ್ದವ್ವನ ಕಣ್ಣೀರು ಯಾಕೆ ಅಂತ ಈಗ ಗೊತ್ತಾಯ್ತು. ಈ ಉಗ್ರಿ ಅಣ್ಣಾವರ ತರ ಆಕ್ಟರಾಗಲಿಲ್ಲ ಆಲವೇನೊ ಉಗ್ರಿ."

"ಅಂಗಲ್ಲ ಕಣೊ ನಮ್ಮವ್ವನ ಸಮಸ್ಯೆ. ಅವುಳು ಎಂ.ವಿ ರಾಜಮ್ಮ ಅಥವಾ ಪಂಡರಿಬಾಯಿತರ ಅವುಳೆ. ನಾನು ರಾಜಕುಮಾರನಂಗೆ ಅಮ್ಮ ಅಮ್ಮ ಅಂತ ಸೇವೆ ಮಾಡಬೇಕಾಗಿತ್ತು ಅಷ್ಟೆಯಾ."

"ಸಿದ್ದಮ್ಮ ಫೀಲ್ ಮಾಡಿಕೊ ಬ್ಯಾಡ. ಸಿನುಮನೆ ಬ್ಯಾರೆ ರಿಯಲ್ ಲೈಫೆ ಬ್ಯಾರೆ. ನೀನು ಪಂಡರಿಬಾಯಲ್ಲ, ಅವುನು ರಾಜಕುಮಾರಲ್ಲ, ಅವುನು ಉಗ್ರಿ ನೀನು ಸಿದ್ದಮ್ಮ ಅಂಡರ್‌ಸ್ಟ್ಯಾಂಡ್?"

"ಏನಂಟ್ರುಸ್ತಿಲ ನೀನು? ನಿನ್ನಂಥೋರಿಂದ್ಲೆಯ ಅವುನಂಗಾದುದ್ದು. ಹುಟ್ಟಿದ ಮ್ಯಾಲೆ ಮದುವೆ, ಮಕ್ಕಳು, ಸಂಸಾರ ಅನ್ನದ್ನೆ ಮರುತು ಕುಂತವುನೆ. ಸನ್ನೆಸಿಯಂಗೆ. ಬಾರ್ಲ ಎದ್ದು" ಎಂದು ಸಿದ್ದಮ್ಮ ಮನೆಯವರೆಗೂ ಮಾತನಾಡುತ್ತ ಹೊರಟಳು.

–ಬಿ. ಚಂದ್ರೇಗೌಡ

Zero Hour

ಮುನ್ನಿ

1. "ಈ ಇಲಾಖೆಯಲ್ಲಿ ಲಂಚದ ರೂಪದಲ್ಲಿ ಮಣ್ಣುಸಿಕ್ಕರೂ ತಿನ್ನುವ ಅಧಿಕಾರಿಗಳಿದ್ದಾರೆ..."
ಈ ಅಣಿಮುತ್ತು ಉದುರಿಸಿದ ಮಂತ್ರಿವರ್ಯನಾರು?
a) 'ಕಾಡಿನ ರಹಸ್ಯ' ಬಲ್ಲ ಚನ್ನಿಗ
b) 'ರೈಲು ಬಿಡುವ' ಬಸ್ ಮಂತ್ರಿ ಚಲುವ
c) 'ಆದಾಯ ಎಂದರೆ ಕಂದಾಯ' ಎನ್ನುವ ಜಗದೀಶ್ ಶೆಟ್ಟರ್
d) 'ಹೆಂಡದ ಹೊಳೆಯಿಂದ ಸಮಾಜ ಕಲ್ಯಾಣ' ಎನ್ನುವ ಬಾಲಚಂದ್ರ ಜಾರಕಿಹೊಳಿ

2. ಯಾರು, ಯಾರಿಗೆ, ಯಾವಾಗ ಹೇಳಿದರು?
"ಪ್ರಭುಗಳೇ, ತಾವು ಅರಮನೆಯಿಂದ ನಿರ್ಗಮಿಸಕೂಡದು. ತಾವು ಮತ್ತೆ ರಾಜಪೀಠ ಏರುವವರೆಗೂ ನನ್ನ ತಲೆ ಮೇಲಿರುವ ನಿಮ್ಮೀ ಪಾದರಕ್ಷೆಗಳನ್ನು ಕೆಳಗಿಳಿಸಲಾರೆ..."

3. ಯಾರು, ಯಾರಿಗೆ, ಯಾವಾಗ ಹೇಳಿದರು?
"ಪ್ರಜೆಗಳೇ ಪಾದಚಾರಿ ಮಾರ್ಗಗಳು, ರಾಜಮಾರ್ಗಗಳು ಹದಗೆಟ್ಟಿವೆ ಎಂದರೆ ನಾನೇನು ಮಾಡುವುದಕ್ಕಾಗುತ್ತೆ, ಕುದುರೆಗಳ ಮೇಲೆ ಸಂಚರಿಸಿ, ಎಲ್ಲ ಸರಿ ಹೋಗುತ್ತದೆ!"

4. ಶಿವಮೊಗ್ಗದ ಬಾಂಬ್ ಕೃಷ್ಣಮೂರ್ತಿ, ಬೆಂಗಳೂರಿನ ಬಾಂಬ್ ನಾಗ ಇವರನ್ನು ಕುರಿತ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ?
a) ಇಬ್ಬರೂ ಜೆಡಿ(ಎಸ್)
b) ಒಬ್ಬ ಕಾಂಗ್ರೆಸ್, ಇನ್ನೊಬ್ಬ ಜೆಡಿ(ಎಸ್)
c) ಇಬ್ಬರೂ ಹೆಂಡ್ತಿಯರನ್ನು ಮುಂದೆ ಬಿಟ್ಟು ಪಾಲಿಟಿಕ್ಸ್ ಮಾಡುವ (ಹುಸಿ) ಬಾಂಬ್‌ಗಳು!
d) a ಮತ್ತು c ಎರಡೂ ಸರಿ

5. ತನ್ನ ತೊಡೆಗೆ ತಾನೇ ಗುಂಡು ಹೊಡೆದುಕೊಂಡ 'ಧೀರ' ರಾಜಕಾರಣಿ ಯಾರು?
a) ರವಿಕಾಂತ್ ಪಾಟೀಲ್
b) ಗುಂಡಪ್ಪ ವಕೀಲ
c) ಅನಂತಕುಮಾರ್ ಹೆಗಡೆ
d) ಡಿ.ಕೆ. ಶಿವಕುಮಾರ್


6. 'ಕೆಂಚಾಲೋ ಮಚ್ಚಾಲೋ' ಎನ್ನುವ ಅಪದ್ಧ ಹಾಡು ಹಾಡಿದವರು...
a) ಪ್ರೇಮ್
b) 'ಕನ್ನಡವೇ ಸತ್ಯ'ದ ಗಿರಾಕಿ
c) ಇಬ್ಬರ ಮಧ್ಯೆ ಜಗಳವಿದೆ!
d) ಏನ್ ಮಹಾನ್ ಬಿಡಿ; ಯಾವನಾದರೂ ಹಾಡಿಕೊಳ್ಳಲಿ!

ಉತ್ತರಗಳು
1. d
2. ಹೈಕೋರ್ಟ್ ಬಾಟ್ಲಿಂಗ್ ತೀರ್ಪು ಇತ್ತಾಗ ಸಿ.ಎಂ. ಸ್ಥಾನಕ್ಕೆ ರಾಜೀನಾಮೆ ನೀಡಿದ ರಾಮಕೃಷ್ಣ ಹೆಗಡೆಯ ಬೂಟುಗಳನ್ನು ತಲೆ ಮೇಲೆ ಇಟ್ಟುಕೊಂಡು ಈ ಮಾತನ್ನು ಹೇಳಿದ್ದು ನಾಚಿಕೆ, ಮಾನ, ಮರ್ಯಾದೆ ಮೂರೂ ಬಿಟ್ಟ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ.
3. "ಹುಬ್ಬಳ್ಳಿಯಲ್ಲಿ ರಸ್ತೆಗಳು ಕಿತ್ತುಹೋಗಿದ್ದು, ರಿಪೇರಿ ಮಾಡಿಸಿ" ಎಂದು ಮನವಿ ಮಾಡಿದ ಹುಬ್ಬಳ್ಳಿ ಜನರಿಗೆ ಅಂದಿನ ತಿಕ್ಕಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಕೊಟ್ಟ ವಿವರಣೆ.
4. d 5. b 6. d

ಮುಚ್ಚಳ ತೆರೆಯದ ವೈನ್ ಶೀಸೆ

ಒರಿದು ಹೊಸ ಪುಸ್ತಕ, ಇನ್ನೂ ಹಾಳೆಗಳನ್ನೇ ತೆರೆಯದಿರುವ ನಿಮ್ಮ ಮೆಚ್ಚಿನ ಪುಸ್ತಕ, ಹೊಸ ಹಾಳೆ, ಗೋಂದು, ಇಂಕು ಘಮಾದಿಸುವ ಪುಸ್ತಕ.... "ಹೊಸ ಪುಸ್ತಕ ನನ್ನ ಪಾಲಿಗೆ ಇನ್ನೂ ಕಾರ್ಕ್ ತೆಗೆಯದಿರುವ ವೈನ್ ಶೀಸೆ ಥರ" ಎಂದು ಫಾರ್‌ಸ್ಟರ್ ಹೇಳುತ್ತಾರೆ. ಪುಸ್ತಕಗಳ ಬಗ್ಗೆ ಬೇರೆ ಬೇರೆಯವರ ಅಭಿಪ್ರಾಯ ಹೇರಿಸಬೇಕಾದ್ದಿಲ್ಲ, ನನ್ನೆದುರು ಇವತ್ತು ತಾನೆ ಕೊಂಡು ತಂದ ಬ್ರಿಟಾನಿಕಾ ವಿಶ್ವಕೋಶದ "ವರ್ಷಗ್ರಂಥ"ವಿದೆ. ಹಾಳೆಗಳನ್ನು ತಿರುವಿ ಅಲ್ಲಲ್ಲಿ ನೋಡಿದ್ದೇನೆ. ಎಷ್ಟು ಚೆನ್ನಾಗಿ ಪುಸ್ತಕ ಮಾಡುತ್ತಾರೆ. 1986ನ್ನು ಕುರಿತ ಅಸಂಖ್ಯಾತ ದಾಖಲೆ, ಮಾಹಿತಿಗಳು; ಓದಲು ಆನಂದವಾಗುವಂಥ ವರದಿಗಳು, ಲೇಖನಗಳು, ವರ್ಷದ ಮುಖ್ಯ ವ್ಯಕ್ತಿಗಳು, ವರ್ಷದಲ್ಲಿ ತೀರಿಕೊಂಡವರು, ವಿವಿಧ ದೇಶಗಳಲ್ಲಿ ಆದ ಬದಲಾವಣೆಗಳು; ಈ ವರ್ಷದ ನಾಟಕ, ಸಿನಿಮಾ, ಚಿತ್ರಕಲೆ ಎಲ್ಲವನ್ನೂ ಕುರಿತ ವರ್ಣನೆ. ಯಾವ ಪುಟದಲ್ಲಿ ಏನು ಸಿಕ್ಕುತ್ತದೆ ಎಂಬ ಸ್ಪಷ್ಟವಾದ ಪರಿವಿಡಿ. ಕ್ರಿಕೆಟ್, ಫುಟ್‌ಬಾಲ್, ಟೆನ್ನಿಸ್ ಇತ್ಯಾದಿಗಳ ದಾಖಲೆಗಳು. ನ್ಯೂಜಿಲ್ಯಾಂಡ್‌ನ ಆಲ್‌ರೌಂಡರ್ ಹ್ಯಾಡ್ಲಿ ಕುರಿತು ಟಿಪ್ಪಣಿ. ವರ್ಣಚಿತ್ರಗಳು. ಆರ್ಥಿಕ ಸ್ಥಿತಿಗತಿ, ಸಂಗೀತದಲ್ಲಿನ ಸಾಧನೆ, ವಿಜ್ಞಾನದ ಮುನ್ನಡೆ....

ನಮ್ಮ ಕನ್ನಡದ ನಿಘಂಟು, ವಿಶ್ವಕೋಶ ಮುಗಿಯುವುದೇ ಇಲ್ಲ, ಇಲ್ಲಿ ಮಾಹಿತಿಗಳನ್ನು ಸಂಗ್ರಹಿಸುವ ವಿಧಾನ, ಕ್ರೋಢೀಕರಿಸುವ ತಂತ್ರ, ನಿಷ್ಪಕ್ಷವಾಗಿ ರೂಪಿಸುವ ಕಲೆ ಬೆಳೆಯುವುದೇ ಇಲ್ಲ, ಮಾಹಿತಿಯ ಗ್ರಂಥಗಳನ್ನು ನೀಡುವ ಪರಂಪರೆಯೊಂದಿಗೆ ಆಧುನಿಕ ವಿಜ್ಞಾನ ಕೂಡ ಪಶ್ಚಿಮದ ವಿದ್ವಾಂಸರ ನೆರವಿಗೆ ಬಂದಿದೆ. ಅಲ್ಲಿ ಇವತ್ತು ಹೊರಬರುತ್ತಿರುವ ಪ್ರಕೃತಿ ಕುರಿತ, ವಿಜ್ಞಾನ ಕುರಿತ, ಮಾನವ ಶಾಸ್ತ್ರಗಳನ್ನು ಕುರಿತ ಪುಸ್ತಕಗಳು ನಮ್ಮನ್ನು ನಾಚಿಸುವಂತೆ ಮಾಡಿವೆ.



ಜ್ಞಾನವೇ ಅಧಿಕಾರ ಎಂದು ಬೊಗಳೆ ಹೊಡೆಯುತ್ತಲೇ ಇರುವ ನಾವು ಜ್ಞಾನ ಸಂಗ್ರಹಣೆ, ಪ್ರಕಟಣೆಯಲ್ಲಿ ನೂರಾರು ವರ್ಷ ಹಿಂದುಳಿಯುತ್ತಿದ್ದೇವೆ.


ನಾನು ನೋಡಿದ ಕೆಲವು ಕನ್ನಡ ಪುಸ್ತಕ ನೋಡಿ ನನಗೆ ನಾಚಿಕೆಯಾಗುತ್ತದೆ. ನಮ್ಮ ಖ್ಯಾತ ವಿದ್ವಾಂಸರೆನಿಸಿಕೊಂಡವರಿಗೆ ಕೂಡ ಪುಸ್ತಕ ಹೇಗಿರಬೇಕೆಂಬ ಕಲ್ಪನೆ ಕೂಡ ಇರುವುದಿಲ್ಲ, ಇವರು ಪುಸ್ತಕಗಳನ್ನೇ ನೋಡಿರುವುದಿಲ್ಲವೋ, ಇವರ ಸೋಮಾರಿತನ ಹೀಗೆ ಇವರನ್ನು ಆಡಿಸುತ್ತದೋ ಗೊತ್ತಾಗುವುದಿಲ್ಲ,

ನಿಮಗೆ ವಿವರಿಸುವುದಕ್ಕಾಗಿ ನನ್ನ ಕಪಾಟಿನಿಂದ ಒಂದು ಪುಸ್ತಕ ಎಳೆದುಕೊಳ್ಳುತ್ತೇನೆ. ಇದು ಡಾ. ಪ್ರಭುಶಂಕರ ಎಂಬ ವ್ಯಕ್ತಿ ಸಂಪಾದಿಸಿದ ಪುಟ್ಟ ಪುಸ್ತಕ- ಹೆಸರು ನೂರೊಂದು ವಚನಗಳು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಮುಂತಾದವರ ವಚನಗಳನ್ನುಳ್ಳ ಈ ಪುಸ್ತಕ ಎತ್ತಿಕೊಂಡರೆ ಓದುಗನಿಗೆ ಗೊಂದಲ ಶುರುವಾಗುತ್ತದೆ. ಇದಕ್ಕೆ ಪರಿವಿಡಿ ಇಲ್ಲ, ಪುಟಗಳನ್ನು ಎಲ್ಲಿ ಹಾಕಿದರೆ ಒಳ್ಳೆಯದೆಂಬುದು ಗೊತ್ತಿಲ್ಲ, ಅಂದರೆ, ಒಂದೇ ಪುಟ ಅಥವಾ ಅದಕ್ಕಿಂತ ಕಡಿಮೆ ಉದ್ದದ ವಚನಗಳನ್ನು ಅಚ್ಚು ಮಾಡುವಾಗ ಶೀರ್ಷಿಕೆ ಇದ್ದ ಪುಟದಲ್ಲಿ ಪುಟದ ಮೇಲೆ ಪುಟಸಂಖ್ಯೆ ಅಚ್ಚಿಸುವುದಿಲ್ಲ, ಅಂದರೆ ಇಂಥ ಪುಸ್ತಕದಲ್ಲಿ ಪುಟ ಸಂಖ್ಯೆಗೆ ಅವಕಾಶವಾಗುವುದಿಲ್ಲ, ಹಾಗೆಯೇ ವಿಶ್ವ ಕನ್ನಡ ಸಮ್ಮೇಳನದ ಪುಸ್ತಕಗಳನ್ನು ನೋಡಿದ್ದೀರಿ. ಅವು ಮೊದಲು ಅಚ್ಚಾದದ್ದು ಯಾವಾಗ, ಲೇಖಕ ಯಾವ ದಶಕದಲ್ಲಿ ಕ್ರಿಯಾಶಾಲಿಯಾಗಿದ್ದ ಎಂಬುದು ಇಲ್ಲಿ ಇಲ್ಲ. ಇನ್ನೊಂದು ಪುಸ್ತಕ ಎತ್ತಿಕೊಳ್ಳುತ್ತೇನೆ, ಇದರ ಹೆಸರು "ಸಮಕಾಲೀನ ಕನ್ನಡ ಕವಿತೆ". ಇದಕ್ಕೆ ಮೂವರು ಸಂಪಾದಕರಿದ್ದಾರೆ. ಪರಿವಿಡಿ ಏಳನೇ ಪುಟದಲ್ಲಿ ಶುರುವಾಗುತ್ತದೆ. ಪದ್ಯಗಳಿರುವಲ್ಲಿ ಕವಿಗಳ ಹೆಸರಿರುವುದಿಲ್ಲ, ಶೀರ್ಷಿಕೆ ಇರುವಲ್ಲಿ ಪುಟಸಂಖ್ಯೆ ಇರುವುದಿಲ್ಲ. ಈ ಸಮಸ್ಯೆಯನ್ನು ಪುಟಸಂಖ್ಯೆಯನ್ನು ಪುಟದ ಅಡಿಯಲ್ಲಿ ಹಾಕಿ ಪರಿಹರಿಸಬಹುದು. ಅದೂ ಈ ವಿದ್ವಾಂಸರಿಗೆ ಹೊಳೆಯುವುದಿಲ್ಲ, ಓದುಗರ ನಿಲುವಿನಿಂದ ಏನನ್ನೂ ನೋಡುವುದು ಇವರಿಗೆ ಆಗುವುದಿಲ್ಲ,

ಇದೊಂದು ಮೂರ್ಖರ ಕೂಟ. ಇಲ್ಲಿ ಬರೆಯುವುದಾಗಲಿ, ಓದುವುದಾಗಲಿ ರೋಮಾಂಚಕ ಕ್ರಿಯೆ ಆಗುವುದು ಕಷ್ಟ. ಹೀಗೆ ಯೋಚಿಸುತ್ತ ಬ್ರಿಟಾನಿಕಾದ ವರ್ಷದ ಗ್ರಂಥ ನೋಡುತ್ತಾ ಹೋಗುತ್ತೇನೆ. ಅನ್ನ, ನೀರು, ಉಸಿರಿನ ಪರಿವೆ ಕೂಡ ಇಲ್ಲದೆ ಮನಸ್ಸು ಕುಣಿದು ಕುಪ್ಪಳಿಸುತ್ತದೆ. ತಿಳಿವು ಹೀರುತ್ತದೆ. ಪುಸ್ತಕವನ್ನು ಪೂಜಿಸುವ ಈ ದೇಶದಲ್ಲಿ ಅವುಗಳನ್ನು ಸೃಷ್ಟಿಸುವ, ಬಳಸುವ ಕಲೆ ಮಾಯವಾದಂತಿದೆ. ■

ಮೈಸೂರಲ್ಲಿ....

ಒರಿದು ಮಾದರಿ ಪತ್ರಿಕಾಗೋಷ್ಠಿ, ಮೈಸೂರು ಮಾನಸಗಂಗೋತ್ರಿಯ ಪತ್ರಿಕೋದ್ಯಮ ಇಲಾಖೆಯವರು ಕರೆದಿದ್ದರು. ಹೋಗುವುದೋ ಬಿಡುವುದೋ ಗೊತ್ತಾಗದೆ ಕೆಲವು ವಾರ ಕಳೆದು ಬರುವುದಾಗಿ ಹೇಳಿದೆ. ನಾನು ಎಣಿಸಿದ್ದಕ್ಕಿಂತ ಹೆಚ್ಚು ಜನ ಬಂದಿದ್ದರು. ಮುಖ್ಯವಾಗಿ ಪತ್ರಿಕೋದ್ಯಮ ಇಲಾಖೆಗಾಗಿ ನಡೆಸಿದ ಕಾರ್ಯಕ್ರಮ.



ಮಾರ್ಚ್ 6, 1988

ಉಪಾದಾನ ಎಂಬ ಈ ಇಲಾಖೆಯ ಮುಖಪತ್ರಿಕೆ ಯಾರೋ ಹಿಂಬಾಗಿಲಿನಿಂದ ಹೈಕ ಇರಬೇಕೆಂದು ಹೋದರೆ ಈ ಉಪಾದಾನ ಚಿಕ್ಕ ಹುಡುಗಿ. ಹುಡುಗ ಹುಡುಗಿಯರೂ ಜೋರಾಗಿದ್ದರು. ಪತ್ರಿಕೆಯ ಉದ್ದೇಶ? ಇಂಥದೊಂದು ಪ್ರಶ್ನೆ. ಇದನ್ನು ನಾವು ಅನೇಕ ಸಲ ಸಂಪಾದಕೀಯದಲ್ಲೇ ಹೇಳಿದ್ದೇವೆ. ನಾವು ಪ್ರಚಾರಕ್ಕೆ ಬಳಸುವ ಬೋಧನೆ, ರಂಜನೆ, ಪ್ರಚೋದನೆ ನಮ್ಮ ಪತ್ರಿಕೆಯ ಉದ್ದೇಶವೆಂದು ಹೇಳಿದೆ. ಆದರೆ ಅದು ಅಷ್ಟು ಸರಳವಲ್ಲ ಎಂಬುದನ್ನು ಅರಿತ ನಾನು ಬೋಧನೆಯಲ್ಲಿ ರಂಜನೆಯೂ ಪ್ರಚೋದನೆಯಲ್ಲಿ ಬೋಧನೆಯೂ ಇರಲು ಸಾಧ್ಯವೆಂದು ಹೇಳಿದೆ. ನಮ್ಮ ಪತ್ರಿಕೋದ್ಯಮ ಇಲಾಖೆಯಾಗಲಿ, ಕನ್ನಡ ಅಧ್ಯಯನ ಕೇಂದ್ರಗಳಾಗಲಿ ಜೀವನದೊಂದಿಗೆ ನೇರ ಸಂಬಂಧ ಪಡೆದಿರಬೇಕೆಂಬುದು ನನ್ನ ಆಶಯ. ಅಮೆರಿಕನ್ ವಿಶ್ವವಿದ್ಯಾನಿಲಯಗಳು ರಸ್ತೆ, ಸೇತುವೆ, ರಾಜಕೀಯ, ಆರ್ಥಿಕ ನೀತಿ ಎಲ್ಲದರಲ್ಲಿ ತಮ್ಮ ಪ್ರಭಾವ ಬೀರುತ್ತವೆ. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯಗಳು ಮಕ್ಕಳಿಗೆ ಕನ್ನಡ ಪಠ್ಯ ರೂಪಿಸುವುದರಿಂದ ಹಿಡಿದು ತಾಲ್ಲೂಕಿಗೆ ಎಂಥ ಪತ್ರಿಕೆ ಉಪಯುಕ್ತ ಎಂಬುದನ್ನೂ ಚಿಂತಿಸುವಂತಾಗಬೇಕು. ಆದ್ದರಿಂದಲೇ ಆ ಗೋಷ್ಠಿಯ ಆರಂಭದ ಮಾತುಗಳಲ್ಲಿ ನಮ್ಮ ಸುಶಿಕ್ಷಿತರ ಜಡತ್ವ, ಸ್ವಾರ್ಥ ಕುರಿತು ಹೇಳಿದೆ. ನಮ್ಮ ಸುಶಿಕ್ಷಿತರ ಜಡತ್ವದ ಪ್ರಾತಿನಿಧಿಕ ರೂಪವೇ ಹೆಗಡೆ, ರಾಜೀವರಂಥ ಜನರ ಜಡತ್ವವೆಂದು ಸೂಚಿಸಿದೆ.

ಬಹುಪಾಲು ಜನ ಕುತೂಹಲದಿಂದ ತುಂಬಿದ್ದರು; ಅವರು ತಮ್ಮ ಕುತೂಹಲ ತಣಿಸಿಕೊಳ್ಳಲು ತಕ್ಕ ಪ್ರಶ್ನೆಗಳು, ಮಾಹಿತಿಯೊಂದಿಗೆ ಸಿದ್ಧವಾಗಿಲ್ಲದಿದ್ದುದು ನನ್ನಲ್ಲಿ ವ್ಯಸನ ಮೂಡಿಸಿತು. ವಿದ್ಯಾರ್ಥಿಗಳಲ್ಲಿ ಪ್ರಶ್ನೆಗಳು, ಸವಾಲುಗಳು, ಶೋಧಿಸುವ ಛಲ ಬೇಕು; ಅಲ್ಲಿದ್ದ ಒಬ್ಬಿಬ್ಬರ ಸಿನಿಕತನ ಮತ್ತು ಉದ್ಧಟತನಕ್ಕೆ ಬೆರಗಾದೆ. ಉತ್ತರ ಗೊತ್ತಿದ್ದರೂ ಗಂಟಲು ಹರಿದುಕೊಳ್ಳುವ ಜನಕ್ಕೆ, ನನ್ನ ಉತ್ತರ ನಿರ್ಲಕ್ಷ್ಯ ಮತ್ತು ವಿನೋದ ಮಾತ್ರ ಎಂಬುದನ್ನು ಅಲ್ಲಿದ್ದವರು ಅರಿತಿದ್ದರು. ■

ಖುಷ್ವಂತ್ ಸಿಂಗ್ ಪೋಲಿ ಅಜ್ಜನಾದರೆ ಲಂಕೇಶ್...?

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಮತ ಹಾಕುವ ಹಕ್ಕನ್ನು 21 ವರ್ಷದಿಂದ 18 ವರ್ಷಕ್ಕೆ ಇಳಿಸಲು ಕಾರಣವೇನು?
* ಏರಿಳಿತದ ಕಾಲ!

ಕವಿತಾ ಮಧುಸೂಧನ್, ದಾವಣಗೆರೆ
ಅನುಭವಿ ರಾಜಕಾರಣಿಗಳಿಗಿಂತ ಯುವ ರಾಜಕಾರಣಿಗಳೇ ಹೆಚ್ಚು ಚಾಣಾಕ್ಷರಾಗಿದ್ದಾರಲ್ಲ?
* ರಾಜ್ ಅಂತ್ಯಸಂಸ್ಕಾರದಲ್ಲಿ ಯುವ ರಾಜಕಾರಣಿ ಕುಮಾರಸ್ವಾಮಿಯ ಚಾಣಾಕ್ಷತನ ಗೊತ್ತಾಯಿತಲ್ಲಾ...

ಬಾನಂದೂರು ಮಂಜುಳಾ, ದೇವದುರ್ಗ
ದೇವೇಗೌಡರಿಗೆ ಖಾವಿ ತೊಡದೆಯೇ ಜಗದ್ಗುರುವಾಗುವ ಬಯಕೆಯಂತೆ?
* ಈಗಾಗಲೇ ಜರತಾರಿ ಜಗದ್ಗುರುವಾಗಿಲ್ಲವೆ.


ಜೆ.ಎ. ಖಲಂದರ್ ಅಜೀಜ್, ಜಾವಗಲ್
ಆಂಟಿಗಳು ತುಂಬಾ ತುಂಟಿಗಳಾಗಲು ಕಾರಣವೇನು?
* ತುಂಟಾಟವೇ ವೃದ್ಧಾಪ್ಯಕ್ಕೆ, ಆಂಟಿಬಯಾಟಿಕ್ ಅಂತ ಪ್ರಮಾಣಿಸಿರೋದ್ರಿಂದ.

ಆರ್. ಶಿರಿತರ್ಲಗಟ್ಟಿ, ಹುಬ್ಬಳ್ಳಿ
ಸುನಾಮಿ ಅಕ್ಕ-ಸ್ವಾಮಿ ಅಕ್ಕಗಳ ವ್ಯತ್ಯಾಸವೇನು?
* ನಾಯಕರಿಗೂ, ಸಾಮಾನ್ಯರಿಗೂ ಇರುವ ವ್ಯತ್ಯಾಸ.

ಓದು ಸಿದ್ದೇಗೌಡ, ಕನಕಪುರ
ಊಸರವಳ್ಳಿ ಚಂದ್ರುಗೂ, ಕಾಸರವಳ್ಳಿ ಗಿರೀಶ್‌ಗೂ ಇರುವ ವ್ಯತ್ಯಾಸವೇನು?
* ಬಯಲು ಸೀಮೆಯ ನಾಗ್ತಿ ಕೈ ಇಟ್ಟದ್ದೆಲ್ಲ ಬೋಳು ಬೋಳು!

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಧರ್ಮಸಿಂಗ್ ಅದೃಷ್ಟದ ಮುಖ್ಯಮಂತ್ರಿಯಾದರೆ ಕುಮಾರಸ್ವಾಮಿ...?
* ಧೃತರಾಷ್ಟ್ರನ ಧೂರ್ತ ಸಿ.ಎಂ.





ಅ.ರೆಡ್ಡಿ, ಬೆಂಗಳೂರು
ಚಿತ್ರನಟ-ನಟಿಯರಂತೆ ರಾಜಕಾರಣಿಗಳಿಗೇಕೆ ತಾರೆಯರು ಎನ್ನುವುದಿಲ್ಲ?
* ಅವೆಲ್ಲಾ ಧೂಮಕೇತುಗಳಂತೆ.

ಎಂ. ನಿಸರ್ಗ, ದಾವಣಗೆರೆ
ಯುಡಿಯೂರಪ್ಪ 40 ತಿಂಗಳ ಅಧಿಕಾರ ಖಚಿತ ಎಂದು ಪದೇ ಪದೇ ಹೇಳುವುದೇಕೆ?
* ಅನಂತಕುಮಾರ್ ಒಳ ಹೊಡೆತ.

ಕೆ. ಪ್ರಾಣೇಶ್ ರಾವ್, ಹಗರಿಬೊಮ್ಮನಹಳ್ಳಿ
ಗಂಡ-ಹೆಂಡತಿ ಜಗಳ ಉಂಡು ಮಲಗುವ ತನಕವಾದರೆ, ತಂದೆ ಮಕ್ಕಳ ಜಗಳ....?
* ಪ್ರಮಾಣ ವಚನ ಸ್ವೀಕರಿಸುವ ತನಕ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಲಂಕೇಶರು, ಕೈಲಾಸವಾಸಿಗಳಾ ಇಲ್ಲ, ಸ್ವರ್ಗವಾಸಿಗಳಾ?
* ಕೈಲಾಸದಲ್ಲಿ ಕಾರ್ಡ್ಸ್ ಆಡುತ್ತಿದ್ದಾರಂತೆ.

ಬಿ.ಎನ್. ಮಂಜುನಾಥ, ಬಾಣಾವರ
ವಾಟಾಳ್ ನಾಗರಾಜ್ ಈಗ ಎ.ಕೆ. ಸುಬ್ಬಯ್ಯನವರ ದಾರಿ ಹಿಡಿಯುತ್ತಿದ್ದಾರಂತೆ?
* ಹಿಡಿದು ಬಹಳ ದಿನವಾಯ್ತು.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಉದ್ಯಾನನಗರಿ ಮೈಸೂರು ಕೂಡಾ ರೌಡಿಗಳ ತಾಣವಾಗುತ್ತಿದೆಯಲ್ಲಾ?
* ಚಾಮುಂಡಿಯರ ಕೊರತೆಯಿಂದ.

ಕೆ.ಎಸ್. ರಾಜಲಕ್ಷ್ಮಿ, ಬೆಂಗಳೂರು
ಪೋಲಿ ಪ್ರಶ್ನೆಗಳನ್ನು ಕೇಳುವುದರಲ್ಲಿ ಹೆಣ್ಣಿಗಿಂತ ಗಂಡೇ ಒಂದು ಕೈ ಹೆಚ್ಚಿರಲು ಕಾರಣ?
* ಅದಕ್ಕೂ ಸ್ಫೂರ್ತಿ ಹೆಣ್ಣೆ ಅಂತೆ.

ಬಹುಮಾನಿತ ಪ್ರಶ್ನೆಗಳು

ಕೆ.ಶ್ರೀನಿವಾಸ್, ಮಂಡ್ಯ
ಬಿಜೆಪಿಗೂ, ಜೆಡ್.ಎಸ್.ಗೂ ಹೋಲಿಕೆ ಇದೆಯಾ?
* ಜೆಡ್‌ಎಸ್ ದೇಹದ ಮೇಲೆ ದಾಳಿ ಮಾಡಿದರೆ, ಬಿಜೆಪಿ ದೇಹಕ್ಕೆ ಕುತ್ತು ತರುತ್ತೆ,

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಖುಷ್ವಂತ್ ಸಿಂಗ್ ಪೋಲಿ ಅಜ್ಜನಾದರೆ ಲಂಕೇಶ್...?
* ಕುಡುಕ.

ಧೀ ತುಂಟಿ!

ದೆಹಲಿ ವ್ಯಾಪಾರಿಯೊಬ್ಬನಿಗೆ ಮಕ್ಕಳಾಗಿರಲಿಲ್ಲ. ಅದಕ್ಕಾಗಿ ಕಂಡ ಕಂಡ ದೇವರು ದಿಂಡರಿಗೆಲ್ಲ ಗಂಡುಮಗುವಾಗಲೆಂದು ಬೇಡಿಕೊಂಡಿದ್ದ. ಹೆಂಡತಿ ಗರ್ಭ ಧರಿಸಿದಳು. ಖುಷಿಗೊಂಡ ವ್ಯಾಪಾರಿ ಸಂಭ್ರಮದಿಂದ ಎಲ್ಲರಿಗೂ ಸಿಹಿ ಹಂಚಿದ.

ತಂದೆಯಾಗುತ್ತಿರುವೆ, ಅದೂ ಗಂಡು ಮಗುವಿಗೆನ್ನುವ ಆನಂದದಲ್ಲಿದ್ದಾಗ, ಪತ್ನಿಗೆ ಹೆರಿಗೆಯಾಗಿ ಫೋನ್ ಬಂತು. ತಕ್ಷಣ ವ್ಯಾಪಾರಿ 'ಗಂಡೋ ಹೆಣ್ಣೋ?' ಎಂದ. 'ಹೆಣ್ಣು' ಎನ್ನುವ ಉತ್ತರ ಕೇಳಿ ಕೆಂಡಾಮಂಡಲವಾದ. ಮನೆಗೆ ಬಂದವನೇ ಹೆಂಡತಿಯನ್ನು 'ನಾನು ಬಯಸಿದ್ದೇನು? ನೀನು ಹಡೆದಿದ್ದೇನು?' ಎಂದು ಕೋಪದಿಂದ ಪ್ರಶ್ನಿಸಿದ.

ಅದಕ್ಕೆ ಹೆಂಡತಿ ವ್ಯಂಗ್ಯದ ನಗೆ ನಕ್ಕು, 'ನಿನ್ನನ್ನು ನಂಬಿಕೊಂಡಿದ್ದರೆ ಇದೂ ಹುಟ್ಟುತ್ತಿರಲಿಲ್ಲ ಸುಮ್ಮನಿರು!' ಎಂದುತ್ತರಿಸಿದಳು.






ಮಾರ್ಚ್ 24ರಂದು 'ಭೂದಾನ' ನೀಡುತ್ತಿರುವ ಸರ್ಕಾರ!

ಎಚ್.ಡಿ.ಕೆ V/s ಎಚ್.ಕೆ

'ಭೂಗಳ್ಳರಿಗೆ ಭೂದಾನ!'

"ಭೂಮಿ ಹರಾಜಿಗಿದೆ! ಅತಿ ಕಡಿಮೆ ದರದಲ್ಲಿ ಸಾವಿರ ಎಕರೆಗಟ್ಟಲೇ ಭೂಮಿ ಬೇಕೆ? ಸಂಪರ್ಕಿಸಿ: ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ, ವಿಧಾನಸೌಧ, ಬೆಂಗಳೂರು"

ಇಂತಹಾ ಒಂದು ಅಲಿಖಿತ ಜಾಹೀರಾತು ನೆಲಗಳ್ಳರ ಸರ್ಕಲ್‌ನಲ್ಲಿ ಪ್ರಕಟಗೊಂಡಿದೆ. ಅದಕ್ಕೇ ಈಗ ದೈತ್ಯ ರಿಯಲ್ ಎಸ್ಟೇಟ್ ಕಳ್ಳರೆಲ್ಲ ನಕಲಿ ಐಟಿ ಕಂಪನಿಗಳನ್ನು ನೋಂದಣಿ ಮಾಡಿಸು ತ್ತಿದ್ದಾರೆ.



ಮೊನ್ನೆ ಎಚ್.ಕೆ. ಪಾಟೀಲರು ಐದು ಬೋಗಸ್ ಕಂಪನಿಗಳಿಗೆ 5000 ಎಕರೆ ಭೂಮಿ ನೀಡಿರುವುದನ್ನು ಪ್ರಶ್ನಿಸಿದ್ದಾರೆ. ಇದು ಬರೀ ಐದು ಬೋಗಸ್ ಕಂಪನಿಗಳ ಕತೆಯಲ್ಲ! ಎಸ್. ಎಂ. ಕೃಷ್ಣರ ಕಾಲದಿಂದಲೂ ಇಂತಹ ಒಂದು ದೊಡ್ಡ ನೆಲಗಳ್ಳರ ಜಾಲವೇ ಬೆಳೆದು ಬಂದಿದೆ.

ನೆಲಗಳ್ಳರ ಹಿಂದೆ ಮನೆಗಳ್ಳರು

• ಮಾರ್ಚ್ 24, 2006ರಂದು ಮುಖ್ಯಮಂತ್ರಿ ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಯಡಿಯೂರಪ್ಪನವರ ನೇತೃತ್ವದಲ್ಲಿ ನಡೆದ ಉನ್ನತಾಧಿಕಾರದ ಕೈಗಾರಿಕಾ ಸಮಿತಿ 27 ಸಾವಿರ ಕೋಟಿ ಮೌಲ್ಯದ 25 ಪ್ರಾಜೆಕ್ಟ್‌ಗಳಿಗೆ ತರಾತುರಿಯಲ್ಲಿ ಅನುಮತಿ ನೀಡಿಬಿಟ್ಟಿತು. ಹಾಗೆಂದು ಸಿ.ಎಂ., ಡಿಸಿಎಂ., ಕಟ್ಟಾ ಸುಬ್ರಮಣ್ಯ, ಬಂಡೆಪ್ಪ ಕಾಶಂಪೂರ ಮನೆಗಳ್ಳರ ಕೂಟ ವಿಚಾರಿಸುವುದಿಲ್ಲ, ನಮ್ಮ ದಿನಪತ್ರಿಕೆಗಳಂತೂ 'ಬಂಡವಾಳ ಹರಿದು ಬಂತು' ಎಂಬ ಸಾಲು ಬರೆಯಲು ತುದಿಗಾಲ ಮೇಲೆಯೇ ನಿಂತಿರುತ್ತವೆ.

ಇಲ್ಲಿ ಎರಡು ಬಗೆಯ ದರೋಡೆ ನಡೆಯುತ್ತಿದೆ. ಇನ್ಫೋಸಿಸ್, ವಿಪ್ರೋ, ಸತ್ಯಂಗಳಂತಹ ನೈಜ ಐಟಿ ಕಂಪನಿಗಳು ನೂರಾರು ಎಕರೆ ಭೂಮಿಯನ್ನು ಕೊಳ್ಳೆ ಹೊಡೆಯುತ್ತಿವೆ. ಬೆನ್ನ ಹಿಂದೆಯೇ ಪ್ರೆಸ್ಟೀಜ್, ಆದರ್ಶ, ಶೋಭಾ, ಮಂತ್ರಿ ಎಂಬ ರಿಯಲ್ ಎಸ್ಟೇಟ್‌ನ ಕಂತ್ರಿ ಕಂಪನಿಗಳು ಐಟಿ ಹೆಸರಿನಲ್ಲಿ ಭೂಮಿಯನ್ನು ಲಪಟಾಯಿಸುತ್ತಿವೆ.

ರೆಡ್ಡಿ ವೀರಣ್ಣ: ನೀ ಮಣ್ಣಿನ ಮಗನಣ್ಣ.....

ಈಗ ಎಚ್ಕೆ ಪಾಟೀಲರು ಎತ್ತಿರುವ ಈ ಐದು ನೆಲಗಳ್ಳತನದ ಪ್ರಕರಣಗಳಿಗೆ ಉತ್ತರ ಕೊಡಲಾಗದ ಕುಮಾರಸ್ವಾಮಿ "ನಾವಿನ್ನೂ ಫೈನಲ್ ನಿರ್ಧಾರ ಮಾಡಿಲ್ಲ... ಪೆಂಡಿಂಗ್‌ನಲ್ಲಿಟ್ಟಿದ್ದೇವೆ..." ಎಂಬ ಹಸಿಸುಳ್ಳು ಹೇಳುತ್ತಿದ್ದಾರೆ. ಮಾರ್ಚ್ 24ರಂದು ಅವರೇ ನಡೆಸಿದ ಪತ್ರಿಕಾಗೋಷ್ಠಿಯ ಫೋಟೋ ಇದೇ ಪುಟದಲ್ಲಿರುವುದನ್ನು ಗಮನಿಸಿ!

ಮುಂಬೈ ಮೂಲದ ಶಾಪೂರ್ಜಿ ಅಂಡ್ ಕಂಪನಿ ಎಂಬ ಕುಖ್ಯಾತ ರಿಯಲ್ ಎಸ್ಟೇಟ್ ಕಂಪನಿಗೆ ಐಟಿ ಅಭಿವೃದ್ಧಿಯ ಹೆಸರಲ್ಲಿ ಅನಾಮತ್ತು 1550 ಎಕರೆ ಭೂಮಿಯನ್ನು ಧಾರೆ ಎರೆದುಕೊಡುವ 27 ಭಂಡರ ಪತ್ರಿಕಾಗೋಷ್ಠಿಯಲ್ಲಿ ಹೆಮ್ಮೆಯಿಂದ ಪ್ರಕಟಿಸಿಯೂ ಬಿಟ್ಟರು.

ಇಲ್ಲಿ ಕೈಗಾರಿಕೆ ಆರಂಭ, ಇಂತಿಷ್ಟು ಸಾವಿರ ಹುದ್ದೆ ನಿರ್ಮಾಣ ಎಂಬುದು ಮಾತ್ರ ಸುದ್ದಿಯಾಗುತ್ತದಲ್ಲವೆ? ಆದರೆ ಬೋಗಸ್ ಐಟಿ ಕಂಪನಿಗಳ ಹೆಸರಲ್ಲಿ ಸಾವಿರ ಎಕರೆಗಳಷ್ಟು ಭೂಮಿಯನ್ನು ಜುಜುಬಿ ರೇಟಿಗೆ ಪಡೆಯುವ ರಿಯಲ್ ಎಸ್ಟೇಟ್ ಕಳ್ಳರು ಅದ್ಯಾವ ಸಾಫ್ಟ್‌ವೇರ್ ಕೆಲಸದಲ್ಲಿ ನಿರತರಾಗಿದ್ದಾರೆ ಎಂಬುದನ್ನು ಈ ಉನ್ನತಾಧಿಕಾರ ಸಮಿತಿ ಎಂಬ ಉನ್ನತಾಧಿಕಾರ ಸಮಿತಿಗೆ ಅದೆಷ್ಟು ಕಿಕ್‌ಬ್ಯಾಕ್ ಸಿಕ್ಕಿರಬೇಡ?


ಬೆಂಗಳೂರಿನ ನಟೋರಿಯಸ್ ನೆಲವಂಚಕರ ಸಾಲಿನಲ್ಲಿ ಥಳ ಥಳ ಹೊಳೆಯುವ ಕಟ್ಟಾ ಸುಬ್ರಮಣ್ಯನಾಯ್ಡು ಎಂಬ ಭೂದಾಹಿಯೇ ಉನ್ನತಾಧಿಕಾರ ಸಮಿತಿಯಲ್ಲಿರುವಾಗ ನೆಲಗಳ್ಳರು ಕೇಕೆ ಹಾಕದೆ ಇರುತ್ತಾರಾ?



'ಆದರ್ಶ' ಜಯಶಂಕರ್



ಸುಶೀಲ್ ಮಂತ್ರಿ



ರಜಾಕ್



ಪೂರ್ವಾಂಕರ್

ಬಿ.ಎಂ. ಜಯಶಂಕರ್‌ನ ಆದರ್ಶ ಡೆವಲಪರ್ಸ್ ಎಂಬ ಭೂಗಳ್ಳ ಕಂಪನಿಗೆ ಐಟಿ ಪಾರ್ಕ್ ನಿರ್ಮಿಸಲು ಒಟ್ಟು 1270 ಎಕರೆ ಭೂಮಿಯನ್ನು ದಾನ ಮಾಡಿ ಬಿಟ್ಟಿದ್ದಾರೆ. ಐಟಿ ಕಂಪನಿಗಳಿಗಾಗಿ ಬಿಲ್ಡಿಂಗ್ ಕಟ್ಟಿಕೊಡುವ ಕೆಲಸ ಅದ್ಯಾವಾಗ ಐಟಿ, ಸಾಫ್ಟ್‌ವೇರ್ ಎಂದು ವರ್ಗೀಕರಣಗೊಂಡಿತು ಎಂಬುದನ್ನು ನೆಲಗಳ್ಳರ ರಕ್ಷಕ ಸರ್ಕಾರವೇ ಹೇಳಬೇಕು.

ಮುಂಬೈ, ಹೈದರಾಬಾದ್‌ನವರಿಗಷ್ಟೇ ಭೂಮಿ ಕೊಟ್ಟರೆ ತಪ್ಪಲ್ಲವೆ? ಅದಕ್ಕೇ ಕನ್ನಡಿಗ ಕಳ್ಳರಿಗೂ 'ಭೂದಾನ ಚಳವಳಿ'ಯಲ್ಲಿ ಅವಕಾಶ ಕೊಡಲಾಗಿದೆ. ರೆಡ್ಡಿ ವೀರಣ್ಣ ಎಂಬ ಖತರ್‌ನಾಕ್ ನೆಲಗಳ್ಳ ಯಾರಿಗೆ ಗೊತ್ತಿಲ್ಲ ಹೇಳಿ. ದೇವೇಗೌಡರ ಪರಮಾಪ್ತ ಎನಿಸಿರುವ ಈ ಗಂಗಾವತಿ ಮೂಲದ ಕಂಟ್ರಾಕ್ಟರ್ ರೆಡ್ಡಿ, ಬೆಂಗಳೂರು ಸುತ್ತಮುತ್ತ ಸ್ವನಾಮಿ, ಬೇನಾಮಿ ಹೆಸರುಗಳಲ್ಲಿ 75 ಸಾವಿರ ಎಕರೆ ಭೂಮಿ ಹೊಂದಿದ್ದಾನೆ ಎಂಬುದು ದೇವೇಗೌಡರಿಗೂ ಗೊತ್ತಿರುವ 'ಸಿಹಿ' ಸತ್ಯವೇ.

ಸುಪ್ರೀಂಕೋರ್ಟ್ ಅನಿತಾಕುಮಾರಸ್ವಾಮಿಯವರ ಪೆಟ್ರೋಲ್ ಬಂಕನ್ನು ಹರಾಜು ಹಾಕಲು ಆದೇಶಿಸಿದಾಗ ಮೇಡಂ ಪರ ಆ ಬಂಕ್ ಖರೀದಿಗೆ ಒಬ್ಬ ಮುಂದೆ ಬಂದಿದ್ದನಲ್ಲ... ಅವನೇ ಈ ಕಿರಾತಕ ರೆಡ್ಡಿ ವೀರಣ್ಣ, ಇಂತಹ ಶಿಷ್ಯನಿಗೆ ಅನಿತಾ ಮೇಡಂ ನಿರಾಶೆ ಮಾಡಿದರೆ ಹೇಗೆ? ಬಿ.ಇ.(E & C) ಓದಿರುವ ಅನಿತಾ ಮೇಡಂ ರಾತ್ರೋ ರಾತ್ರಿ ರೆಡ್ಡಿಗೆ ಐಟಿ ಜ್ಞಾನ ತುಂಬಿಬಿಡುತ್ತಾರೆ! ರೆಡ್ಡಿ ವೀರಣ್ಣ ಮರುದಿನವೇ ಈ ಪಾಠವನ್ನು ತನ್ನ ನೆಲಗಳ್ಳ ಮಿತ್ರ ಕುಪೇಂದ್ರ ರೆಡ್ಡಿಗೆ ಹೇಳಿಕೊಡುತ್ತಾನೆ. ಆರ್. ಸುಗುಣ ಎಂಬ ಅನಾಮಿಕ ಗಿರಾಕಿಯೊಂದು ಈ ಭಂಡರ ಜತೆ ಸೇರುತ್ತದೆ! ಅಲ್ಲಿಗೆ ಸಫಾಯರ್ ಎಂಬ ಬೋಗಸ್ ಕಂಪನಿ ಜನ್ಮ ತಾಳುತ್ತದೆ. 10 ಲಕ್ಷ ಷೇರು ಕ್ಯಾಪಿಟಲ್ ತೋರಿಸುವ ಈ ಖದೀಮ ಕಂಪನಿ ಇನ್ನೂ ಕಾರ್ಯಾಚರಣೆಯನ್ನೇ ಆರಂಭಿಸಿಲ್ಲ. (ಆರಂಭಿಸುವುದೂ ಇಲ್ಲ ಬಿಡಿ) ಇಂತಹ ಮಾಯಾವಿ ಕಂಪನಿಗೆ ದೇವನಹಳ್ಳಿ ಬಳಿ 1400 ಎಕರೆ, ಶ್ರೀರಂಗಪಟ್ಟಣದ ಬಳಿ 150 ಎಕರೆ ಭೂಮಿಯನ್ನು ನೀಡಿ ಧನ್ಯವಾಗುವ ಸರ್ಕಾರವೊಂದು ಸ್ವತಃ ಅದೆಂತಹಾ ಖದೀಮರ ಕೂಟವಿರಬಹುದು?

ರೆಡ್ಡಿ ವೀರಣ್ಣನಿಗೇನು `C' ಗೊತ್ತಾ `C++' ಗೊತ್ತಾ? `JAVA' ಎಂದರೆ ತಾನು ಗಂಗಾವತಿಯಲ್ಲಿ ಓಡಾಡುತ್ತಿದ್ದ JAWA ಗಾಡಿ ಎಂದು ಬೊಗಳುವ ಈ ರೆಡ್ಡಿಗೆ ಗೊತ್ತಿರುವುದೊಂದೇ : Money++. ಆತ ಈಗಾಗಲೇ ಕುಮಾರಸ್ವಾಮಿ ಕೊಟ್ಟ 1550 ಎಕರೆ ಭೂಮಿಯನ್ನು ಸೈಟುಗಳನ್ನಾಗಿ ಪರಿವರ್ತಿಸುವ ಪ್ಲಾನು ರೆಡಿ ಮಾಡಿಯಾಗಿದೆ.

ಹುಟ್ಟುಟ್ಟುತ್ತಲೇ ಸಾವಿರೆಕರೆ!

ಡಿಸಿಎಂ ಯಡಿಯೂರಪ್ಪ ಸಚಿವ ಕಟ್ಟಾ ಸುಬ್ರಮಣ್ಯನಾಯ್ಡು ಉನ್ನತಾಧಿಕಾರ ಸಮಿತಿಯಲ್ಲಿದ್ದಾರೆ ಎಂದು ಜನಕ್ಕೆ ಗೊತ್ತಾಗೋದು ಬೇಡವೆ?

ಕರ್ನಾಟಕ ಬಿಜೆಪಿ ಸ್ಟೂಡೆಂಟ್ಸ್ ಅಸೋಷಿಯನ್‌ನ ರಾಜ್ಯಾಧ್ಯಕ್ಷ ಎಂದುಕೊಂಡು ಬರುವ ಜೆ.ಪಿ. ನಗರದ ಎಂ.ಎಸ್. ಬಾಲಾಜಿ ಎಂಬ ಚಿಡ್ಡಿಗೂ ಸಾವಿರ ಎಕರೆ ದಯಪಾಲಿಸಲಾಗಿದೆ! ಮಾರ್ಚ್ 6ರಂದು ಐದು ಲಕ್ಷ ರೂ. ಆರಂಭಿಕ ಬಂಡವಾಳದೊಂದಿಗೆ ನೋಂದಣಿಯಾದ "ಗಾಂಧಿ ಸಿಟಿ ಫಾರ್ ಅಡ್ವಾನ್ಸಡ್ ಆರ್ & ಡಿ" ಎಂಬ ಪಾಲ್ತು ಕಂಪನಿಗೆ ಮಾರ್ಚ್ 24ರಂದು ಸಾವಿರ ಎಕರೆ ಕೊಡುತ್ತಾರೆಂದರೆ... ಕೇವಲ 18 ದಿನಗಳಲ್ಲಿ ಮಹಾಭಾರತ ಯುದ್ಧ ಗೆದ್ದಂತಾಯ್ತಲ್ಲವೆ?

ಗಿರಿ ದೇವನೂರು, ಅರ್ಚನಾ ದೇವನೂರು, ಜೆ.ಎ. ಮಂಜುನಾಥ್, ಗಿರಿಧರ ನಾಗರಾಜ್, ಡಿ.ಎಸ್. ಶ್ರೀನಾಥ್, ಬಾಲಾ ಗುಟ್ಟೂರಿ ಎಂಬ ಗ್ರೇಟ್ 'ಸಾಫ್ಟ್‌ವೇರ್' ತಜ್ಞರು ಬಾಲಾಜಿ ಎಂಬ ಚಿಡ್ಡಿಯ ಪಾರ್ಟನರ್‌ಗಳಂತೆ!

ಹಾಗೆಯೇ ಪ್ರೆಸ್ಟಿಜ್ ಗ್ರೂಪ್‌ನ ಇರ್ಫಾನ್ ರಜಾಕ್‌ಗೂ ನೂರಾರು ಎಕರೆ ಭೂಮಿ ಧಾರೆ ಎರೆಯಲಾಗಿದೆ.

ದೇಶಪಾಂಡೆ ಮಿತ್ರರಾದ ಶೋಭಾ ಡೆವಲಪರ್ಸ್‌ನ ಮೆನನ್, ಮಂತ್ರಿ ಡೆವಲಪರ್ಸ್‌ನ ಸುಶೀಲ್ ಮಂತ್ರಿ, ಪೂರ್ವಾಂಕರದ ರವಿ ಪೂರ್ವಾಂಕರಗಳೆಲ್ಲ ಸಾವಿರ ಸಾವಿರ ಎಕರೆ ಪಡೆಯಲು ಕ್ಯೂನಲ್ಲಿ ನಿಂತಿದ್ದಾರೆ. ಈ ದೈತ್ಯ ಖದೀಮರೆಲ್ಲಾ ಕೃಷ್ಣರ ಕಾಲದಲ್ಲೇ ಇಡೀ ಬೆಂಗಳೂರು ಸುತ್ತಾಮುತ್ತಾ ಇಂಚಿಂಚೂ ಬಿಡದಂತೆ ಭೂಮಿ ಕಬಳಿಸಿದ ಕರಾಳ ದಾಖಲೆ ಹೊಂದಿದ್ದಾರೆ.


``Bangalore for sale-ಅದೂ ಕಡಿಮೆ ರೇಟಿಗೆ" ಎಂಬ ಬೋರ್ಡ್ ಬರೆಸಲು ಸಿ.ಎಂ. ಆರ್ಡರ್ ಮಾಡಿಯಾಗಿದೆಯಂತೆ!

– ಪಿ.ಕೆ. ಮಲ್ಲನಗೌಡರ್

ಜೈಲಿಂದ ಹೊರಬಂದ ತಿಮ್ಮೇನಹಳ್ಳಿ ಗೋವಿಂದ


ಒಂದು ಸುದೀರ್ಘ ಸೆರೆವಾಸ ಮುಗಿದಿದೆ. ತಿಮ್ಮೇನಹಳ್ಳಿಯ ಹಳೇ ಪಂಟರ್ ಗೋವಿಂದ ಜೈಲಿಂದ ಹೊರಬಂದಿದ್ದಾನೆ.

ಮೊದಲು ಲೇಔಟ್ ಮಂಜನ ಹತ್ಯೆ ಆನಂತರ ತನ್ನ ಆಜನ್ಮ ವೈರಿ ತಮ್ಮಯ್ಯನ ಹತ್ಯೆ; ಹೀಗೆ ತನ್ನ ಆಯಸ್ಸಿನ ಐದು ವರ್ಷಗಳನ್ನು ಜೈಲಲ್ಲೇ ಕಳೆದವನು ತಿಮ್ಮೇನಹಳ್ಳಿಯ ಗೋವಿಂದ. ಲೇಔಟ್ ಮಂಜನ ಹತ್ಯೆಯಲ್ಲಿ ಆತನೇ ಖುದ್ದಾಗಿದ್ದನೋ ಅಥವಾ ತನ್ನ ಹುಡುಗರನ್ನು ಬಿಟ್ಟು ಕೊಲ್ಲಿಸಿದನೋ ಎಂಬುದು ಇವತ್ತಿಗೂ ನಿಗೂಢ. ಆದರೆ ತಮ್ಮಯ್ಯನ ಹತ್ಯೆಯನ್ನು ಮಾತ್ರ ಗೋವಿಂದ ಜೈಲಲ್ಲಿದ್ದುಕೊಂಡೇ ಮಾಡಿಸಿದ್ದ. ಎಲ್ಲಿ ಜೈಲಿಂದ ಹೊರಬಂದರೆ ತಮ್ಮಯ್ಯನ ಶಿಷ್ಯ ಮಚ್ಚ ತನ್ನನ್ನು ಮುಗಿಸಿಬಿಡುತ್ತಾನೋ ಎಂಬ ಜೀವಭೀತಿಯಲ್ಲೇ ಐದು ವರ್ಷ ಜೈಲಲ್ಲೇ ಕಳೆದ.



ಹತನಾದ ಮಚ್ಚ

ಬಹುಶಃ ಕೋರ್ಟು ಜಾಮೀನು ಕೊಟ್ಟಿದ್ದರೂ ಅದನ್ನು ನಿರಾಕರಿಸಿ ಜೈಲೇ ತನಗೆ ಸೇಫು ಎಂದು ಸತತ ಐದು ವರ್ಷಗಳ ಕಾಲ ಕಂಬಿ ಎಣಿಸಿಕೊಂಡೇ ಕಾಲ ಕಳೆದ ಬೆಂಗಳೂರಿನ ಮೊದಲ ರೌಡಿ ಗೋವಿಂದ. 1998 ರ ಹೊತ್ತಿಗೆ ಗೋವಿಂದ ಜೇಡರಹಳ್ಳಿ ಕೃಷ್ಣಪ್ಪನ ನಂಬಿಕಸ್ತ ಬಂಟ. ಆತನ ಎದುರಾಳಿ ತಿಮ್ಮೇನಹಳ್ಳಿ ತಮ್ಮಯ್ಯ ಆದೊಮ್ಮೆ ಮಚ್ಚನ ಜೊತೆ ಸೇರಿಕೊಂಡು ಸರಿಸುಮಾರು ಇನ್ನೂರು ಮಂದಿ ಹುಡುಗರ ಜೊತೆ ದಂಡೆತ್ತಿ ಬಂದವನು ಇಡೀ ತಿಮ್ಮೇನಹಳ್ಳಿಯನ್ನು ಚಿಂದಿ ಉಡಾಯಿಸಿಬಿಟ್ಟ. ವಿಜಯನಗರದ ಇನ್ಸ್‌ಪೆಕ್ಟರ್ ಮೈಲಾರಪ್ಪ ಇಡೀ ತಮ್ಮಯ್ಯನ ಪಡೆಯನ್ನು ಹಿಡಿದು ಜೈಲಿಗಟ್ಟಿದ್ದರು.




ಕೊರಂಗು ಕೃಷ್ಣ

ಅವತ್ತು ತಿಮ್ಮೇನಹಳ್ಳಿಯನ್ನು ಬಿಟ್ಟ ಗೋವಿಂದ ಭೂಗತನಾಗಿದ್ದುಕೊಂಡೇ ಅನಾಹುತಕಾರಿ ಕೃತ್ಯವೊಂದಕ್ಕೆ ಕೈಯಿಟ್ಟ. ಅದು ಲೇಔಟ್ ಮಂಜನ ಹತ್ಯೆ. ಲೇಔಟ್ ಮಂಜ ಆಗಷ್ಟೇ ಜೇಡರಹಳ್ಳಿಯ ವಿರುದ್ಧ ತಿರುಗಿಬಿದ್ದು ತನ್ನದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡಿದ್ದ. ಕೃಷ್ಣಪ್ಪನನ್ನು ಮುಗಿಸೇ ಬಿಡ್ತೀನಿ ಎಂದು ಕಂಡಕಂಡಲ್ಲಿ ಹೂಂಕರಿಸಿದ್ದ. ಇತ್ತ ಗೋವಿಂದನೂ ಭೂಗತ. ಅತ್ತ ಜೇಡರಹಳ್ಳಿಯೂ ನಾಪತ್ತೆ. ಲೇಔಟ್ ಮಂಜನಿಗೆ ಹೆದರಿಕೊಂಡು ಇಡೀ ಜೇಡರಹಳ್ಳಿ ಗ್ಯಾಂಗ್ ಕಾಮಾಕ್ಷಿಪಾಳ್ಯದಿಂದ ಪರಾರಿಯಾಯಿತೆಂದೇ ಎಲ್ಲರೂ ಲೆಕ್ಕ ಹಾಕಿದ್ದರು. ಅಷ್ಟರಲ್ಲೇ ಕೃಷ್ಣಪ್ಪನ ಪರವಾಗಿ ಲೇಔಟ್ ಮಂಜನಿಗೆ ಗೋವಿಂದ ಮುಹೂರ್ತವಿಟ್ಟಿದ್ದ.

ದಾಸರಹಳ್ಳಿ ಕೆರೆ ಏರಿಯ ಸೋಣಪ್ಪನ ಪಾಳ್ಯದ ರಸ್ತೆಯಲ್ಲಿ ಮಾರುತಿ ಕಾರಲ್ಲಿ ಹೋಗುತ್ತಿದ್ದ ಮಂಜನನ್ನು ಎಷ್ಟು ಚಾಕಚಕ್ಯತೆಯಿಂದ ಗೋವಿಂದನ ಪಡೆ ಕೊಂದಿತ್ತೆಂದರೆ ಮಂಜನ ಜೊತೆ ಕಾರಲ್ಲಿದ್ದ ಮದ್ದೂರ್ ಮಂಜುಳಾ ಎಂಬ ಚಿತ್ರನಟಿ ಅದೇನಕ್ಕೋ ಕಾರು ನಿಲ್ಲಿಸು ಎಂದು ಲೇಔಟ್ ಮಂಜನಿಗೆ ಹೇಳಿದ್ದೇ ತಡ ಗೋವಿಂದನ ಪಡೆ ಮುಗಿಬಿದ್ದಿತ್ತು. ಹಾಗೆ ಲೇಔಟ್ ಮಂಜನ ಕೊಲೆ ಕೇಸಲ್ಲಿ ಜೈಲು ಸೇರಿದ ಗೋವಿಂದ ಅದಾಗಿ ವರ್ಷಕ್ಕೇ ತನ್ನ ಶಿಷ್ಯರಾದ ಸೂರಿ, ಬಿ.ಎಸ್. ರವಿ, ನೀರಾನೆ ಹರೀಶರನ್ನು ಬಿಟ್ಟು ದುಷ್ಮನ್ ತಮ್ಮಯ್ಯನನ್ನು ಕೊಲ್ಲಿಸಿದ.

ಉಳಿದವನು ಕಾಮಾಕ್ಷಿಪಾಳ್ಯದ ಮಚ್ಚ ಮಾತ್ರ. ತಮ್ಮಯ್ಯನ ಹೆಣದ ಮುಂದೆ ನಿಂತು ಗೋವಿಂದ ವಿರುದ್ಧ ಸೇಡು ತೀರಿಸಿಕೊಳ್ಳುತ್ತೇನೆಂದು ಶಪಥಗೈದಿದ್ದ ಮಚ್ಚನ ಬೆನ್ನಿಗೆ ಇಡೀ ತಮ್ಮಯ್ಯನ ಪಡೆಯೇ ಇತ್ತು. ಗೋವಿಂದ ಅತ್ತ ಜೈಲು ಹೊಕ್ಕಿ ಕೂತಿದ್ದೇ ಕಾಮಾಕ್ಷಿಪಾಳ್ಯದ ಮಚ್ಚ ಬಲಾಢ್ಯನಾದ. ಗುರು ತಮ್ಮಯ್ಯನ ಹತ್ಯೆ ಕೇಸಲ್ಲಿ ಜೇಡರಹಳ್ಳಿ ಮತ್ತು ಗೋವಿಂದ ಇಬ್ಬರಿಗೂ ಜೀವಾವಧಿ ಶಿಕ್ಷೆ ಕೊಡಿಸುತ್ತೇನೆಂದು ಮಚ್ಚ ಕೇಸಿನ ಸಾಕ್ಷಿಗಳನ್ನು ಜೊತೆಗಿಟ್ಟುಕೊಂಡೇ ಓಡಾಡಿದ.



ಗೋವಿಂದ

ಬಹುಶಃ ಮಚ್ಚ ಬದುಕಿದ್ದರೆ ಗೋವಿಂದನಿಗೆ ಜೈಲು ಖಾಯಮ್ಮಾಗಿ ಬಿಡುತ್ತಿತ್ತೇನೋ. ಆದರೆ ತಮ್ಮಯ್ಯನ ಕೊಲೆಯ ತೀರ್ಪು ಹೊರಬರುವ ಮೊದಲೇ ಮಚ್ಚನ ಹೆಣಬಿದ್ದಿತ್ತು. Once again ಮಚ್ಚನ ಕೊಲೆಯಲ್ಲೂ ಪೋಲೀಸರು ಜೇಡರಹಳ್ಳಿ ಕೃಷ್ಣಪ್ಪನನ್ನು ಆರೋಪಿಯನ್ನಾಗಿಸಿದ್ದರು. ಅಲ್ಲಿಗೆ ತಿಮ್ಮೇನಹಳ್ಳಿ ಗೋವಿಂದನ ಪ್ರಾಣಕ್ಕೆ ಇದ್ದ ಅತೀ ದೊಡ್ಡ ಅಪಾಯ ನಿವಾರಣೆಯಾಗಿತ್ತು. ಮಚ್ಚನ ನಂತರ ಆತನ ಶಿಷ್ಯ ಕೋತಿರಾಮ ಫೀಲ್ಡಿಗಿಳಿದವನು ಲಗ್ಗೆರೆಯ ಮಂಡ್ಯ ಕೃಷ್ಣನ ಕೊಲೆ ಕೇಸಲ್ಲಿ ಜೈಲು ಪಾಲಾದವನು ಸದ್ಯ ಈಚೆ ಬರಲಾರ. ಗೋವಿಂದನನ್ನು ಮುಗಿಸಲು ನಿಂತು ಫೀಲ್ಡ್ ಮಾಡಬಲ್ಲ ತಮ್ಮಯ್ಯನ ಶಿಷ್ಯರ್‍ಯಾರೂ ಸದ್ಯ ತಿಮ್ಮೇನಹಳ್ಳಿಯಲ್ಲಿಲ್ಲ. ಸಾಲದ್ದಕ್ಕೆ ಗೋವಿಂದನ ಶಿಷ್ಯರಾದ ಸೂರಿ, ಬಿ.ಎಸ್. ರವಿ, ಹರೀಶ ಮುಂತಾದವರದೇ ಪ್ರತ್ಯೇಕ ಗ್ಯಾಂಗುಗಳಿವೆ. ಗೋವಿಂದ ಸದ್ಯಕ್ಕೆ ವಿಜಯನಗರದ ಮಟ್ಟಿಗೆ ಬಲಾಢ್ಯ. ಆತನ ಮತ್ತೊಬ್ಬ ಶಿಷ್ಯ ಪೈಪ್‌ಲೈನ್ ಕೌಡ್ಲೆ ಕೂಡ ಇತ್ತೀಚೆಗೆ ಚಿಗರಿಕೊಂಡಿದ್ದಾನೆ. ಬಹುಶಃ ಪ್ರಾಣಭೀತಿಗೆ ಬಿದ್ದು ಜೈಲೇ ತನಗೆ ಸುರಕ್ಷಿತ ಎಂದು ಬಗೆದಿದ್ದ ಗೋವಿಂದ ಇದನ್ನೆಲ್ಲ ಗಮನಿಸಿಯೇ ಜೈಲಿಂದ ಹೊರಬದ್ದಿದ್ದಾನೆ. ಕಳೆದ ಬುಧವಾರ ತಮ್ಮಯ್ಯನ ಕೊಲೆ ಕೇಸಿನಿಂದ ಖುಲಾಸೆಯಾಗಿ ಬಂದು ವಿಜಯನಗರಕ್ಕೊಂದು ರೌಂಡ್ ಹಾಕಿದ ಗೋವಿಂದನ ಪಾಲಿಗೆ ಸದ್ಯ ಆತಂಕ ಎಂದಿದ್ದರೆ ಅದು ಕೊರಂಗು ಮತ್ತು ಕೋತಿರಾಮ ಮಾತ್ರ.

ಅವರಿಬ್ಬರೂ ಹೊರಬರುವುದು ಇನ್ನಾವ ಕಾಲಕ್ಕೋ? ಅಲ್ಲಿಯ ತನಕ ಗೋವಿಂದನ ದರ್ಬಾರು ನಿರಾತಂಕ. ಈ ಮಧ್ಯೆ ವಿಜಯನಗರದ ಖಡಕ್ ಇನ್ಸ್‌ಪೆಕ್ಟರ್ ದುರ್ಗಯ್ಯ ಗೋವಿಂದನ ಬೆನ್ನಿಗೆ ಬಿದ್ದು ಅಲ್ಲಲ್ಲಿ ರೌಂಡ್ಸ್ ತೀವ್ರಗೊಳಿಸಿದ್ದಾರೆ. ಆದರೆ ಗೋವಿಂದ ಸಿಗಬೇಕಲ್ಲ!

ಪೋಲೀಸರು ಮತ್ತು ಗೋವಿಂದನ ಕಣ್ಣಾಮುಚ್ಚಾಲೆ ಅದೇನೇ ಇರಲಿ, ವಿಜಯನಗರ ಆತಂಕಗೊಂಡಿದೆ. ಅಲ್ಲೀಗ ಭೀತಿಯ ಕಾರ್ಮೋಡ ಕವಿದಿದೆ.

– ರಾ.ಸೋ

ಯಾವುದು ಮಾನವನನ್ನು ಸ್ವಾವಲಂಬಿಯನ್ನಾಗಿ, ನಿಸ್ವಾರ್ಥಿಯನ್ನಾಗಿ ಮಾಡುತ್ತದೆಯೋ ಅದೇ ಶಿಕ್ಷಣ -ಋಗ್ವೇದ

ಉಡುಪಿಯವಲ್ಲೊಂದು some-ಶೋಧನೆ
"ಸಮಾಜದ ಶಾಂತಿ ಕದಡುವ" ಲೆಫ್ಟಿಸ್ಟ್‌ಗಳು!!

ಉಡುಪಿಯ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಗಳು ಬೆಂಗಳೂರಿಗೆ ವರ್ಗಾ ಆದರೆ ಅವರು ಮೊದಲು ಮಾಡುವ ಕೆಲಸ ಏನು ಗೊತ್ತೆ? ಸಿಪಿಎಂನ ಜಿ.ಎನ್. ನಾಗರಾಜ್, ಸಿಪಿಐನ ಸಿದ್ದನಗೌಡ ಪಾಟೀಲರ ಸಮೇತ ಹಲವರನ್ನು ಜೈಲಿಗೆ ತಳ್ಳುವುದು! ಕಾರಣ: ಅವರು ಎಡಪಂಥೀಯ ವಿಚಾರಗಳ ಐಕ್ಯರಂಗ, ಕೆಂಬಾವುಟ ಎಂಬ ಪತ್ರಿಕೆಗಳನ್ನು ಪ್ರಕಟಿಸುವ 'ಅಪರಾಧ' ಮಾಡುತ್ತಿರುವುದು ಮತ್ತು ಎಡಪಂಥೀಯ ವಿಚಾರಗಳನ್ನು ಪ್ರಚಾರ ಪಡಿಸುತ್ತಿರುವುದು!

ಹೌದು, ಉಡುಪಿಯ ಡಿಸಿ, ಎಸ್ಪಿಗಳ ಪ್ರಕಾರ ಎಡಪಂಥೀಯ ವಿಚಾರಗಳನ್ನು ಪ್ರಚಾರ ಮಾಡುವುದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗಿ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ!

ಖಬರ್‌ದಾರ್ ಲೆಫ್ಟಿಸ್ಟ್ ಕಾರ್ಯಕರ್ತರೆ... ಉಡುಪಿಯ ಡಿಸಿ, ಎಸ್ಪಿಗಳು ಬೆಂಗಳೂರಿಗೆ ಬಂದರೆ ನೀವು ಅವರ ಮುಂದೆ ಲೆಫ್ಟ್, ರೈಟ್ ಮಾಡಬೇಕಾಗುತ್ತದೆ. ಸದ್ಯಕ್ಕೆ ನಿಮ್ಮ ಪುಣ್ಯ; ಕಮಿಷನರ್ ಅಜಯ ಕುಮಾರ್‌ಸಿಂಗ್‌ಗೆ ಅಷ್ಟೊಂದು 'ಬುದ್ಧಿ'ಯಿಲ್ಲ!

ಬನ್ನಿ, ಉಡುಪಿಯ ಈ ನಕಲಿಶಾಮರಂತಹ ಅಧಿಕಾರಿಗಳ ಅಸಲಿ ಕಾರ್ಯಶೈಲಿಯ ಸ್ಯಾಂಪಲ್ ಒಂದನ್ನು ಓದಿ!

13.12.2005 ರಂದು ನಮ್ಮ ವರದಿಗಾರ ಶ್ರೀರಾಮ್ ದಿವಾಣರ ಪತ್ನಿ ಶ್ರೀಮತಿ ರಾಜೇಶ್ವರಿ ದಿವಾಣರವರು ತಾವು ತರಲಿಚ್ಛಿಸಿದ್ದ ಪತ್ರಿಕೆಯ ಟೈಟಲ್ ವೆರಿಫಿಕೇಷನ್‌ಗಾಗಿ ಅರ್ಜಿ ಹಾಕುತ್ತಾರೆ. ಉಡುಪಿಯ ಜಿಲ್ಲಾಧಿಕಾರಿ ಶಾಂತರಾಜ್ ಮತ್ತು ಎಸ್ಪಿ ಮುರುಗನ್ ಎಂಬ 'ಶಾಂತಿ ಪಾಲಕರು' ರಾಜೇಶ್ವರಿಯವರ ಪತ್ರಿಕೆ ಟೈಟಲ್ ವೆರಿಫಿಕೇಷನ್ ವಿಷಯದಲ್ಲಿ ತೀವ್ರ 'ಸಂಶೋಧನೆ' ನಡೆಸುತ್ತಾರೆ.

ಅವರ **'some-ಶೋಧನಾ'** ವರದಿಯ ಸಾರಾಂಶ ಇಲ್ಲಿದೆ:

"ಅರ್ಜಿದಾರ್ತಿ ರಾಜೇಶ್ವರಿಯವರ ಗಂಡ ಶ್ರೀರಾಮ ದಿವಾಣರು ಪ್ರಸ್ತುತ 'ಲಂಕೇಶ್ ಪತ್ರಿಕೆ'ಯ ಉಡುಪಿ ವರದಿಗಾರರಾಗಿದ್ದು ಅಲ್ಲದೇ, ಉಡುಪಿ ಜಿಲ್ಲಾ ಕೋಮು ಸೌಹಾರ್ದ ವೇದಿಕೆಯ ಕಾರ್ಯದರ್ಶಿ, ಮಾನವ ಧರ್ಮ ಜನಜಾಗೃತಿಯ ಸಂಚಾಲಕ, ಕೋಮು ಸೌಹಾರ್ದ ವೇದಿಕೆಯ ಸೆಂಟ್ರಲ್ ಕಮಿಟಿಯ ಸದಸ್ಯರೂ ಆಗಿದ್ದು ಸದ್ರಿಯವರು ಎಡಪಂಥೀಯ ವಿಚಾರಧಾರೆ ಇರುವ ಸಂಘಟನೆಗಳು ಹಾಗೂ ನಕ್ಸಲೀಯರಿಗೆ ಬೆಂಬಲ ನೀಡುವ ವ್ಯಕ್ತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದವರಾಗಿರುತ್ತಾರೆ. ಅಲ್ಲದೇ ಶ್ರೀರಾಮ ದಿವಾಣರು ದಿನಾಂಕ **9.2.2005** ರಂದು ಬೆಂಗಳೂರಿನ ಬಸವ ಕಲ್ಯಾಣ ಕೇಂದ್ರದಲ್ಲಿ ನಕ್ಸಲೀಯ ಪ್ರತಿಭಟನಾ ಸಭೆಯಲ್ಲಿ ಭಾಗಹಿಸಿದ್ದು ಅಲ್ಲಿಗೆ ಮಾಹಿತಿ ಸಂಗ್ರಹಿಸಲು ಹೋಗಿದ್ದ ಉಡುಪಿ ಪೋಲೀಸರ ಮೇಲೆ ಹಲ್ಲೆ ನಡೆಸಿ ಪೋಲೀಸರ ವಿಡಿಯೋ ಕ್ಯಾಮರಾವನ್ನು ಪುಡಿ ಮಾಡಿದ್ದು, ಈ ಬಗ್ಗೆ ಸದ್ರಿಯವರ ಮೇಲೆ ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅರ್ಜಿದಾರರಾದ ಶ್ರೀಮತಿ ರಾಜೇಶ್ವರಿಯವರು 'ಮನೆವಾರ್ತೆ' ಕೆಲಸ ಮಾಡಿಕೊಂಡಿದ್ದು, ಶ್ರೀರಾಮ ದಿವಾಣರ ಪತ್ನಿಯಾಗಿದ್ದು ಶ್ರೀರಾಮ ದಿವಾಣರ ಎಲ್ಲಾ ಸಭೆ, ಪ್ರತಿಭಟನೆ ಸಭೆಗಳಲ್ಲಿ ಭಾಗವಹಿಸಿ ಬೆಂಬಲ ನೀಡುತ್ತಾರೆ. ಅರ್ಜಿದಾರರ ಗಂಡ ಶ್ರೀರಾಮ ದಿವಾಣರು ಈ ಹಿಂದೆ ಹೊಸ ಪತ್ರಿಕೆ ನಡೆಸಲು ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರಿಗೆ ಪತ್ರಿಕೆ ನಡೆಸಲು ಅನುಮತಿ ನೀಡಿರಲಿಲ್ಲ, ಈಗ ರಾಜೇಶ್ವರಿಯವರಿಗೆ ಅನುಮತಿ ನೀಡಲು ಶಿಫಾರಸ್ಸು ಮಾಡಿದಲ್ಲಿ, ಮುಂದೆ ಅರ್ಜಿದಾರರ ಗಂಡ ಶ್ರೀರಾಮ ದಿವಾಣರು ಇದನ್ನು ದುರುಪಯೋಗಪಡಿಸಿಕೊಂಡು ತಮ್ಮ ಪತ್ನಿ ನಡೆಸುವ ಪತ್ರಿಕೆಯಲ್ಲಿ ಎಡಪಂಥೀಯ ವಿಚಾರಧಾರೆಗಳನ್ನು, ನಕ್ಸಲೀಯರನ್ನು ಬೆಂಬಲಿಸುವ ವಿಚಾರಗಳನ್ನು ಪ್ರಕಟಿಸಿ, ಸಮಾಜದ ಶಾಂತಿ ಕದಡುವ ಸಂಭವವಿದ್ದು, ಇದರಿಂದಾಗಿ ಸಮಾಜದಲ್ಲಿ ಅಶಾಂತಿ ಉಂಟಾಗಿ, ಕಾನೂನು ಸುವ್ಯವಸ್ಥೆ ಹದಗೆಡುವುದಾಗಿ ತಿಳಿದುಬಂದಿದೆ.

ಆದ್ದರಿಂದ ಮೇಲ್ಕಂಡ ತನಿಖಾ ವರದಿಯಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದ್ದು ನಿಮ್ಮ (ರಾಜೇಶ್ವರಿಯವರ) ಅರ್ಜಿಯನ್ನು ಪತ್ರಿಕೆಯ ಟೈಟಲ್ ವೆರಿಫಿಕೇಷನ್‌ಗಾಗಿ ಆರ್.ಎನ್.ಐ. ನವದೆಹಲಿ ಇವರಿಗೆ ಕಳುಹಿಸಲು ಶಿಫಾರಸು ಮಾಡಿರುವುದಿಲ್ಲ ಎಂಬ ವಿಚಾರವನ್ನು ಈ ಮೂಲಕ ನಿಮಗೆ ತಿಳಿಯಪಡಿಸಿದೆ."

-ಉಡುಪಿ ಜಿಲ್ಲಾಧಿಕಾರಿ

ಓದಿದಿರಲ್ಲ ಈ ಇಬ್ಬರು ಭೂಪರ ಸಂಶೋಧನೆಯನ್ನು... ಧಾರವಾಡದ ಮೆಂಟಲ್ ಹಾಸ್ಪಿಟಲ್‌ನಲ್ಲಿರಬೇಕಾದವನನ್ನು ಡಿ.ಸಿ. ಸೀಟಿನಲ್ಲಿ, ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿರಬೇಕಾದವನನ್ನು ಎಸ್ಪಿ ಸೀಟಿನಲ್ಲಿ ಕೂಡಿಸಿದರೆ ಇನ್ನೆಂತಹ **some-ಶೋಧನೆ**ಗಳು ಬಂದಾವು ಹೇಳಿ?

ಎಡಪಂಥೀಯ ವಿಚಾರ ಬಲ್ಲವರು, ನಕ್ಸಲಿಸಂ ಕುರಿತು ಮಾತನಾಡುವವರೆಲ್ಲ ರಾಷ್ಟ್ರದ್ರೋಹಿಗಳು ಎಂಬಂತಾಡುತ್ತಿರುವ ಈ ಬುದ್ಧಿಗೇಡಿ ಅಧಿಕಾರಿಗಳಿಗೆ ತಾವು ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ, ಅದರ ಸಂವಿಧಾನದಡಿಯೇ ಸಂಬಳ ಪಡೆಯುತ್ತಿರುವುದು ಗೊತ್ತಿಲ್ಲವೆ? ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಏನೆಂಬುದರ ಕುರಿತು 'ಅಆಇಈ' ಗೊತ್ತಿಲ್ಲದ ಇಂತಹ ಹೊಣೆಗೇಡಿ ಅಧಿಕಾರಿಗಳಿರುವಾಗ ಸಂಘ ಪರಿವಾರದ ಪುಂಡರಿಗೆ ಬಾಲ ಬಿಚ್ಚಲು ಇನ್ನೇನು ಬೇಕು? ಕೋ-ಬಾ ಸರ್ಕಾರ ಬಂದ ಮೇಲಂತೂ ಕರಾವಳಿಯಲ್ಲಿ ನಿತ್ಯವೂ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಿಂಸಾಚಾರಗಳಿಗೆ ಈ ಅಧಿಕಾರಿಗಳ ಮೌನ ಕುಮ್ಮಕ್ಕೆ ಕಾರಣವಲ್ಲವೆ?

ಅದು ಬಿಡಿ; ಈ ಇಬ್ಬರು ಅಧಿಕಾರಿಗಳಿಗೆ ಸ್ವಲ್ಪ 'ಕಿಡಿಗೇಡಿ' ಬುದ್ಧಿ, ಸ್ವಲ್ಪ 'ಹಾಸ್ಯ' ಮನೋಭಾವವೂ ಇದ್ದಂತಿದೆ. ಅದಕ್ಕೇ ಅವರು ವೃತ್ತಿನಿರತ ಟೈಲರ್ ಆಗಿರುವ ಅರ್ಜಿದಾರ್ತಿ ರಾಜೇಶ್ವರಿ ದಿವಾಣರನ್ನು 'ಮನೆವಾರ್ತೆ' ಕೆಲಸದವಳನ್ನಾಗಿ ಮಾಡುತ್ತಾರೆ, ಶ್ರೀರಾಮ ದಿವಾಣರನ್ನು ಹೇಳದೆ ಕೇಳದೆ ಮಾನವಧರ್ಮ ಜನಜಾಗೃತಿಯ ಸಂಚಾಲಕರನ್ನಾಗಿ 'ಆಯ್ಕೆ' ಮಾಡುತ್ತಾರೆ... ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಸುಳ್ಳು ಕೇಸನ್ನು ತಾನೇ ಹಾಕಿಸಿರುವ ಮುರುಗನ್ ಎಂಬ ಮಾನಗೇಡಿ ಅದನ್ನೂ ಇಲ್ಲಿ ಬಳಸಿಕೊಳ್ಳುತ್ತಾನೆ! ಇವರ 'ಸಂಶೋಧನಾ' ತಾಕತ್ತು ಎಂತಹದ್ದು ನೋಡಿ:

"ಎಡಪಂಥೀಯ ವಿಚಾರಗಳಿಂದ ಸಮಾಜದ ಶಾಂತಿ ಕೆಡುತ್ತದೆ" ಎಂದು **some** ಶೋಧನೆ ಮಾಡಿರುವ ಈ ಇಬ್ಬರಿಗೂ ಇತ್ತೀಚೆಗೆ ರಾಜಸ್ಥಾನದಲ್ಲಿ ಆರಂಭಗೊಂಡಿರುವ ಆರ್‌ಎಸ್‌ಎಸ್ ಯುನಿವರ್ಸಿಟಿ 'ಡಾಕ್ಟರೇಟ್' ನೀಡಲು ತಯಾರಾಗಿದೆಯಂತೆ!

ಅಂದಂತೆ 'ಲಂಕೇಶ್' ವಾರಪತ್ರಿಕೆಯ ವರದಿಗಾರರಾಗಿರುವ ಶ್ರೀರಾಮ ದಿವಾಣರನ್ನು 'ಲಂಕೇಶ್ ಪತ್ರಿಕೆ'ಯ ಉಡುಪಿ ವರದಿಗಾರನೆಂದು ಸುಳ್ಳು ಪ್ರಚಾರ ಮಾಡುವ ಮೂಲಕ 'ಲಂಕೇಶ್ ಪತ್ರಿಕೆ'ಯ ಉಡುಪಿ ಜಿಲ್ಲಾ ವರದಿಗಾರರಾದ ವಿವೇಕಾನಂದ ಹಾಂಡೇಲ ಮತ್ತು ಅವರ ಸಂಪಾದಕರ ಮಧ್ಯೆ ಕಿಡಿ ಹಚ್ಚುವ ಕುಚೋದ್ಯತನವನ್ನು ಈ ಇಬ್ಬರು ಬುದ್ಧಿಗೇಡಿ ಅಧಿಕಾರಿಗಳು ಮಾಡಿಬಿಟ್ಟಿದ್ದಾರೆ.

ಎಡಪಂಥೀಯರೇ, ಆದಷ್ಟು ಎಚ್ಚರವಾಗಿರಿ!

ಸಮಾಜದ "ಶಾಂತಿ ಕದಡುವ" ನಿಮ್ಮನ್ನು ಈ ಇಬ್ಬರು **'stick'** ಅಧಿಕಾರಿಗಳು ರಾತ್ರೋರಾತ್ರಿ ಬಂಧಿಸಿಬಿಟ್ಟಾರು!

-ಮಲ್ಲಿ

ಕನ್ನಡ ಭಾಷಾ ಕೀಟಗಳಿಗೆ ಏನು ಮಾಡಬೇಕು

ಜೆಡಿಎಸ್ ಥಿಯೇಟರಿನ ನಟ ಭಯಂಕರ ದೇವೇಗೌಡರು ತಮ್ಮ ಪುತ್ರನ ಜತೆಯಿದ್ದ ನಲವತ್ತು ಜನ ಕಳ್ಳರ ಅಮಾನತ್ತಿನ ಅರ್ಜಿಯನ್ನು ಜೇಬಿನಿಂದ ತೆಗೆದು ಹರಿದು ಬಿಸಾಡಿದರಂತಲ್ಲಾ. ಇದನ್ನು ಕಂಡು ಕಕ್ಕಾಬಿಕ್ಕಿಯಾದ ಎಂ.ಪಿ. ಪ್ರಕಾಶ್ "ಯಾಕ್ ಸಾರ್ ಹೀಗೇ ಮಾಡಿದ್ರಿ?" ಎಂದು ಕೇಳಲಾಗಿ, "ಅವರ ಸಸ್‌ಪೆನ್‌ಶನ್ ಆರ್ಡರ್ ಕಾಪಿ ಶಿಸ್ತು ಸಮಿತಿ ಮುಂದಿದೆ. ಅದಕ್ಕಿಂತ ಮುಖ್ಯವಾಗಿ ಅವರನ್ನ ಸಸ್ಪೆಂಡ್ ಮಾಡುವ ಸಂದರ್ಭದಲ್ಲಿದ್ದ ಸಿಟ್ಟು ಈಗ ನನ್ನಲ್ಲಿಲ್ಲ, ಆದಕ್ಕೆ ಹರಿದು ಬಿಸಾಡಿದೆ" ಎಂದರಂಥಲ್ಲಾ. "ಹಾಗಾದರೆ ಆ ಸಿದ್ದರಾಮಯ್ಯನ ಗುಂಪು?" ಎಂದು ಪ್ರಕಾಶ್ ಕೇಳಲಾಗಿ "ಆ ಕಪಟಿಗಳನ್ನು ನನ್ನ ಜೀವನದಲ್ಲಿ ಕ್ಷಮಿಸಲ್ಲ, ಅವರನ್ನು ಹತ್ತಿರ ಬಿಟ್ಟುಕೊಂಡರೆ ಕುಮಾರನಿಗೆ ತೊಂದರೆ ಕೊಡುವ ಸಂಭವವಿದೆ" ಎಂದರಂತಲ್ಲಾ. ಈ ಮಾತಿನಿಂದ ಸಿಟ್ಟು ತೋರಿಸಿಕೊಳ್ಳದ ಪ್ರಕಾಶ್, ಮಾಜಿ ಪ್ರಧಾನಿ ಚಂದ್ರಶೇಖರರು ಬರೆದ ಜೀವನ ಚರಿತ್ರೆ ಪುಸ್ತಕದ ಬಿಡುಗಡೆ ಸಮಾರಂಭಕ್ಕೆ ಹೋಗಿ ಅಲ್ಲಿ ಯಾರಿಗೂ ಅರ್ಥವಾಗದ ನವ್ಯ ಭಾಷೆಯಲ್ಲಿ ಮಾತನಾಡಿದರಂತಲ್ಲಾ, ಪ್ರಕಾಶರ ಭಾಷಣದ ತಿರುಳನ್ನು ತೆಗೆದುಕೊಂಡು ಹೋದ ಎಐಸಿಜೆಡಿ ಹೈದರು ಅದನ್ನು ಅಧ್ಯಯನ ಮಾಡಿದ ಮೇಲೆ 'ಅಕ್ಕಿ ಮೇಲೆ ಆಸೆ, ನೆಂಟರ ಮೇಲೂ ಪ್ರೀತಿ' ಎಂಬ ವ್ಯಕ್ತಿತ್ವವೊಂದು ಗೋಚರವಾಯ್ತಂತಲ್ಲಾ, ಥೂತ್ತೇರಿ!



* * * * * * * * * *

ದೇವೇಗೌಡರು ಇದ್ದಕ್ಕಿದ್ದಂತೆ ಕುಮಾರಸ್ವಾಮಿ ಟೀಮನ್ನು ಅಮಾನತು ಮಾಡಿದ ಅರ್ಜಿಯನ್ನು ತೆಗೆದುಹಾಕಲು ಕಾರಣವೇನೆಂದು ಸಂಬಂಧ ಪಡದವರು ಚರ್ಚಿಸುತ್ತಿರಬೇಕಾದರೆ, ಇಡೀ ಕರ್ನಾಟಕದ ಜನ ಪಾರ್ಟಿಯ ತಾಂತ್ರಿಕ ಸಮಸ್ಯೆಗಳ ಅರಿವಿನಿಂದ ಹೊರಗುಳಿದು ಅಪ್ಪ ಮಗನನ್ನು ಎಂದೋ ಅರ್ಥ ಮಾಡಿಕೊಂಡು ಕಟ್ಟ ಮುದಗಿದ್ದಾರಂತಲ್ಲಾ, ತಾವು ಇಲ್ಲಿ ಮಾಡಿದ ರಾಜಕಾರಣದ ಅರಿವಿರುವ ದೇವೇಗೌಡ, ಈ ಮುಖ ಹೊತ್ತು ರಾಷ್ಟ್ರ ರಾಜಕಾರಣ ಮಾಡುವುದು ಹೇಗೆಂದು ಯೋಚಿಸಿ, "ನಾನು ಇನ್ನ ಮುಂದೆ ಕರ್ನಾಟಕದ ಅದರಲ್ಲೂ ಹಾಸನ ಹರದನಹಳ್ಳಿ ಮಟ್ಟದ ರಾಜಕಾರಣ ಮಾಡಿಕೊಂಡು ಕಾಲ ಮುಗಿಸುತ್ತೇನೆ" ಎಂದಿದ್ದಾರಂತಲ್ಲಾ.

ಇದರ ಫಲವಾಗಿ ಈಗಾಗಲೇ ಬಿಜೆಪಿ ಅಧ್ಯಕ್ಷ ಸದಾನಂದ ಗೌಡರಿಗೆ ಪತ್ರ ಬರೆಯತೊಡಗಿರುವ ದೇವೇಗೌಡರ ಒಂದು ಪತ್ರ ಹೀಗಿದೆ:

"ಮಾನ್ಯ ಸದಾನಂದಗೌಡರೇ,

ತಾವು ಬಿಜೆಪಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದು ನಿಮ್ಮ ಪಾರ್ಟಿಯ ಬೆಂಬಲ ಮತ್ತು ಸಹಾಯದಿಂದ ಎಂದು ಭಾವಿಸುವ ಅಗತ್ಯವಿಲ್ಲ. ನೀವು ಚುನಾವಣೆಗೆ ನಿಂತು ಎಲ್ಲಿ ಸೋತುಬಿಡುತ್ತೀರೋ ಎಂದು ಹೆದರಿದ ನಾನು ಎ.ಕೆ. ಸುಬ್ಬಯ್ಯನವರನ್ನು ನಿಲ್ಲಿಸಿ ನೀವು ಗೆಲ್ಲುವಂತೆ ನೋಡಿಕೊಂಡೆ! ಆದ್ದರಿಂದ ನಿಮ್ಮ ಗೆಲುವಿನಲ್ಲಿ ನಮ್ಮ ಶ್ರಮವೆಷ್ಟಿದೆ ಎಂಬುದನ್ನು ನೆನೆಯುತ್ತಾ ನಮ್ಮ ಕುಮಾರನ ಸರಕಾರಕ್ಕೆ ತೊಂದರೆಯಾಗದಂತಹ ಹೇಳಿಕೆ ಕೊಡುತ್ತಾ ಸಹಕಾರ ಕೊಡಬೇಕು. ನೀವು ನಮ್ಮವರೆಂದು ಈ ಮಾತನ್ನು ಹೇಳುತ್ತಿದ್ದೇನೆ.

ಇಂತಿ ನಟಸಾರ್ವಭೌಮ,

-ದೇವೇಗೌಡ"


ಈ ಪತ್ರ ಗೌಪ್ಯವಾಗಿರಲಿ ಎಂಬ ಒಕ್ಕಣೆ ಸೇರಿಸಿಲ್ಲವಂತಲ್ಲಾ, ಥೂತ್ತೇರಿ!!

* * * * * * * * * *

ಕರ್ನಾಟಕದ ದೊಡ್ಡ ಸಮಸ್ಯೆಯಾಗಿ ಬೆಳೆಯುತ್ತಿರುವ ರಾಮಚಂದ್ರಾಪುರದ ಮಠಕ್ಕೆ, ರಾಜ್ಯದ ರಾಜ್ಯಪಾಲರಿಂದ ಹಿಡಿದು ಪುಡಿ ರಾಜಕಾರಣಿಗಳೆಲ್ಲ ದೌಡಾಯಿಸುತ್ತಿವೆಯಂತಲ್ಲಾ. ಇಡೀ ರಾಜ್ಯವನ್ನು ತ್ರೇತಾಯುಗಕ್ಕೆ ತೆಗೆದುಕೊಂಡು ಹೋಗುವ ಸಂಕಲ್ಪ ಮಾಡಿರುವ ರಾಘವೇಶ್ವರನೆಂಬ ರಗಳೆ ಸ್ವಾಮಿ ತನ್ನ ಜೋಳಿಗೆ ತುಂಬಿಸಿಕೊಳ್ಳುವ ಕಾರ್ಯಕ್ರಮದ ನಡುವೆಯೇ ಬಡ ಮಕ್ಕಳು ನೋಡಲೂ ಸಿಗದ ತುಪ್ಪವನ್ನು ಬೆಂಕಿಗೆ ಸುರಿದು ಕುಣಿಯತೊಡಗಿದ್ದಾನಂತಲ್ಲಾ, ಇಂತಹ ಮೂರ್ಖ ಕೆಲಸಗಳನ್ನು ಪ್ರಶ್ನೆ ಮಾಡದ ಮಂದಮತಿಗಳಂತಹ ರಾಜಕಾರಣಿಗಳು ಆತನ ಜೋಳಿಗೆಗೆ ಕಂತೆ ಕಂತೆ ಹಣವನ್ನು ಎಸೆದು ಹೋಗುತ್ತಿರುವುದಲ್ಲದೆ, "ಇಲ್ಲಿಗೆ ಬಂದರೆ ನಮಗೂ ಒಳ್ಳೆ ಬುದ್ಧಿ ಮತ್ತು ಲದ್ದಿ ಸಿಗುತ್ತದೆ" ಎಂದು ಹಾಡಿ ಹೊಗಳುತ್ತಿವೆಯಂತಲ್ಲಾ. ಈ ಪೈಕಿ ಕುಮಾರ್ ಬಂಗಾರಪ್ಪನೆಂಬ ಎಡಬಿಡಂಗಿ ರಾಜಕಾರಣಿ "ರಾಮಾಯಣ ಪಾತ್ರದ ಜಾಗಕ್ಕೆ ಬಂದರೆ ನನಗೆ ಪಿತೃವಾಕ್ಯ ಪರಿಪಾಲನೆಯ ನೆನಪಾಗುತ್ತದೆ. ಆದರೆ ನಾನು ಪಿತೃವಾಕ್ಯ ಪಾಲಿಸದೆ ವನವಾಸ ಅನುಭವಿಸುತ್ತಿದ್ದೇನೆ. ಇತ್ತ ಮಂತ್ರಿ ಪದವಿಯೂ ಸಿಗಲಿಲ್ಲ, ಅತ್ತ ತಂದೆ ತಾಯಿಯ ಪ್ರೀತಿಯೂ ಸಿಗಲಿಲ್ಲ. ಕಾಗೋಡು ತಿಮ್ಮಪ್ಪನ ಮಾತು ಕೇಳಿ ಕಾಡಿಗೆ ಹೋಗುವಂತಾಗಿದೆ" ಎಂಬರ್ಥ ಬರುವಂತೆ ಗೋಳಾಡಿದನಂತಲ್ಲಾ, ಥೂತ್ತೇರಿ!!

* * * * * * * * * *

ಅಣ್ಣನವರ ನಿಧನಾನಂತರ ಕರ್ನಾಟಕದ ಜನಸ್ತೋಮ ಅಶ್ರುಪೂರಿತ ನಯನಗಳನ್ನು ಟಿವಿ ಪರದೆಗೆ ನೆಟ್ಟು ಕೂತಿರುವಾಗ, ಟಿವಿ ಸುದ್ದಿ ಓದುವವರು ಶಾನೆ ಮನರಂಜನೆ ಒದಗಿಸಿದರಂತಲ್ಲಾ, ಸುದ್ದಿ ಓದುತ್ತಿದ್ದ ಮಹಿಳೆಯೊಬ್ಬಳು ಪರಂಗಿ ಬಣ್ಣ ಬಳಿದುಕೊಂಡು, ಹುಬ್ಬು ತಿದ್ದಿಕೊಂಡು ಚಾಡಿ ಹೇಳುತ್ತಾ ಕುಳಿತವಳಂತೆ ಕಾಣುವುದೇ ಮೋಜಿನದಾಗಿರುವಾಗ "ಗೋಕಾಕ ಚಳುವಳಿಯಲ್ಲಿ ಭಾಗವಹಿಸಿದ ರಾಜಕುಮಾರ್ ನಿಧನರಾಗಿದ್ದಾರೆ. ಈಗಾಗಲೇ ಕಂಠೀರವ ಸ್ಟೇಡಿಯಂಗೆ ಪಾರ್ಥಿವ ಶರೀರವನ್ನು ತರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ವರದಿಗಾರ ನಾಣಯ್ಯನವರನ್ನು ಸಂಪರ್ಕಿಸೋಣ" ಎನ್ನುತ್ತಾ



"ನಾಣಯ್ಯನವರೆ, ಹಲೋ ನಾಣಯ್ಯನವರೆ."

"............."

"ಹಲೋ ನಾಣಯ್ಯ?"

"ಹೇಳಿ ಮೇಡಂ ಕೇಳ್ತಾಯಿದೆ."

"ಅಲ್ಲಿ ಸ್ಟೇಡಿಯಂನಲ್ಲಿ ಏನೇನು ನಡೆದಿದೆ?"

"ಇಲ್ಲಿ ಆ ಇದು ಪೋಲೀಸರು ಬಂದವ್ರೆ, ಜನಗಳು ಬಂದವ್ರೆ, ಆಮೇಲೆ ಆ ಆ ಆ...."

"ರಾಜ್‌ಕುಮಾರ್ ಪಾರ್ಥಿವ ಶರೀರ ಇಟ್ಟಿದಾರ ಅಲ್ಲಿ?"

"ಹೌದು ಮೇಡಂ, ಇಲ್ಲೇ ಆ ಇದರಲ್ಲಿ ಆ ಒಂದು ಸ್ಟೇಡಿಯಂ ಮೂಲೇಲಿ ಇಟ್ಟಿದ್ದಾರೆ. ಜನಗಳು ಬಂದು, ತುಂಬ ಜನ ನೋಡ್ತಯಿದಾರೆ. ಪೋಲೀಸರು ಲಾಟಿ ಚಾರ್ಜ ಮಾಡ್ತಾಯಿದ್ದಾರೆ." ಥೂತ್ತೇರಿ!!

* * * * * * * * * *

ರಾಜಕುಮಾರರ ಪಾರ್ಥಿವ ಶರೀರವನ್ನು ಕಂಠೀರವ ಸ್ಟುಡಿಯೋಗೆ ತರುವ ಮುನ್ನ ಮತ್ತದೇ ಚಾಡಿ ಮಾತುಗಳು ಮುಂದುವರಿದಿದ್ದವಲ್ಲಾ, ಮತ್ಯಾರೋ ಪುಣ್ಯಾತಗಿತ್ತಿ "ಈಗ ಹೆಚ್ಚಿನ ಮಾಹಿತಿಗಾಗಿ ನಮ್ಮ ಸುಘೋಶ್‌ರನ್ನ ಸಂಪರ್ಕಿಸೋಣ" ಎಂದವಳೇ

"ಸುಘೋಷ್, ಸುಘೋಷ್!"

"ಹೇಳಿ, ಮೇಡಂ ಕೇಳ್ತಾಯಿದೆ"

"ಕಂಠೀರವ ಸ್ಟುಡಿಯೋದಲ್ಲಿ ಏನೇನು ನಡೆದಿದೆ?"

"ಮೇಡಂ ಇಲ್ಲಿ ಸಮಾದಿ ಮಾಡೋ ಜಾಗದಲ್ಲಿ ಆದೇ ಈ ಕಂಠೀರವ ಸ್ಟುಡಿಯೋದ ಆವರಣದಲ್ಲಿ, ಆ ಇದು ಗುಂಡಿ ತೆಗೆದಿದ್ದಾರೆ. ಆಮೇಲೆ ಇಲ್ಲಿಗೂ ಅಭಿಮಾನಿಗಳು ಬಂದಿದಾರೆ. ಆ ಇದು ಆ ಪೋಲೀಸರು ಇಲ್ಲೂ ಇದಾರೆ. ಕೆಲವರು ರಾಜ್‌ಕುಮಾರ್ ನಿಧನದಿಂದ ಆ ಇದು ಗಲಭೆ, ಗಲಾಟೆ ಮಾಡ್ತ ಆ ಇದು"


"ಪೋಲೀಸ್‌ನೋರು ಏನು ಮಾಡ್ತಯಿದಾರೆ?"

"ಅವ್ರು ಆ ಇದು ಟಿಯರ್ ಗ್ಯಾಸ್ ಇದನ್ನ ಆ ಸಿಡುಸ್ತಾಯಿದಾರೆ. ಆ, ಆ, ಆ" ಎಂದು ಅಟ್ಟೀಪಾರಿಯಂತೆ ಬೆಟ್ಟೆಟ್ಟೆ ಮಾಡುತ್ತಿದ್ದ ವಾಹಿನಿದಾರನ ಪಜೀತಿ ಕೇಳಿದ ಕನ್ನಡಿಗರು "ಅಯ್ಯೋ, ಕಂಡದ್ದನ್ನು ಕಂಡಂತೆ ಹೇಳುವ ಭಾಷೆಯೇ ಇಲ್ಲವಲ್ಲಾ ಇವರಲ್ಲಿ, ರಾಜ್‌ಕುಮಾರ್ ಜೊತೆ ನಮ್ಮ ಸುಂದರ ಸುಲಲಿತ ಕನ್ನಡವೂ ಹೋಗುತ್ತಿದೆಯಲ್ಲಾ" ಎಂದು ಅಳತೊಡಗಿದರಂತಲ್ಲಾ. ಈ ಟಿವಿಯೊಳಕ್ಕೆ ಸೇರಿಕೊಂಡಿರುವ ಕನ್ನಡ ಭಾಷೆ ಕೀಟಗಳನ್ನು ಏನು ಮಾಡಬೇಕೆಂಬುದೇ ಕನ್ನಡಿಗರ ಕೊರಗಾಗಿದೆಯಂತಲ್ಲಾ, ಥೂತ್ತೇರಿ!!

-ಯಾಹೂ


ಶಿಕ್ಷಣ ದೇಶಕ್ಕಾಗಿ ಹಾಗೂ ದೇಶಾಭಿಮಾನಕ್ಕಾಗಿ ಪಡೆಯುವ ತರಬೇತಿಯಾಗಿದೆ -ಚಾಣಕ್ಯ

ಪ್ರಮೋದ್ ಮಹಾಜನ್ ಭಾರತದ ಬಹುತೇಕ ರಾಜಕಾರಣಿಗಳಂತೆ ಓರ್ವ ಭ್ರಷ್ಟ, ಕೋಮುವಾದಿ ಎಂಬುದು ನಿಜ. ಆದರೆ ಅದಕ್ಕೆ ಪ್ರವೀಣ್ ದುಷ್ಟನಾಗಿ ಗುಂಡು ಹಾರಿಸುವುದು ಖಂಡಿತಾ ತಪ್ಪು. ಯಾವುದೇ ಕಾರಣಕ್ಕೂ ಪ್ರವೀಣ್‌ನ ಈ ಕೃತ್ಯವನ್ನು ಸಮರ್ಥಿಸಲಾಗುವುದಿಲ್ಲ. ಅವರು ಬೇಗ ಗುಣಮುಖರಾಗಲಿ.



ಲಂಚದ ಹಣಕ್ಕಾಗಿ ಗುಂಡೇಟು

ಭ್ರಷ್ಟ ಪ್ರಮೋದ್! ದುಷ್ಟ ಪ್ರವೀಣ್!



ಬಿಜೆಪಿಯ ಹೊಸ ತಲೆಮಾರಿನ ನಾಯಕ ಪ್ರಮೋದ್ ಮಹಾಜನ್ ಗುಂಡೇಟು ತಿಂದು ಮುಂಬೈನ ಆಸ್ಪತ್ರೆಯಲ್ಲಿ ಬದುಕು-ಸಾವಿನ ನಡುವೆ ತೂಗಾಡುತ್ತಿದ್ದಾರೆ. ಅವರು ಬೇಗ ಗುಣಮುಖರಾಗಲಿ. ಆದರೆ ವಿಪರ್ಯಾಸ ನೋಡಿ... ಪ್ರಮೋದ್ ಮಹಾಜನ್ ಎಂಬ ದೇಶಭಕ್ತ, ಉಗ್ರ ಹಿಂದೂವಾದಿ, ರಾಮಸೇವಕನ ಮೇಲೆ ಗುಂಡು ಹಾರಿಸಿದ್ದು ಯಾವ ಮುಸ್ಲಿಂ ಉಗ್ರವಾದಿಯೂ ಅಲ್ಲ, ಐಎಸ್‌ಐ ಏಜೆಂಟರೂ ಅಲ್ಲ, ನಕ್ಸಲ್ ಹೋರಾಟಗಾರರೂ ಅಲ್ಲ, ಕ್ರಿಶ್ಚಿಯನ್ ಮೂಲಭೂತವಾದಿಯೂ ಅಲ್ಲ... ಬದಲಾಗಿ ಆತನ ಖಾಸಾ ತಮ್ಮ ಪ್ರವೀಣ್‌ನೇ ಏಳು ಗುಂಡುಗಳನ್ನು ಹಾರಿಸಿದ್ದಾನೆ: "ಅವನನ್ನು ಸಾಯಿಸುವುದೇ ನನ್ನ ಉದ್ದೇಶವಾಗಿತ್ತು" ಎಂದು ಪೋಲೀಸರ ಮುಂದೆ ಒಪ್ಪಿಕೊಂಡಿದ್ದಾನೆ. ಇಲ್ಲಿನ ಇನ್ನೊಂದು ವಿಪರ್ಯಾಸ ನೋಡಿ: ರಾಮನ ಹೆಸರಲ್ಲಿ, ಹಿಂದೂತ್ವದ ನೆಪದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟಿ, ದೇಶವನ್ನು ಮುಸ್ಲಿಮರಿಂದ ರಕ್ಷಿಸಲು ಪ್ರಯತ್ನಿಸಿದ್ದ ಪ್ರಮೋದ್ ಮಹಾಜನ್‌ಗೆ ತನ್ನ ಬಗಲಲ್ಲೇ ತಮ್ಮ ಪ್ರವೀಣನ ರೂಪದಲ್ಲಿ ಒಬ್ಬ ಮೀರ್ ಸಾದಿಕ್‌ನಿದ್ದಾನೆ ಅಂತ ಗೊತ್ತಾಗಲಿಲ್ಲ. ತನ್ನ ರಕ್ತವನ್ನೇ ಹಂಚಿಕೊಂಡು ಬೆಳೆದಿದ್ದ ತಮ್ಮನೇ 'ಉಗ್ರವಾದಿ'ಯಾಗಿ ಗುಂಡು ಹಾರಿಸುತ್ತಾನೆ ಅಂತ ಎಂದೂ ಲೆಕ್ಕ ಹಾಕಿರಲಿಲ್ಲ.

ಅಡ್ವಾಣಿಯವರ ರಥಯಾತ್ರೆಯ ರೂವಾರಿ ಮಹಾಜನ್‌ಗೆ ಅಂದು ಆ ರಥಯಾತ್ರೆ ಹೋದಲ್ಲೆಲ್ಲ ನಡೆದ ಗಲಭೆಗಳಲ್ಲಿ ಹರಿದಿದ್ದ ರಕ್ತ ಗೊತ್ತಾಗಲಿಲ್ಲ. ಆದರೆ ಅದೇ ರಕ್ತ ತನಗೆ ಮತ್ತು ತನ್ನ ಪಕ್ಷಕ್ಕೆ ಯಶಸ್ಸು ತಂದು ಕೊಟ್ಟದ್ದು, ಕೋಟ್ಯಂತರ ರೂಪಾಯಿಗಳ ಆಸ್ತಿ ಗಳಿಸಿಕೊಟ್ಟದ್ದು ಮುಂದೊಂದು ದಿನ ತನ್ನ ರಕ್ತವನ್ನೇ ಹರಿಸಬಲ್ಲದು ಎಂದೂ ಗೊತ್ತಾಗಲಿಲ್ಲ. ಆದರೆ ಇದು ದುರಂತವಾದರೂ ಸತ್ಯ....

ಹೇಳಿಕೇಳಿ ಈ ನಮ್ಮ ನಾಡು ಬರೀ ರಾಮಾಯಣದ ನಾಡಲ್ಲ, ದಾಯಾದಿ ಕಾಳಗದ ಮಹಾಭಾರತದ ನಾಡೂ ಹೌದು. ಆದ್ದರಿಂದ ಅಣ್ಣನೊಬ್ಬ ಯಶಸ್ಸಿನ ಮೆಟ್ಟಲೇರುತ್ತಾನೆಂದರೆ, ಆ ಯಶಸ್ಸಿನಿಂದಲೇ ಕೋಟ್ಯಾಧೀಶನಾಗುತ್ತಾನೆಂದರೆ ಆ ಹಣದ ಸ್ವಲ್ಪ ಭಾಗವಾದರೂ ತಮಗೆ ಬರಬೇಕೆಂಬ ದುರಾಸೆ ಒಡಹುಟ್ಟಿದವರಿಗೆ ಹುಟ್ಟುವುದು ಸಹಜ. ಆದರೆ ಅದು ಅಷ್ಟು ಸುಲಭವಲ್ಲ ಎಂದು ಗೊತ್ತಾದಾಗ, ತಮ್ಮ ನಡುವಿನ ತಾರತಮ್ಯ ಹೆಚ್ಚಾಗುತ್ತಾ ಹೋದಾಗ, ಅದರೊಂದಿಗೆ ಅಲಕ್ಷ್ಯ ಅಸಡ್ಡೆ ಸೇರಿಕೊಂಡಾಗ ಪ್ರಮೋದ್‌ಗೆ ಒಡಹುಟ್ಟಿದ ತಮ್ಮ ಪ್ರವೀಣನಂತವರು ಕೇಡಿಗಳಾಗುತ್ತಾರೆ. ಆಧುನಿಕ 'ರಾಮ'ನ ನಂಬಿಕಸ್ಥ ಸಹೋದರ 'ಲಕ್ಷ್ಮಣ'ನೂ ಬಂಡಾಯ ಏಳುತ್ತಾನೆ.



ಈ ಬಂಡಾಯ ಕೊಲೆ ಮಾಡುವಂತಹ ದುಷ್ಟ ಉದ್ದೇಶಗಳನ್ನು ಹೊಂದಿರುತ್ತದೆ ಎಂಬುದೇ ವಿಷಾದಕರ ಸಂಗತಿ. ಏಕೆಂದರೆ ತನ್ನ ಅಣ್ಣ ಪ್ರಮೋದ್ ರಾಜಕೀಯ ಸೇರಿ ನೂರಾರು ಕೋಟಿ ಗಳಿಸಿ ದುಂಡಗಾಗುತ್ತಿದ್ದದ್ದನ್ನು, ಈ ದೇಶವನ್ನೇ ಕೊಳ್ಳೆ ಹೊಡೆದು ಉದ್ಧಾರವಾಗುತ್ತಿದ್ದದ್ದನ್ನು ನೋಡಿ ಅದರ ವಿರುದ್ಧ ಸಾರ್ವಜನಿಕವಾಗಿ ಮಾತಾಡಿ ಪ್ರಮೋದ್ ಮಹಾಜನ್ ಮತ್ತಾತನ ಚೆಡ್ಡಿ ಬಳಗದ ನಿಜ ಬಣ್ಣವನ್ನು ಬಯಲಿಗೆಳೆದಿದ್ದರೆ ಅದಕ್ಕೊಂದು ನೈತಿಕ ಅಭಿಪ್ರಾಯವಾದರೂ ಇರುತ್ತಿತ್ತು. ಆದ್ರೆ ಹಾಗೆ ಮಾಡದೆ, ದ್ವೇಷದಿಂದ ಗುಂಡು ಹಾರಿಸಿರುವ ಪ್ರವೀಣ್ ತಾನೊಬ್ಬ ಭ್ರಷ್ಟ ಅಣ್ಣನ ದುಷ್ಟ ತಮ್ಮ ಎಂಬುದನ್ನಷ್ಟೇ ಸಾಬೀತುಪಡಿಸಿದ್ದಾನೆ.

ಈಗ ಪ್ರಮೋದ್ ಮಹಾಜನ್ ಸಾವಿನ ಹೊಸ್ತಿಲಿನಲ್ಲಿ ನಿಂತಿರುವಾಗ ಆತನ ಮನೆಯವರು, ಪಕ್ಷದವರು "ಇದು ಆಸ್ತಿಗಾಗಿ ನಡೆದ ಜಗಳವಲ್ಲ" ಎಂದು ಹೇಳುತ್ತಿದ್ದಾರೆ. ಪ್ರವೀಣ್ ಲಾಯರ್ "ಪ್ರವೀಣನಿಗೆ ತಲೆಯೇ ಸರಿ ಇಲ್ಲ" ಎಂದು ಹೇಳಿ ಭ್ರಷ್ಟ ಪ್ರಮೋದರ ಹುಳುಕುಗಳನ್ನು ಮುಚ್ಚಿ ಹಾಕಲು ನೋಡುತ್ತಿದ್ದಾರೆ. ಆದರೆ ವಾಸ್ತವವಾಗಿ ಇದು ಆಸ್ತಿಗಾಗಿ ಅಲ್ಲದಿದ್ದರೂ ಹಣಕ್ಕಾಗಿ ಅರ್ಥಾತ್ ಅಕ್ರಮವಾಗಿ ಗಳಿಸಿದ ಹಣದಲ್ಲಿ ಪಾಲು ಪಡೆಯುವುದಕ್ಕಾಗಿ ನಡೆದಿರುವ ಕಲಹ. ಪ್ರವೀಣ್ ಹುಚ್ಚನಲ್ಲದಿದ್ದರೂ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುವಷ್ಟು ಘಟನೆಗಳು ಮಹಾಜನ್ ಕುಟುಂಬದೊಳಗೆ ಘಟಿಸಿವೆ.

ಹಿಂದೊಮ್ಮೆ ಸಾಮಾನ್ಯ ಶಾಲಾ ಮಾಸ್ತರ್ ಆಗಿದ್ದ ಪ್ರಮೋದ್ ಮಹಾಜನ್ ಇಂದು ಕೋಟ್ಯಾಂತರ ರೂಪಾಯಿಗಳ ಆಸ್ತಿಯ ಒಡೆಯನಾಗುತ್ತಾನೆಂದರೆ ಆತ ರಾಜಕೀಯದಲ್ಲಿ ಬೆಳೆದ ಪರಿ, ನುಂಗಿದ ವೇಗ ಎರಡೂ ಅರ್ಥವಾಗುತ್ತದೆ. ಅದರೊಂದಿಗೆ ಆತನ ತಮ್ಮ ಪ್ರವೀಣ್‌ನಲ್ಲಿ ಬೆಳೆದ ಅಸಮಾಧಾನ, ಸ್ಫೋಟಗೊಂಡ ಕೋಪವೂ ಅರ್ಥವಾಗುತ್ತದೆ.

ಎಂಭತ್ತರ ದಶಕದಲ್ಲಿ ಬಜೆಪಿ ಪಕ್ಷ ಒಂದು ಅಜೆಂಡಾಗಾಗಿ ತಲಾಶು ಮಾಡುತ್ತಿದ್ದಾಗ, ಅಡ್ವಾಣಿಗೆ ರಥಯಾತ್ರೆಯ ಕಲ್ಪನೆ ನೀಡಿದ್ದೇ ಪ್ರಮೋದ್ ಮಹಾಜನ್. "ಏನು ನಾನು ಕುದುರೆಗಳನ್ನು ಕಟ್ಟಿಕೊಂಡು, ಬಿಲ್ಲು ಬಾಣ ಹಿಡಿದು ದೇಶದಲ್ಲಿ ಸುತ್ತಾಡಬೇಕಾ?" ಎಂದು ಆಗ ಅಡ್ವಾಣಿ ಕೇಳಿದಾಗ ಅವರಿಗೆ ಹವಾನಿಯಂತ್ರಿತ, ಎಲ್ಲ ಸವಲತ್ತುಗಳೂ ಇದ್ದ ಹೈಟೆಕ್ ಮೋಟಾರ್ ವೆಹಿಕಲ್ ರಥವನ್ನು ಸಿದ್ಧಪಡಿಸಿದ್ದು ಇದೇ ಮಹಾಜನ್.



ತಮ್ಮ ತಾಯಿಯೊಂದಿಗೆ ಪ್ರಮೋದ್ ಮತ್ತು ಪ್ರವೀಣ್

ಆ ರಥ ಹೋದಲ್ಲೆಲ್ಲಾ, ಕರ್ನಾಟಕವೂ ಸೇರಿದಂತೆ, ಕೋಮು ಗಲಭೆಗಳು ನಡೆದಿದ್ದು ಈಗ ಇತಿಹಾಸ. ಹೀಗೆ ರಕ್ತ ಹರಿಸಿಯೇ ದೆಹಲಿಯಲ್ಲಿ ಅಧಿಕಾರ ಪಡೆದ ಚೆಡ್ಡಿಗಳಲ್ಲಿ ಪ್ರಮುಖರಾಗಿದ್ದವರು ಮತ್ತೆ ಇದೇ ಮಹಾಜನ್. ಆರ್‌ಎಸ್‌ಎಸ್‌ನಲ್ಲಿ ತರಬೇತಿ ಪಡೆದು, ಬಿಜೆಪಿಯಲ್ಲಿ ಪಳಗಿದ್ದ ಮಹಾಜನ್ ಕೇಂದ್ರದಲ್ಲಿ ದಕ್ಕಿಸಿಕೊಂಡ ಖಾತೆಗಳೆಲ್ಲಾ ಪೊಗದಸ್ತಾಗಿ ಮೇಯಲು ಹುಲ್ಲುಗಾವಲಿನಂತಿದ್ದ ಇಲಾಖೆಗಳೇ. ಅದರಲ್ಲೂ ಮಹಾಜನ್ ದೂರ ಸಂಪರ್ಕ ಇಲಾಖೆ ಮಂತ್ರಿಯಾಗಿದ್ದಾಗ, ರಿಲಯನ್ಸ್ ಕಂಪನಿಗೆ ತನ್ನ ಕೈಲಾಗಿದ್ದಕ್ಕಿಂತಲೂ ಹೆಚ್ಚು 'ಸಹಕರಿಸಿ' "ವಾಜಪೇಯಿಯವರ ಕ್ಯಾಬಿನೆಟ್‌ನಲ್ಲಿ ರಿಲಯನ್ಸ್ ಮಂತ್ರಿ" ಎಂಬ ಬಿರುದನ್ನು ಪಡೆದಿದ್ದರು. ಅಷ್ಟೇ ಅಲ್ಲ ರಿಲಯನ್ಸ್ ಕಂಪನಿಯ ಧೀರುಭಾಯಿ ಅಂಬಾನಿಗೆ ಭಾರತರತ್ನ ನೀಡಬೇಕೆಂದು ಸರ್ಕಾರದ ಮೇಲೆ ಒತ್ತಡ ತಂದಿದ್ದರು. ಅದು ವಿಫಲವಾದಾಗ "ನಾಚ್ನೆವಾಲಿ, ಗಾನೇವಾಲಿ" (ಕುಣಿಯುವವರು, ಹಾಡುವವರು)ಗಳಿಗೆ ಭಾರತರತ್ನ ನೀಡುತ್ತೀರಿ, ಅಂಬಾನಿಗೆ ಯಾಕೆ ಕೊಟ್ಟಿಲ್ಲ ಎಂಬ ಅಸಂಬದ್ಧ ತಕರಾರೆತ್ತಿದ್ದರು. ಕೊನೆಗೆ ಧೀರುಭಾಯಿ ಅಂಬಾನಿಯ ಅಂಚೆ ಚೀಟಿ ಒಂದನ್ನು ಬಿಡುಗಡೆ ಮಾಡಿಸಿ ಅಲ್ಪಸ್ವಲ್ಪ ನೆಮ್ಮದಿ ಕಂಡಿದ್ದರು.

ರಿಲಯನ್ಸ್ ಕಂಪನಿಗೆ ಪ್ರಮೋದ್ ಮಹಾಜನ್ ಪುಕ್ಕಟೆಯಾಗಿ ಇಂತಹ ಸಹಾಯ ಮಾಡಿರಲಿಲ್ಲ. ಅದಕ್ಕೆ ಪ್ರತಿಯಾಗಿ ಮಹಾಜನ್‌ನ ಅಳಿಯ ತೆರೆದಿದ್ದ ಮೂರು ಲೆಟರ್ ಹೆಡ್ ಕಂಪನಿಗಳಿಗೆ ರಿಲಯನ್ಸ್ 100 ಕೋಟಿ ರೂಪಾಯಿಗಳ ಮುಖ ಬೆಲೆ ಇದ್ದ ಷೇರ್‌ಗಳನ್ನು ನೀಡಿತ್ತು. ಮಾರುಕಟ್ಟೆಯಲ್ಲಿ ಈ ಷೇರ್‌ಗಳ ನಿಜವಾದ ಬೆಲೆ 700 ಕೋಟಿ ರೂಪಾಯಿ!

ಸಾವಂತ್ರಿ


ಹೀಗೆ ಒಂದೇ ಒಂದು ಡೀಲಿನಲ್ಲಿ 700 ಕೋಟಿ ರೂಪಾಯಿಗಳನ್ನು ಪಡೆಯುವಷ್ಟು ಪಳಗಿದ್ದ ಮಹಾಜನ್ ವಾರ್ತಾ ಮಂತ್ರಿಯಾಗಿದ್ದಾಗಲೂ ಮುಕ್ಕಿದ್ದಕ್ಕೆ ಲೆಕ್ಕವಿಲ್ಲ. ಅದರಲ್ಲಿ ಒಂದು ಉದಾಹರಣೆ ಕೊಡುವುದಾದರೆ, ತನ್ನ ಹೆಂಡತಿ ಮತ್ತು ಮಗ ಸ್ಥಾಪಿಸಿದ್ದ ಕಂಪನಿಗೆ 'ಟ್ರುತ್ ಧಿನಾ ದಿನ್' ಎಂಬ ಕಾರ್ಯಕ್ರಮ ನೀಡಿ ಕನಿಷ್ಠ ಹತ್ತು ಕೋಟಿ ರೂಪಾಯಿಗಳನ್ನು ದೋಚಿದ್ದು!

ಈ ಮಾಜಿ ಶಾಲಾ ಮಾಸ್ತರನ ಖಯಾಲಿಯಗಳು ಬರಿ ಹಣ ಮಾಡುವುದಕ್ಕೆ ಸೀಮಿತವಾಗಲಿಲ್ಲ, ಬಾಲಿವುಡ್‌ನ ನಟಿಯರೊಂದಿಗೆ 'ಸಂಪರ್ಕ' ಇರಿಸಿಕೊಂಡಿದ್ದ ಮಹಾಜನ್ ಉದ್ಯಮಿಗಳ ಗೆಳೆತನದಲ್ಲಿ ಐಷಾರಾಮಿ ಜೀವನದಲ್ಲೂ ತೇಲಾಡಿದರು. ಅಷ್ಟೇ ಅಲ್ಲ, ಪತ್ರಕರ್ತೆ ಶಿವಾನಿ ಭಟ್ನಾಗರ್ ಕೊಲೆ ಆರೋಪಿ, ಐಪಿಎಸ್ ಅಧಿಕಾರಿ ರವಿಕಾಂತ್ ಶರ್ಮನ ಹೆಂಡತಿ "ಶಿವಾನಿ ಕೊಲೆಯಲ್ಲಿ ಪ್ರಮೋದ್ ಮಹಾಜನ್‌ನ ಪಾತ್ರ ಇದೆ" ಎಂದು ನೇರವಾಗಿ ಆರೋಪಿಸಿದ್ದಳು.

ಇದ್ಯಾವುದೂ ಬಿಜೆಪಿಯಲ್ಲಿ ಮಹಾಜನ್‌ರ ಪ್ರಭಾವವನ್ನು ಕುಗ್ಗಿಸಲಿಲ್ಲ, ಬದಲಾಗಿ ಆತನಿಗೇ ಪಾರ್ಟಿ ಫಂಡ್ ಎತ್ತುವ ಜವಾಬ್ದಾರಿ ವಹಿಸಲಾಗಿತ್ತು. ಆನಂತರ 2004 ರಲ್ಲಿ ಚುನಾವಣೆ ನಡೆದಾಗ India Shining (ಭಾರತ ಪ್ರಕಾಶಿಸುತ್ತಿದೆ) ಎಂಬ ಸ್ಲೋಗನ್ ನೀಡಿದ್ದೂ ಇದೇ ಮಹಾಜನ್. ಆದರೆ ಆತ ಬರೀ ಸ್ಲೋಗನ್ ನೀಡಿ ಸುಮ್ಮನಾಗಲಿಲ್ಲ, ಬದಲಾಗಿ "ಭಾರತ ಪ್ರಕಾಶಿಸುತ್ತಿದೆ" ಎಂದು ಜಾಹೀರಾತು ನೀಡಲು ಸರ್ಕಾರ ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡಿದಾಗ ಅದರ ಜವಾಬ್ದಾರಿಯನ್ನು ಮತ್ತೆ ತನ್ನ ಮಗ ಮತ್ತು ಅಳಿಯನಿಗೆ ವಹಿಸಿ, ಅವರಿಬ್ಬರೂ ಅದರಲ್ಲೂ ಹಣ ದೋಚುವಂತೆ ಮಾಡಿದರು! "ಭಾರತ ಪ್ರಕಾಶಿಸುತ್ತಿಲ್ಲ" ಎಂದು ಮತದಾರರು ವರದಿ ನೀಡಿದರೂ ಮಹಾಜನ್ ವಂಶ ಮಾತ್ರ ಅಂದು ಪ್ರಕಾಶಿಸಿದ್ದು ನಿಜ.

ಇದನ್ನೆಲ್ಲಾ ನೋಡಿಯೇ ಪ್ರಮೋದ್ ಮಹಾಜನ್ ವಿರುದ್ಧ ಚೆಡ್ಡಿಗಳ ಬಳಗದಲ್ಲೇ ತರಕಾರುಗಳೆದ್ದಿದ್ದವು. ಉಮಾ ಭಾರತಿಯಂತೂ "ಬೇರಿಲ್ಲದ, ಚುನಾವಣೆಗಳನ್ನು ಗೆಲ್ಲಲಾರದ ಜನರೇ ಪಕ್ಷದ ದಾರಿ ತಪ್ಪಿಸುತ್ತಿದ್ದಾರೆ" ಎಂದು ಕೆಂಡ ಕಾರಿದ್ದಳು. ಆಕೆ ಹೇಳಿದ್ದರಲ್ಲಿ ಸತ್ಯವೂ ಇತ್ತು. ಏಕೆಂದರೆ ಈ ಪ್ರಮೋದ್ ಮಹಾಜನ್ ಇಲ್ಲಿಯವರೆಗೂ ಜನರಿಂದ ನೇರವಾಗಿ ಆಯ್ಕೆಯಾಗಿ ಗೆದ್ದಿರುವುದು ಒಂದೇ ಬಾರಿ.

ಅಂದಹಾಗೆ, ಪ್ರಶಾಂತ್ ಭೂಷಣ ಎಂಬ ವಕೀಲರು ಸುಪ್ರೀಂಕೋರ್ಟ್ ಮುಂದೆ ಪ್ರಮೋದ್ ಮಹಾಜನ್ ಮಂತ್ರಿಯಾಗಿದ್ದಾಗ ನಡೆಸಿದ ಅಪರಾತಪರಾಗಳ ಬಗ್ಗೆ ಅರ್ಜಿ ಸಲ್ಲಿಸಿದ್ದಾರೆ. ಅದರಂತೆ ಸುಪ್ರೀಂಕೋರ್ಟ್ ಮಹಾಜನ್‌ಗೆ ನೋಟೀಸ್ ಕೂಡ ಜಾರಿ ಮಾಡಿದೆ.



ಅದೆಲ್ಲ ಏನೇ ಇರಲಿ, ಪ್ರಮೋದ್ ಮಹಾಜನ್‌ನ ಹೈ ಪ್ರೊಫೈಲ್ ಜೀವನ ಶೈಲಿ, ಅಕ್ರಮವಾಗಿ ಗಳಿಸಿದ ಆಸ್ತಿ ಎಲ್ಲವೂ ಆತನ ಸ್ವಂತ ಸೋದರನಲ್ಲೇ ಹೊಟ್ಟೆ ಕಿಚ್ಚು ಹುಟ್ಟಿಸಿದೆ. ತನ್ನ ಅಣ್ಣ ಸಂಪತ್ತಿನ ಸುಪತ್ತಿಗೆಯಲ್ಲಿದ್ದು ತಾನು ಮಾತ್ರ ಬೇಕಾರ್ ಆಗಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಈಗ ಪ್ರಮೋದ್ ಕಡೆಯವರು ಮಾಧ್ಯಮಗಳ ಮುಂದೆ "ಪ್ರಮೋದ್‌ರವರು ತಮ್ಮ ಪ್ರವೀಣನನ್ನು ತನ್ನ ಮಗನಂತೆ ಸಾಕಿ, ಸಲುಹಿದರು" ಎಂದು ಹೇಳುತ್ತಿದ್ದಾರೆ. ಆದರೆ ಈ "ಸಾಕು ಮಗ" ಪೋಲೀಸರ ಮುಂದೆ "ನನ್ನ ಅಣ್ಣನನ್ನು ನೋಡಬೇಕೆಂದರೆ ಮೊದಲೇ ಅಪಾಯಿಂಟ್‌ಮೆಂಟ್ ಪಡೆಯಬೇಕಿತ್ತು" ಎಂದು ಹೇಳಿದ್ದಾನೆ. "ಇಂತಹ ಅವಮಾನ, ತಿರಸ್ಕಾರ ಸಹಿಸದೇ ಅವನನ್ನು ಕೊಲ್ಲಲು ನಿರ್ಧರಿಸಿದೆ" ಎಂದೂ ಹೇಳಿದ್ದಾನೆ.


ಪ್ರಮೋದ್ ಮಹಾಜನ್ ಭಾರತದ ಬಹುತೇಕ ರಾಜಕಾರಣಿಗಳಂತೆ ಓರ್ವ ಭ್ರಷ್ಟ, ಕೋಮುವಾದಿ ಎಂಬುದು ನಿಜ. ಆದರೆ ಅದಕ್ಕೆ ಪ್ರವೀಣ್ ದುಷ್ಟನಾಗಿ ಗುಂಡು ಹಾರಿಸುವುದು ಖಂಡಿತಾ ತಪ್ಪು, ಯಾವುದೇ ಕಾರಣಕ್ಕೂ ಪ್ರವೀಣ್‌ನ ಈ ಕೃತ್ಯವನ್ನು ಸಮರ್ಥಿಸಲಾಗುವುದಿಲ್ಲ, ಆದ್ದರಿಂದ ಪ್ರಮೋದ್ ಮಹಾಜನ್ ಆದಷ್ಟು ಬೇಗನೆ ಚೇತರಿಸಿಕೊಳ್ಳಲಿ ಎಂಬುದೇ ಎಲ್ಲರ ಆಶಯ. ಹಾಗೆಯೇ ಚೇತರಿಸಿಕೊಂಡ ನಂತರ ನ್ಯಾಯಾಲಯದ ಮುಂದೆ ಹಾಜರಾಗಿ ತನ್ನ ಭ್ರಷ್ಟಾಚಾರ ಕುರಿತು ಆರೋಪಗಳನ್ನು ಎದುರಿಸುವಂತಾಗಲಿ.

ಪ್ರಮೋದ್ ಮಹಾಜನ್ ವಿಚಾರಣೆ ಎದುರಿಸಿ ಶಿಕ್ಷೆಗೊಳಗಾದರೆ, ಅದು ನ್ಯಾಯ. ಈಗ ನಡೆದಿರುವುದು ಅನ್ಯಾಯ!

ಮಹಾಭಾರತದ ಈ ನಾಡಲ್ಲಿ....

ಮಹಾಭಾರತದ ಈ ನಾಡಲ್ಲಿ ದಾಯಾದಿ ಮತ್ಸರ ಹೊಸದೇನಲ್ಲ, ಅದಕ್ಕೆ ಪ್ರಮೋದ್ ಮಹಾಜನ್ ಪ್ರಥಮ ಬಲಿಯೂ ಅಲ್ಲ, ನಮ್ಮ ಕರ್ನಾಟಕದಲ್ಲೂ ಇಂತಹ ಒಂದು ಪ್ರಕರಣ ನಡೆದಿದ್ದು ನೆನಪಿದೆಯಾ?

ನಾಲ್ಕು ವರ್ಷಗಳ ಹಿಂದೆ, ದೇವೇಗೌಡರ ತಮ್ಮ ಬಸವೇಗೌಡರ ಮಗ ದೇವೇಗೌಡರ ಪತ್ನಿ ಚೆನ್ನಮ್ಮನವರ ಮೇಲೆ ಆಸಿಡ್ ಎರಚಿದ್ದ, ಈ ಪ್ರಕರಣದ ಹಿಂದೆಯೂ ಇದ್ದದ್ದು ಇದೇ ದಾಯಾದಿ ಮತ್ಸರ.



ಹರದನಹಳ್ಳಿಯ ಸಹೋದರರಾದ ದೇವೇಗೌಡ ಮತ್ತು ಬಸವೇಗೌಡರ ನಡುವೆ ಅಪಾರ ಕಂದರ ಏರ್ಪಟ್ಟಿತ್ತು, ಒಂದೆಡೆ ದೇವೇಗೌಡರು ರಾಜಕೀಯದಲ್ಲಿ ಬೆಳೆಯುತ್ತಾ ಆ ದೇಶದ ಪ್ರಧಾನಿ ಹುದ್ದೆಗೂ ಏರಿದರೆ ಅವರ ತಮ್ಮ ಬಸವೇಗೌಡ ಈ ನಾಡಿನ ಲಕ್ಷಾಂತರ ಬಡ ರೈತಾಪಿಯಂತೆಯೇ ಜೀವಿಸಿದ. ಬಸವೇಗೌಡರೇನೋ "ಇದು ನಮ್ಮ ಕರ್ಮ" ಎಂದು ಸುಮ್ಮನಾದರು.

ಆದರೆ ಅವರ ಮಗ ಸುಮ್ಮನಿರಲಿಲ್ಲ, ಒಂದೆಡೆ ಅಧಿಕಾರ, ಪ್ರಭಾವ, ಹಣ ಎಲ್ಲವನ್ನೂ ಗಳಿಸುತ್ತಿದ್ದ ದೇವೇಗೌಡರ ಮಕ್ಕಳು. ಇನ್ನೊಂದೆಡೆ ಅನಾರೋಗ್ಯ ಬಡತನ, ಕಷ್ಟದಲ್ಲಿ ಮುಳುಗಿದ್ದ ತಾನು ಮತ್ತು ತನ್ನ ಒಡಹುಟ್ಟಿದವರು. ಸಾಲದೆಂಬಂತೆ ದೊಡ್ಡಪ್ಪನ ಮನೆಯವರಿಂದ ಕಿಂಚಿತ್ತೂ ನೆರವೂ ಇಲ್ಲ, ಅವರ ಮಕ್ಕಳಿಂದ ಒಂದು ಕೆಲಸವೂ ಇಲ್ಲ, ಇದನ್ನೆಲ್ಲ ತನ್ನ ಮನಸ್ಸಿನಲ್ಲೇ ಮೆಲುಕು ಹಾಕಿದ ಬಸವೇಗೌಡರ ಮಗನ ತಲೆಯಲ್ಲಿ ಅದೇನು ಹೊಕ್ಕಿತೋ, ಚೆನ್ನಮ್ಮ ಮತ್ತವರ ಸೊಸೆಯ ಮೇಲೆ ಆಸಿಡ್ ಎರಚಿದ. ಆ ದಾಳಿಯಿಂದ ಚೆನ್ನಮ್ಮನವರು ಇಂದಿಗೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ.

ಅವತ್ತು ಬಸವೇಗೌಡರ ಮಗನನ್ನು ರೊಚ್ಚಿಗೇಳಿಸಿದ್ದ ಕಾರಣಗಳಿಗೂ, ಇವತ್ತು ಪ್ರವೀಣ್ ಮಹಾಜನ್‌ನಿಂದ ಗುಂಡು ಹಾರಿಸಿದ ಕಾರಣಗಳಿಗೂ ಅಷ್ಟೇನು ವ್ಯತ್ಯಾಸ ಇಲ್ಲ, ಹಾಗೆಯೇ ಇವರಿಬ್ಬರೂ ಮಾಡಿದ್ದು ತಪ್ಪು ಎಂಬುದರ ಬಗ್ಗೆಯೂ ಸಂಶಯವಿಲ್ಲ.

ಮೊನ್ನೆ [illegible] ಏ. 22 ನೇ ತಾರೀಖು [illegible]ಹಾರಾಷ್ಟ್ರ [illegible] ಕರ್ನಾಟಕದ ಇಬ್ಬರು ಮಧ್ಯಮ [illegible] ರಾಜಕಾರಣಿಗಳ ಪಾಲಿಗೆ ಎಂತಹ [illegible]ವಾಯಿತು... ನೋಡಿ....

ಅತ್ತ ಮುಂಬೈನಲ್ಲಿ [illegible] ತಮ್ಮನಿಂದಲೇ [illegible] ಗುಂಡೇಟಿನ ದಾಳಿಗೆ ತುತ್ತಾದ [illegible]ಮೋದ್ ಮಹಾಜನ್ ಆಸ್ಪತ್ರೆಗೆ ಸೇರಿ ಜೀವನ್ಮರಣದ [illegible]ರಾಟದಲ್ಲಿ ಸೆಣಸಾಡುವಂತಾಯಿತು....

ಇತ್ತ ಕರ್ನಾಟಕದ ಕೋಲಾರ ಜಿಲ್ಲೆಯ ಗಡಿಭಾಗದ [illegible]ಲ್ಲೂಕು ಕೇಂದ್ರವಾದ ಶ್ರೀನಿವಾಸಪುರದ ನ್ಯಾಯಾಲಯ[illegible]ಲ್ಲಿ ಅಲ್ಲಿನ ಕಾಂಗ್ರೆ ಶಾಸಕ ಹಾಗೂ ಮಾಜಿ ಅಸೆಂಬ್ಲಿ [illegible]ಕರ್ ರಮೇಶ್‌ಕುಮಾರ್ ಕೊಲೆ ಪ್ರಕರಣವೊಂದರಲ್ಲಿ [illegible]ರಡಿಸಲಾದ ಜಾಮೀನು ರಹಿತ ಬಂಧನದ [illegible]ರಂಟನ್ನು ರದ್ದುಗೊಳಿಸುವಂತೆ [illegible]ರಿದ್ದ ಅರ್ಜಿ ತಿರಸ್ಕರಿಸಲ್ಪಟ್ಟು [illegible]ವುದೇ ಕ್ಷಣದಲ್ಲಾದರೂ ಅರೆಸ್ಟಾಗ[illegible]ಬಹುದಾದ ಅಪಾಯ ಎದುರಿಸುವಂತಾ[illegible]ತು....

ಜಾತಿ ಹೊರತಾಗಿ ಸಮಕಾಲೀನ [illegible]ಳಿಗೆಯ ನಾಯಕರಾದ ಪ್ರಮೋದ್ [illegible]ಹಾಜನ್ ಹಾಗೂ ರಮೇಶ್ [illegible]ಮಾರ್‌ರ ನಡುವೆ ಇನ್ನಾವುದೇ ಸಾಮ್ಯತೆ[illegible]ಗಲಿ, ಹೋಲಿಕೆಯಾಗಲಿ ಸಾಧ್ಯವೇ [illegible]ಲ್ಲ....

ಸಂಘ ಪರಿವಾರದ ಮಡಿವಂತಿಕೆಯ [illegible]ಸಾರದಲ್ಲಿಯೇ ಬೆಳೆದು ಬಂದರೂ [illegible]ಕಾರ ರಾಜಕಾರಣದುದ್ದಕ್ಕೂ ಅತ್ಯಂತ [illegible]ಕು-ಬೆಳಕಿನ ದುಬಾರಿ ಜೀವನಶೈಲಿ [illegible]ಧಿಸಿಕೊಂಡು ಸ್ವಂತ ತಮ್ಮನಿಗೇ ಕಣ್ಣು [illegible]ರಾಗುವಷ್ಟು ಪ್ರಚಾರದ ಪ್ರಖರತೆಯಲ್ಲಿ [illegible]ಂಚಿದ್ದ ಪ್ರಮೋದ್ ನೇರ ಚುನಾವಣೆ [illegible]ದ್ದು ಕೇವಲ ಒಂದೇ ಒಂದು ಬಾರಿ [illegible]ತ್ರವೇ....

1970 ರ ದಶಕದಲ್ಲಿಯೇ ದಿ. ದೇವರಾಜ್ ಅರಸರ [illegible]ನಾಗಿ, ಅಪ್ಪಟ ಕಾಂಗ್ರೆ ರಾಜಕಾರಣಿಯಾಗಿ ಅರಳಿದ [illegible]ಮೇಶ್‌ಕುಮಾರ್ ಮುಂದೆ ಎರಡು ದಶಕಗಳಲ್ಲಿ [illegible]ಲ್ಕು ಬಾರಿ ಗೆದ್ದು ಮೂರು ಬಾರಿ ಸೋತರೂ [illegible]ಪ್ಪಟ ಮಿಡಲ್ ಕ್ಲಾಸ್ ಜಂಜಾಟಗಳಲ್ಲಿ ತೊಡಗಿಸಿ[illegible]ಂಡೇ ವೃತ್ತಿ ರಾಜಕಾರಣದಲ್ಲಿ ಸೆಣಸಾಡಿದವರು...

ಸುದ್ದಿಮಾಧ್ಯಮಗಳ ವ್ಯವಸ್ಥಿತ ಪ್ರಚಾರದ ಮೂಲಕವೇ [illegible]ಜೆಪಿ ಪಾಲಿಟಿಕ್ಸ್‌ನಲ್ಲಿ "ಉದಯೋನ್ಮುಖ ರಾಷ್ಟ್ರ[illegible]ಯಕ" ಪದವಿಗೇರಿದ್ದ ಪ್ರಮೋದ್ [illegible]ರಾಠವಾಡಾದ ಅಂಬೇಜೋಗೈ [illegible]ಬ ಹಳ್ಳಿಯ ಮೇಷ್ಟ್ರ ಮಗನೆಂಬ [illegible]ನ್ನೆಲೆಯಿಂದ ಹೊರಹೊಮ್ಮಿದರೂ [illegible]ಕ್ಷಸನಗರಿ ಮುಂಬೈನ ಉದ್ಯಮ[illegible]ಗಳೂ ಹಾಗೂ ಬಾಲಿವುಡ್ [illegible]ದಿ ಸಿನಿಮಾ ಸ್ಟಾರ್‌ಗಳ ಸಂಗವನ್ನೇ [illegible]ಧಿಸಿಕೊಂಡು ಬಂದು ಪ್ರಚಂಡ [illegible]ಮಂತಿಕೆ ಮತ್ತು ಐಷಾರಾಮಿ [illegible]ಲತ್ತುಗಳಿಗಾಗಿ ಹಂಬಲಿಸುವ [illegible]ಂಬನಾಗಿ ಬಿಟ್ಟ...



ನಮ್ಮ ಈ ಶ್ರೀನಿವಾಸಪುರ ಎಂಬ [illegible]ಸುಮಾರು 330 ಕುಗ್ರಾಮಗಳ [illegible]ಕ್ಷೇತ್ರದ ನಾಲ್ಕು ಅವಧಿಯ ಎಮ್ಮೆಲ್ಲೆ ರಮೇಶ್ [illegible]ಮಾರ್ ಬೆಂಗಳೂರಿನಲ್ಲೇ ಬಾಲ್ಯ ವಿದ್ಯಾರ್ಥಿ ದೆಸೆ [illegible]ಅನುಭವಿಸಿದರೂ ತಮ್ಮ ವಂಶಸ್ಥರ ಬೇರುಗಳನ್ನು [illegible]ಡುಕುತ್ತ ಹೊರಟು ಹಳ್ಳಿಗಾಡಿನ ರಾಜಕಾರಣ[illegible]ಯೇ ತನ್ನ ಬಿಡೆಂಟಿಟಿಯನ್ನು ಬೆಳೆಸಿಕೊಂಡರು....

ಹಿಂದೂತ್ವವನ್ನು ಜಪಿಸುತ್ತಲೇ ಮುಂಬೈ-ದಿಲ್ಲಿಗಳ [illegible]ಟ್ಯಾಧಿಪತಿ ಶ್ರೀಮಂತರುಗಳ ಸ್ನೇಹವನ್ನೇ ಹೆಚ್ಚು [illegible]ಗಿ ಜೀರ್ಣಿಸಿಕೊಳ್ಳುತ್ತ ಸಾಗಿದ ಪ್ರಮೋದ್ [illegible]ಹಾಜನ್ ತತ್ಪರಿಣಾಮವಾಗಿಯೇ ಪಾರ್ಟಿ ಸಹೋ[illegible]ಗಿಗಳಲ್ಲೂ, ಹಳೆಯ ಸ್ನೇಹಿತರುಗಳಲ್ಲೂ, ಕಟ್ಟಕಡೆ[illegible]ಗೆ ತನ್ನ ಒಡಹುಟ್ಟಿದ ಸೋದರರಲ್ಲೂ ಅಸೂಯೆ-[illegible] ಹುಟ್ಟಿಸಬಲ್ಲಷ್ಟು ಧನಬಲ, ಅಧಿಕಾರಬಲ [illegible] ಜಾತಿಬಲದೊಂದಿಗೆ ಹಾರಾಡುತ್ತ ಬಂದ.

ಇಲ್ಲಿ ರಮೇಶ್‌ಕುಮಾರ್ ಶ್ರೀನಿವಾಸಪುರದ [illegible] ಒಕ್ಕಲಿಗ-ರೆಡ್ಡಿ ಜನಾಂಗದ ಪಟ್ಟಭದ್ರರ [illegible] ಎಲ್ಲ ಜಾತಿಗಳ ಬಡವರ ಸೈನ್ಯ ಕಟ್ಟಲು [illegible] 'ಜಾತಿ ಸಂಘರ್ಷವೇ ವರ್ಗಸಂಘರ್ಷ' ಎಂಬ [illegible] ರಾಜಕೀಯ ಗುರು ದೇವರಾಜ ಅರಸರ [illegible] ಹರಿಯುವಾಗಿ ಪ್ರಯೋಗಿಸಲು ಹೊರಟು [illegible]

1978 ರ [illegible] ಚುನಾವಣೆಯಿಂದಾರಂಭಿಸಿ [illegible] ಗೆಲುವು, ಸೋಲು [illegible] ಹೀಗೆ

ರೊಟೇಷನ್ ಮಾದರಿಯಲ್ಲಿ ರಾಜಕೀಯ ಸಮರಗಳನ್ನೆದುರಿಸುತ್ತ ಬಂದ ರಮೇಶ್‌ಕುಮಾರ್ ಸ್ವಕ್ಷೇತ್ರದಲ್ಲಿ ಕೇವಲ ಒಂದು ಸಾವಿರದಷ್ಟಾದರೂ ಸ್ವಜಾತಿ ಬಾಂಧವರ ಓಟುಗಳಿಲ್ಲದಿದ್ದರೂ ಬಲಿಷ್ಠ ಜನಾಂಗದ ಜಾತಿ ಪ್ರಚೋದಿತ ರಾಜಕೀಯ ಸವಾಲನ್ನು ಮೆಟ್ಟಿ ನಿಂತು ಪರ್ಯಾಯ ಜನಶಕ್ತಿಯ ದನಿಯಾಗಲು ಶ್ರಮಿಸಿದರು...

ಸಾಕಷ್ಟು ರಾಜಕೀಯ ತಿಳುವಳಿಕೆ, ಅನುಭವ, ಪ್ರಚಂಡ ವಾಗ್ಪಟುತ್ವ [illegible] ಅಗಾಧ ಜನಸಂಪರ್ಕದ ಬಲದಿಂದಲೇ ಕರ್ನಾಟಕದ ಎಲ್ಲ ಭಾಗಗಳ ಜನಸಾಮಾನ್ಯರಲ್ಲಿ ಕುತೂಹಲ ಕೆರಳಿಸಬಲ್ಲ ಪ್ರತಿಭಾವಂತ ನಾಯಕರೆನಿಸಿದ ರಮೇಶ್‌ಕುಮಾರ್ 1980ರಿಂದಾರಂಭಿಸಿ ಸುಮಾರು 17 ವರ್ಷಗಳ ಕಾಲ ಅಂದಿನ 'ಪತ್ರಿಕೆ' ಮತ್ತು ಲಂಕೇಶರ ಆತ್ಮೀಯ ಒಡನಾಡಿಯಾಗಿದ್ದುಂಟು...

ರಮೇಶ್ ಕುಮಾರ್
ಮರ್ಡರ್ ರಾಜಕೀಯದ ಮಡುವಿನಲ್ಲಿ



ಲಂಕೇಶ್ ಮೇಷ್ಟ್ರು ರಮೇಶ್‌ಕುಮಾರರನ್ನು 1983ರ ಐತಿಹಾಸಿಕ ಚುನಾವಣೆಯಲ್ಲಿ "ಬೊಬ್ಬಿಲಿ ಪುಲಿ" ಎಂದು ಹುರಿದುಂಬಿಸುತ್ತಲೇ ಅವರ ರಾಜಕೀಯ ಪ್ರಬುದ್ಧತೆ, ಪ್ರಗತಿಪರ ಮನೋಧರ್ಮ ಹಾಗೂ ಸೈದ್ಧಾಂತಿಕ ಬದ್ಧತೆಗಳಿಗಾಗಿ ಮೆಚ್ಚುಗೆ ತೋರುತ್ತ ಬಂದಿದ್ದರು... ಮುಂದೊಮ್ಮೆ 1998-99 ರ ಅವಧಿಯಲ್ಲಿ ಅಸೆಂಬ್ಲಿ ಸ್ಪೀಕರ್ ಸ್ಥಾನದಲ್ಲಿದ್ದ ರಮೇಶ್‌ಕುಮಾರ್ 'ಪತ್ರಿಕೆ'ಯ ವರದಿಯ ವಿರುದ್ಧ ಸಲ್ಲಿಸಲಾದ ಹಕ್ಕುಚ್ಯುತಿ ನಿರ್ಣಯವೊಂದರ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಾಳಿದ ಅಸ್ಪಷ್ಟ ನಿಲುವು ಕ್ರಮೇಣ ಅವರನ್ನು ದೂರವಾಗಿಸಿಬಿಟ್ಟಿತು...

ದಿವಂಗತ ದೇವರಾಜ ಅರಸರ ಸಾಮಾಜಿಕ ನ್ಯಾಯದ ರಾಜಕಾರಣದಲ್ಲೇ ತಮ್ಮ ಸಾರ್ಥಕತೆ ಕಂಡುಕೊಂಡಿದ್ದ ರಮೇಶ್‌ಕುಮಾರ್ ತತ್ಕಾರಣದಿಂದಾಗಿಯೇ 1980 ರ ದಶಕದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾವ್ ಮತ್ತು ರಾಮಕೃಷ್ಣ ಹೆಗಡೆ ಎಂಬಿಬ್ಬರೂ ಬ್ರಾಹ್ಮಣ ನಾಯಕರೊಂದಿಗೆ ಮೈತ್ರಿಯ ಬದಲು ತೀಕ್ಷ್ಣ ವಿರೋಧವನ್ನೇ ಕಟ್ಟಿಕೊಂಡಿದ್ದರು.

ದೇವರಾಜ ಅರಸರಂತಹ ಪ್ರಗತಿಪರ ನಾಯಕನ ಅನುಯಾಯಿ ರಮೇಶ್‌ಕುಮಾರ್ ಮುಂದೆ 1994 ರಿಂದ 1998 ರವರೆಗೂ ಅಪ್ಪಟ ಪಾಳೇಗಾರಿಕೆ ಸಂಸ್ಕೃತಿಯ, ಸಂಸ್ಥಾ ಕಾಂಗ್ರೆಸ್ ಪರಂಪರೆಯ ಜನನಾಯಕ ದೇವೇಗೌಡರ ಪರಮಾಪ್ತ ಬೆಂಬಲಿಗರಾಗಿಬಿಟ್ಟರು! ಗೌಡರು 20 ತಿಂಗಳ ಕಾಲ ಮುಖ್ಯಮಂತ್ರಿಯಾಗಿದ್ದಾಗ ಹಾಗೂ ತದನಂತರ 11 ತಿಂಗಳು ರಾಷ್ಟ್ರದ ಪ್ರಧಾನಮಂತ್ರಿ ಹುದ್ದೆಗೇರಿದ್ದ ದಿನಗಳಲ್ಲಂತೂ ಇಲ್ಲಿ ಅಸೆಂಬ್ಲಿ ಸ್ಪೀಕರ್ ಆಗಿದ್ದ ರಮೇಶ್‌ಕುಮಾರರೇ ಅವರ ಅತ್ಯಂತ ನಂಬುಗೆಯ ಸ್ನೇಹಿತ, ಸಲಹೆಗಾರ, ಆತ್ಮೀಯ ಒಡನಾಡಿ ಎಲ್ಲವೂ ಆಗಿದ್ದರು...

ವಾಸ್ತವವಾಗಿ ತಮ್ಮ 30 ವರ್ಷಗಳ ರಾಜಕೀಯ ಬದುಕಿನ ಅತ್ಯಂತ ಯಶಸ್ವೀ ಕ್ಷಣಗಳನ್ನು ರಮೇಶ್ ಕುಮಾರ್ ಅನುಭವಿಸಿದ್ದೇ ದೇವೇಗೌಡರೊಂದಿಗಿನ ಒಡನಾಟದಲ್ಲಿ..... ಆದರೆ ಸರಿಯಾಗಿ ಒಂದು ದಶಕದ ನಂತರ ಅಂದರೆ 2006 ರಲ್ಲಿ ರಮೇಶ್‌ಕುಮಾರರೇ ಇಂದು ಅಧಿಕಾರಸ್ಥನಾಗಿರುವ ದೇವೇಗೌಡರ ಕುಟುಂಬದ ಅತ್ಯಂತ "ಅಪಾಯಕಾರಿ" ಶತ್ರು! ಮುಖ್ಯಮಂತ್ರಿಯಾಗಿರುವ ತಮ್ಮ ಸುಪುತ್ರ ಕುಮಾರಸ್ವಾಮಿಗೆ ಅಸೆಂಬ್ಲಿಯ ಕಲಾಪಗಳಲ್ಲಿ ಅತ್ಯಂತ ತೀಕ್ಷ್ಣವಾದ ಸವಾಲು ಎದುರಾಗುವುದೇ ಈ ಶ್ರೀನಿವಾಸಪುರ ತಾಲ್ಲೂಕಿನ ಅಡ್ಡಗಲ್ ಗ್ರಾಮದ ರಮೇಶ್‌ಕುಮಾರ್‌ರಿಂದ ಎಂದು ಗೌಡರು ಆರಂಭದಲ್ಲೇ ತಮ್ಮ ಆಪ್ತರೊಂದಿಗೆ ಎಚ್ಚರಿಸಿದ್ದುಂಟು...

2003-04 ರಲ್ಲಿ ದಳ ಪರಿವಾರ ಛಿದ್ರಗೊಳ್ಳುವ ಸೂಚನೆಯಿದ್ದಾಗ ರಾಜಕೀಯ ಭದ್ರತೆಯನ್ನು ಅರಸಿಕೊಂಡು ಹೋಗಿ ಎಸ್.ಎಂ. ಕೃಷ್ಣರ ನಾಯಕತ್ವದಲ್ಲಿದ್ದ ಸೋನಿಯಾ ಕಾಂಗ್ರೆಸ್ಸನ್ನು ಸೇರಿದ ರಮೇಶ್ ಕುಮಾರ್ ತಮ್ಮ ಶ್ರೀನಿವಾಸಪುರದ ಖಾಯಂ ಎದುರಾಳಿ ಮತ್ತು ಅಂದಿನ ಕಾಂಗ್ರೆ ಶಾಸಕ ವೆಂಕಟಶಿವಾರೆಡ್ಡಿಯ ಭದ್ರಕೋಟೆಗೇ ಲಗ್ಗೆ ಹಾಕಿದರು....

2004 ರ ಚುನಾವಣೆಯಲ್ಲಿ ಡಿ.ಕೆ. ಶಿವಕುಮಾರರ ಮೂಲಕ ವೆಂಕಟಶಿವಾರೆಡ್ಡಿಯಿಂದ ಕಾಂಗ್ರೆ-ಬಿ ಫಾರಂ ಕಸಿದುಕೊಂಡಾಗಲೇ ರಮೇಶ್‌ಕುಮಾರ್ ಚುನಾವಣಾ ಗೆಲುವಿನ ಸಂಭ್ರಮದ ಜತೆಗೆಯೇ ತಮ್ಮ ಶತ್ರುಪಾಳ್ಯದ ಸಮಸ್ತ ದ್ವೇಷ, ರೋಷ, ಪ್ರತೀಕಾರದ [illegible] ಆಹ್ವಾನಿಸಿಕೊಂಡುಬಿಟ್ಟಿದ್ದರು..

16 ಮಂದಿ ಮುಖ್ಯ ಆರೋಪಿಗಳ ಬಂಧನ, ವಿಚಾರಣೆಯ ನಂತರವೂ ಎಲ್ಲೂ ರಮೇಶ್‌ಕುಮಾರರ ವಿರುದ್ಧ ಯಾವುದೇ ಸಂಶಯ ಮೂಡದಂತಾದಾಗ ಹತಾಶರಾದ ಅಧಿಕಾರಾರೂಢ ಎಮ್ಮೆಲ್ಲೆ ವೆಂಕಟಶಿವಾರೆಡ್ಡಿ ಕೃಷ್ಣ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಹಾಗೂ ರಮೇಶ್‌ಕುಮಾರರ ಖಾಸಾ ಮಿತ್ರರೇ ಎನಿಸಿದ್ದ ಡಿ.ಬಿ. ಚಂದ್ರೇಗೌಡರ ಮೂಲಕ ಸಿಓಡಿ ತನಿಖೆ ಏರ್ಪಡಿಸಿದರು... ಅಲ್ಲೂ ಯಾವುದೇ ಪ್ರಯೋಜನವಾಗದಿದ್ದಾಗ ತನಿಖಾಧಿಕಾರಿಯನ್ನೇ ಬದಲಿಸಿದರು....
ಕೊಲೆ ಪ್ರಕರಣ ಜರುಗಿ 8-9 ತಿಂಗಳು ಕಳೆದ ನಂತರ ದಿಢೀರನೆ ಹೆಚ್ಚುವರಿ FIR ಸಲ್ಲಿಸಿದ ಈ ಹೊಸ ತನಿಖಾಧಿಕಾರಿ ಅದರಲ್ಲಿ ರಮೇಶ್‌ಕುಮಾರ್ ಮತ್ತು ಅವರ ಕಿರಿಯ ಅಣ್ಣ ಕೃಷ್ಣಮೂರ್ತಿಯವರನ್ನೇ 'ಸಂಚುಗಾರರು' ಎಂದು ಹೆಸರಿಸಿಬಿಟ್ಟರು..

2003 ರ ಮಾರ್ಚ್ 31 ರ ರಾತ್ರಿ, ರಮೇಶ್ ಕುಮಾರರ ಸ್ವಂತೂರಾದ ಅಡ್ಡಗಲ್ ಗ್ರಾಮದ ಹೊರವಲಯದಲ್ಲಿ ಭೀಕರವಾಗಿ ಕೊಲೆಯಾಗಲ್ಪಟ್ಟ [illegible] ಶಂಕರ ರೆಡ್ಡಿ ಎಂಬ ಸ್ಥಳೀಯ ಕಾಂಗ್ರೆ ಪುಢಾರಿಯ ದುರಂತ ಸಾವನ್ನೇ ಅವರ ಎದುರಾಳಿ ವೆಂಕಟಶಿವಾರೆಡ್ಡಿ ರಮೇಶ್ ವಿರುದ್ಧದ ನಿರ್ಣಾಯಕ ತೇಜೋವಧೆಯ ಸುವರ್ಣಾವಕಾಶವನ್ನಾಗಿ ಬಳಸಿಕೊಂಡರು

16 ಮಂದಿ ಮುಖ್ಯ ಆರೋಪಿಗಳ ಬಂಧನ, ವಿಚಾರಣೆಯ ನಂತರವೂ ಎಲ್ಲೂ ರಮೇಶ್‌ಕುಮಾರರ ವಿರುದ್ಧ ಯಾವುದೇ ಸಂಶಯ ಮೂಡದಂತಾದಾಗ ಹತಾಶರಾದ ಅಧಿಕಾರಾರೂಢ ಎಮ್ಮೆಲ್ಲೆ ವೆಂಕಟಶಿವಾರೆಡ್ಡಿ ಕೃಷ್ಣ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಹಾಗೂ ರಮೇಶ್‌ಕುಮಾರರ ಖಾಸಾ ಮಿತ್ರರೇ ಎನಿಸಿದ್ದ ಡಿ.ಬಿ. ಚಂದ್ರೇಗೌಡರ ಮೂಲಕ ಸಿಓಡಿ ತನಿಖೆ ಏರ್ಪಡಿಸಿದರು... ಅಲ್ಲೂ ಯಾವುದೇ ಪ್ರಯೋಜನವಾಗದಿದ್ದಾಗ ತನಿಖಾಧಿಕಾರಿಯನ್ನೇ ಬದಲಿಸಿದರು....

ಕೊಲೆ ಪ್ರಕರಣ ಜರುಗಿ 8-9 ತಿಂಗಳು ಕಳೆದ ನಂತರ ದಿಢೀರನೆ ಹೆಚ್ಚುವರಿ FIR ಸಲ್ಲಿಸಿದ ಈ ಹೊಸ ತನಿಖಾಧಿಕಾರಿ ಅದರಲ್ಲಿ ರಮೇಶ್‌ಕುಮಾರ್ ಮತ್ತು ಅವರ ಕಿರಿಯ ಅಣ್ಣ ಕೃಷ್ಣಮೂರ್ತಿಯವರನ್ನೇ 'ಸಂಚುಗಾರರು' ಎಂದು ಹೆಸರಿಸಿಬಿಟ್ಟರು...

[illegible]

ಅಷ್ಟರಲ್ಲಾಗಲೇ 2004 ರ ಚುನಾವಣೆ ಮುಗಿದು ರಮೇಶ್‌ಕುಮಾರ್ ಗೆದ್ದು ಕಾಂಗ್ರೆ ಶಾಸಕ ಎನಿಸಿದ್ದರು... ಬಿಜೆಪಿಯಿಂದ ಸ್ಪರ್ಧಿಸಿ ಸೋಲನುಭವಿಸಿದ ಅವರ ಪ್ರತಿಸ್ಪರ್ಧಿ ವೆಂಕಟಶಿವಾರೆಡ್ಡಿ ಕ್ರಮೇಣ ದೇವೇಗೌಡರ ಜೆಡಿಎಸ್ ಪಾರ್ಟಿ ಸೇರಿ ಕುಮಾರಸ್ವಾಮಿಯವರ ಬಲಗೈ ಬಂಟರಲ್ಲೊಬ್ಬರಾದರು...

2004 ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆ-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ದೇವೇಗೌಡರದ್ದೇ ಸರ್ವಾಧಿಕಾರವಾದ್ದರಿಂದ ರಮೇಶ್‌ಕುಮಾರ್ ಮತ್ತೆ ಅಭದ್ರತೆ, ಅನಿಶ್ಚಿತತೆಯ ಅಪಾಯವೆದುರಿಸುವಂತಾಗಿತ್ತು.

ಈ ತನಿಖಾಧಿಕಾರಿಯ ಆರೋಪಕ್ಕೆ ಪೂರಕವಾದ ಯಾವುದೇ ಪುರಾವೆಗಳೇ ಇಲ್ಲ ಎಂದು ಹೈಕೋರ್ಟಿನ ನ್ಯಾಯಪೀಠದೆದುರು ಸಿಓಡಿಯ ಹಿರಿಯ ಅಧಿಕಾರಿಗಳೇ ವರದಿ ಸಲ್ಲಿಸಿದ್ದನ್ನು ಒಬ್ಬ ನ್ಯಾಯಮೂರ್ತಿಗಳು ಒಪ್ಪಿಕೊಂಡೇ ಬಿಟ್ಟಿದ್ದರು...

ಸಿಓಡಿಯೆ ಕ್ಲೋಸ್ ಮಾಡಬೇಕೆಂದಿದ್ದ ತನಿಖಾ ವರದಿಯನ್ನು ಮತ್ತೊಬ್ಬ ನ್ಯಾಯಮೂರ್ತಿಗಳು ಓಪನ್ ಮಾಡಿಸಿ ರಮೇಶ್‌ಕುಮಾರ್ ವಿರುದ್ಧ ಕೊಲೆ ಆರೋಪದ ತೂಗುಗತ್ತಿಯನ್ನು ಝಳಪಿಸಿಯೇ ಬಿಟ್ಟರು...

ಅದೇ ಉಚ್ಚ ನ್ಯಾಯಾಲಯದ ಮಗದೊಬ್ಬ ನ್ಯಾಯಾಧೀಶರು ಓರ್ವ ಆಳುವ ಪಕ್ಷದ ಎಮ್ಮೆಲ್ಲೆಯ (ವೆಂಕಟಶಿವಾರೆಡ್ಡಿ) ಪತ್ರವನ್ನಾಧರಿಸಿ ಅವರ ರಾಜಕೀಯ ಎದುರಾಳಿಯ ತೇಜೋವಧೆಗೆ ಸರ್ಕಾರವೇ ಕುಮ್ಮಕ್ಕು ನೀಡುವುದು ಘೋರ ಅನ್ಯಾಯ, ಪಾಪಕರವೆಂದು ತೀರ್ಪಿತ್ತರು....


ಹೀಗೆ ಪರಸ್ಪರ ತದ್ವಿರುದ್ಧ ತೀರ್ಪುಗಳ ನಡುವೆ ಆರೋಪಪಟ್ಟಿಯಿಂದ ತಮ್ಮ ಹೆಸರನ್ನು ಕೈಬಿಡುವಂತೆ ಸುಪ್ರೀಂಕೋರ್ಟಿನ ಕಟ್ಟೆಯೇರಿದ ರಮೇಶ್‌ಕುಮಾರರ ಅರ್ಜಿ ತಿರಸ್ಕೃತವಾಯಿತು. ಹಾಗಾಗಿ ಮತ್ತೆ ಕಳೆದೆರಡು ವಾರಗಳಿಂದ ಸ್ಥಳೀಯ ನ್ಯಾಯಾಲಯಗಳಲ್ಲಿಯೇ ರಮೇಶ್‌ಕುಮಾರ್‌ರ ಬಂಧನದ ವಾರೆಂಟ್‌ನಿಂದ ತಪ್ಪಿಸಿಕೊಳ್ಳುವ ಹೋರಾಟ ಮುಂದುವರಿಯಿತು...

ಚುನಾವಣೆಯಲ್ಲಿ ಸೋತು ಕಡ್ಡಾಯ ವಿರಾಮದಲ್ಲಿದ್ದಾಗ ರಮೇಶ್‌ಕುಮಾರ್ ಟಿ.ಎನ್. ಸೀತಾರಾಮ್‌ರ "ಮನ್ವಂತರ" ಟಿವಿ ಸೀರಿಯಲ್‌ನಲ್ಲಿ ಮುಖ್ಯಮಂತ್ರಿ 'ವಾಣಿ' ಪಾತ್ರದಲ್ಲಿ ಮಿಂಚಿದ್ದರು... ಅಲ್ಲೂ ಅಧಿಕಾರಸ್ಥನಾಗಿದ್ದಾಗಲೇ ಕೊಲೆ ಆರೋಪದ ಸಂಚಿಗೆ ಬಲಿಯಾಗಿ ಜೈಲು ಸೇರಬೇಕಾದ ಪ್ರಸಂಗವಿತ್ತು! ಬಹುಶಃ ಸೀತಾರಾಂಗೆ ಭವಿಷ್ಯ ದುರಂತದ ಮುನ್ಸೂಚನೆಗಳೇನಾದರೂ ಕಾದಿರಬಹುದೇ?

ಅಪರೂಪದ ವ್ಯಕ್ತಿತ್ವದ ರಾಜಕಾರಣಿ ರಮೇಶ್ ಕುಮಾರ್ ಈ ಅಗ್ನಿ ಪರೀಕ್ಷೆಯಲ್ಲಿ ಯಶಸ್ವಿಯಾಗಲಿ. ಹಾಗೆಯೇ ಶ್ರೀನಿವಾಸಪುರದ ಕೇಡು. [illegible] ಮರ್ಡರಸ್ ಪಾಲಿಟಿಕ್ಸ್‌ಗೆ ರಮೇಶ್‌ಕುಮಾರರೇ [illegible]

ವೇಲುನು ರಾಜ್ ಅಂತ್ಯಕ್ರಿಯೆಯನ್ನು ಯಾರೋ ಒಬ್ಬ ಪುಡಿ ಕಾರ್ಪೋರೇಷನ್ ಕೌನ್ಸಿಲರ್‌ನ ಅಂತ್ಯಕ್ರಿಯೆಯಷ್ಟೇ ನಿರ್ಲಕ್ಷ್ಯದಿಂದ ನಿಭಾಯಿಸಿದ ಕುಮಾರಸ್ವಾಮಿ ಸರ್ಕಾರಕ್ಕೆ ಅಭಿಮಾನಿಗಳು ತಲೆದಂಡ ತೆರಬೇಕಿದೆ. ಯಾರೋ ಮಾಡಿದ ತಪ್ಪಿಗೆ ರಾಜ್ ಅಭಿಮಾನಿಗಳನ್ನು ಬಲಿಹಾಕುವ, ಸರ್ಕಾರದ ತಪ್ಪನ್ನೆಲ್ಲ ಅಣ್ಣಾವ್ರ ಭಕ್ತರ ತಲೆಗೆ ಕಟ್ಟುವ ಕಾರ್ಯಾಚರಣೆ ನಿರಾತಂಕವಾಗಿ ಮುಂದುವರಿದಿದೆ.

ಒಂದೆಡೆ ಅಣ್ಣನ ಅಗಲಿಕೆಯ ದುಃಖ, ಮತ್ತೊಂದೆಡೆ ಪೊಲೀಸರ ಕಾಟ. ರಾಜ್ ಭಕ್ತರ ದೌರ್ಭಾಗ್ಯಕ್ಕೆ ಸಣ್ಣದೊಂದು ವಿಷಾದ ಕೂಡ ಯಾರಲ್ಲೂ ಇಲ್ಲ. ಏಪ್ರಿಲ್ ಹದಿಮೂರರ ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಈತನಕ ಒಂದೂವರೆ ಸಾವಿರ ಮಂದಿ ರೌಡಿಗಳನ್ನು ಬಂಧಿಸಿದ್ದಾಗಿ ಪೊಲೀಸ್ ಕಮಿಷನರ್ ಅಜಯ್ ಕುಮಾರ್ ಸಿಂಗ್ ಕೊಟ್ಟ ಹೇಳಿಕೆಯೇ ಇಡೀ ಪ್ರಕರಣಕ್ಕೆ ಕನ್ನಡಿಯಂತಿದೆ. ಬಂಧಿತರ ಪೈಕಿ ಬಹುತೇಕ ಪಕ್ಕಾ ರಾಜ್ ಅಭಿಮಾನಿಗಳು. ಮಿಕ್ಕಂತೆ ಕನ್ನಡ ಕಾರ್ಯಕರ್ತರನ್ನು ಹಿಡಿದು ಜೈಲಿಗೆ ದಬ್ಬಿದ್ದಾರೆ. ವಿಪರ್ಯಾಸ ಹೇಗಿದೆಯೆಂದರೆ ಬೆಂಗಳೂರಿನ ಬಹುತೇಕ ರೌಡಿಗಳೆಲ್ಲ ಹಾಯಾಗಿದ್ದುಬಿಟ್ಟಿದ್ದಾರೆ.



ಮುಖ್ಯಮಂತ್ರಿ ಕುಮಾರಸ್ವಾಮಿ


ಪೊಲೀಸ್ ಠಾಣೆಗೇ ನುಗ್ಗಿದ ಪುಂಡರು ಇನ್ಸ್‌ಪೆಕ್ಟರ್ ಸಂಪತ್‌ಕುಮಾರ್ ತಲೆಗೆ ರಾಡು ಬೀಸಿದರು. ಕೈಗೆ ಕತ್ತಿಯಿಂದ ಹೊಡೆದರು. ಇತ್ತ ಸಂಪತ್‌ಕುಮಾರ್ ಆಸ್ಪತ್ರೆಗೆ ದಾಖಲಾಗಿದ್ದೇ ಸಿಸಿಬಿ ಪೊಲೀಸರು ಇದ್ಯಾವ ದಕ್ಕೂ ಸಂಬಂಧವೇ ಇಲ್ಲದ ಮತ್ತಿಕೆರೆಯ ರಾಜ್ ಅಭಿಮಾನಿಗಳನ್ನು ಬೇಟೆಯಾಡತೊಡಗಿದರು!

ಲಾಕಪ್ಪು ಸೇರಿದ್ದಾದರೂ ಯಾರು? ಮತ್ತಿಕೆರೆಯ ಎಂ.ಆರ್. ಜೈರಾಮ್ ಕಾಲೋನಿಯ ಆಟೋ ಚಾಲಕರಾದ ರಾಮಕೃಷ್ಣ ಮತ್ತು ರಾಮು, ಎಂ.ಎಸ್. ರಾಮಯ್ಯ ಕಾಲೇಜಿನ ಸತ್ತಿವೇಲು ಮುಂತಾದ ಹನ್ನೊಂದು ಮಂದಿ ರಾಜ್ ಅಭಿಮಾನಿಗಳನ್ನು ಅನ್ಯಾಯವಾಗಿ ಲಾಕಪ್ಪಿಗೆ ದಬ್ಬಲಾಯಿತು. ಮಂಜುನಾಥ ಎಂಬ ಅಭಿಮಾನಿಯನ್ನು ಕನ್ನಡ ಪರ ಹೋರಾಟಗಾರ ರೆ.ಭೋ. ರಾಧಾಕೃಷ್ಣ ಜಾಮೀನಿನ ಮೇಲೆ ಬಿಡಿಸಿ ತಂದರು. ಇವರ್‍ಯಾರೂ ದೊಂಬಿಯಲ್ಲಿರಲಿಲ್ಲ. ರಾಜ್ ಅಗಲಿಕೆಯ ಶೋಕವೇ ದೊಡ್ಡದಾಗಿರುವಾಗ ಹಿಂಸೆಗಿಳಿಯುವ ಪ್ರಶ್ನೆಯೇ ಇರಲಿಲ್ಲ.

ಸಧ್ಯ ಕಮಿಷನರ್ ಅಜಯ್ ಕುಮಾರ್ ಸಿಂಗ್ ಪ್ರತಿ ಪೊಲೀಸ್ ಠಾಣೆಯಲ್ಲೂ ಕನಿಷ್ಠ ಇಂತಿಷ್ಟು ಮಂದಿಯನ್ನು ಹಿಡಿದು ಕೇಸಿಗೆ ಸಿಲುಕಿಸಲೇಬೇಕೆಂದು ಕಮಿಷನರ್ ಫರ್ಮಾನು ಹೊರಡಿಸಿದ್ದರು. ಪೊಲೀಸರು ಕೈಗೆ ಸಿಕ್ಕ ಕನ್ನಡ ಅಭಿಮಾನಿಗಳನ್ನು ಲಾಕಪ್ಪಿಗೆ ದಬ್ಬಲಾರಂಭಿಸಿದರು.

ರಾಜ್ ಅಂತ್ಯಕ್ರಿಯೆಯಲ್ಲಿ ಶಾಂತವಾಗಿ ಭಾಗವಹಿಸಿ ಬಂದಿದ್ದ ನಂದಿನಿ ಲೇಔಟಿನ ಸತೀಶನನ್ನು ಅನ್ಯಾಯವಾಗಿ ಬಳ್ಳಾರಿ ಜೈಲಿಗೆ ಹಾಕಲಾಯಿತು. ಹಿಣ್ಣದಲ್ಲಿ ಆ ಕಾಲದಿಂದಲೂ ರಾಜ್ಯೋತ್ಸವ ಮಾಡಿಕೊಂಡು ಬಂದಿದ್ದ ಹದಿನೆಂಟು ಮಂದಿ ರಾಜ್ ಅಭಿಮಾನಿಗಳನ್ನು ಎಳೆದು ಪರಪ್ಪನ ಅಗ್ರಹಾರ ಜೈಲಿಗೆ ಸಾಗಿಸಲಾಯಿತು. ಇನ್ನೂ ದುರಂತವೆಂದರೆ ಕಮಿಷನರ್ ಅಜಯ್ ಕುಮಾರ್ ಸಿಂಗ್ ಆಯಾ ಠಾಣೆಗೆ ಕಳಿಸಿ ಕೊಟ್ಟ ಫೋಟೋಗಳಲ್ಲಿ ಶೇಷಾದ್ರಿ ಪುರದ ಫೈವ್ ಲೈನ್ಸ್‌ನ ಹಳೇ ರಾಜ್ ಅಭಿಮಾನಿ ಗಂಧರ್ವ ಶ್ರೀನಿವಾಸ್ ಫೋಟೋ ಕೂಡ ಇತ್ತು!

ಗಂಧರ್ವ ಶ್ರೀನಿವಾಸ್ ಜಾತ್ಯತೀತ ಜನತಾದಳದ ಬೆಂಗಳೂರು ನಗರ ಉಪಾಧ್ಯಕ್ಷ. ವಯಸ್ಸು ಐವತ್ತಾಗಿದೆ. ಶವಯಾತ್ರೆಯಲ್ಲಿ ಹಳೇ ರಾಜ್ ಅಭಿಮಾನಿಗಳನ್ನು ಸಂತೈಸುತ್ತಾ ಅಲ್ಲಲ್ಲಿ ದೊಂಬಿಗಿಳಿದವರನ್ನು ನಿಯಂತ್ರಿಸಿಕೊಂಡಿದ್ದ.



ಸಾ.ರಾ. ಗೋವಿಂದು

ಕಂಡಲ್ಲಿ ಅರೆಸ್ಟ್!

ಚಿತ್ರದುರ್ಗದ [illegible] ಮತ್ತು ಅವನ [illegible] ಹಿತರು ರಾಜ್ ನಿಧನರಾದ [illegible] ಸದಾಶಿವನಗರದ ರಾಜ್ ಮನೆಗೆ ಅಂತಿಮ ದರ್ಶನಕ್ಕೆ ಹೋಗಿದ್ದಾರೆ. ನಂತರ ನಡೆದ ಗಲಾಟೆಗಳಿಂದ ತಪ್ಪಿಸಿಕೊಂಡು ಮನೆ ಕಡೆ ಹೊರಟ ಈ ಹುಡುಗರನ್ನು ಹಿಂದು ಮುಂದು ವಿಚಾರಿಸದ ಪೊಲೀಸರು ಹೊತ್ತೊಯ್ದು ಲಾಕಪ್ಪಿಗೆ ಹಾಕಿಬಿಟ್ಟಿದ್ದಾರೆ. ಅಷ್ಟೇ ಅಲ್ಲ, ಈ ಹುಡುಗರ ಬಳಿ ಇದ್ದ ಮೂರು ಸಾವಿರ ರೂಪಾಯಿಗಳನ್ನು ಪೊಲೀಸರೇ ಕದ್ದಿದ್ದಾರೆ.

ದೊಡ್ಡಬಳ್ಳಾಪುರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಎರಡು-ಮೂರು ಸಾವಿರ ರೂ. ಸಂಬಳಕ್ಕೆ ಕೆಲಸ ಮಾಡುವ ಈ ಹುಡುಗರಿಗೆ ಜಾಮೀನು ತಗೆದುಕೊಳ್ಳಲು ದುಡ್ಡಿಲ್ಲ; ಲಾಯರ್‌ಗೆ ಕೊಡಲು ಕಾಸಿಲ್ಲ.... ಹೀಗೆ ಸಿಕ್ಕ ಸಿಕ್ಕ ಅಮಾಯಕರನ್ನೆಲ್ಲ ಜೈಲಿಗೆ ತಳ್ಳುವುದರಿಂದ ಅದೇನು ಸಾಧಿಸಿದಂತಾಯ್ತು ಅಜಯ್ ಕುಮಾರ್ ಸಿಂಗ್‌ರವರೇ?

ರಾಜ್ ಭಕ್ತರ ತಲೆದಂಡ!

ಕಿಡಿಗೇಡಿಗಳ್ಯಾರು, ಅಭಿಮಾನಿಗಳ್ಯಾರು ಎಂದು ವಿಂಗಡಿಸಿ ಬಗ್ಗುಬಡಿಯುವ ಕೌಶಲ್ಯವೇ ಪೊಲೀಸರಲ್ಲಿರಲಿಲ್ಲ. ಏಪ್ರಿಲ್ ಹದಿನೈದರಂದು ಬೆಂಗಳೂರಿನ ಬೇರೆಬೇರೆ ಠಾಣೆಗಳಲ್ಲಿ ಮುನ್ನೂರಕ್ಕೂ ಅಧಿಕ ಮಂದಿ ಯನ್ನು ಬಂಧಿಸಿ ಕೋರ್ಟಿಗೆ ಕರೆತಂದಿದ್ದ ಪೊಲೀಸರಿಗೆ ವಕೀಲರೇ ಹಿಡಿಶಾಪ ಹಾಕುತ್ತಿದ್ದರು. ಅದರ ಮರು ದಿನವೇ ಮತ್ತೆ ಇನ್ನೂರು ಮಂದಿಯನ್ನು ಜೈಲಿಗೆ ಹಾಕಲಾಯಿತು. ಜೆ.ಪಿ. ನಗರ ಪೊಲೀಸ್ ಇನ್ಸ್‌ಪೆಕ್ಟರ್ ಕೋನಪ್ಪ ರೆಡ್ಡಿ ಕೈಗೆ ಸಿಕ್ಕ ಹತ್ತು ಮಂದಿ ಕನ್ನಡಾಭಿ ಮಾನಿಗಳನ್ನು ಜೈಲಿಗೆ ದಬ್ಬಿದ್ದ. ಚಂದ್ರಾಲೇಔಟ್ ಇನ್ಸ್‌ಪೆಕ್ಟರ್ ರಾಜ, ಧನಂಜಯ, ಜಗ್ಗ, ಓಬಳಪ್ಪ ಮುಂತಾದವರನ್ನು ಹಿಡಿದು ಜೈಲಿಗೆ ಸಾಗಿಸಿದ್ದಾರೆ. ಇದು ಪೊಲೀಸ್ ಅತಿರೇಕ ಮತ್ತು ಕುಮಾರಸ್ವಾಮಿಯ ಅವಿವೇಕ ಒಟ್ಟೊಟ್ಟಿಗೆ ಕೈ ಜೋಡಿಸಿದ್ದರ ಪ್ರತಿಫಲ.

"ಹಿಂಸಾಚಾರದಲ್ಲಿ ರಾಜ್ ಅಭಿಮಾನಿಗಳ ಪಾತ್ರ ಇಲ್ಲ, ಅದನ್ನು ಯಾರು ಮಾಡಿಸಿದ್ದಾರೆ ಅನ್ನೋದು ನನಗೆ ಚೆನ್ನಾಗಿ ಗೊತ್ತು, ಸಮಯ ಬಂದಾಗ ಬಯಲಿಗೆಳೆಯುತ್ತೇನೆ" ಎಂದದ್ದು ಇದೇ ಮುಖ್ಯಮಂತ್ರಿ ಕುಮಾರಸ್ವಾಮಿ ತಾನೆ?

ಹಕೀಕತ್ತೇನೆಂದರೆ ಕಿಡಿಗೇಡಿಗಳ ಪಟ್ಟಿ ಕಟ್ಟಿ ಯಾರ್‍ಯಾರನ್ನೋ ಬಲಿಹಾಕಲು ಅದು ಮುಖ್ಯಮಂತ್ರಿ


ರಾ. ಸೋಮನಾಥ್

ಕುಮಾರಸ್ವಾಮಿಯೇ ಹೆಣೆದ ಷಡ್ಯಂತ್ರವಾಗಿತ್ತು, ಹಾಗಂಥ ಹಿರಿಯ ಪೊಲೀಸ್ ಅಧಿಕಾರಿಯೊಬ್ಬ ಕುಮಾರಣ್ಣನ ತಲೆತುಂಬಿದ್ದ. ರಾಜ್ ಅಂತ್ಯ ಕ್ರಿಯೆಯನ್ನು ಸರಿಯಾಗಿ ನಿಭಾಯಿಸದ, ನಾಡಿನ ಸಾಂಸ್ಕೃತಿಕ ನೇತಾರನೊಬ್ಬನಿಗೆ ಸಲ್ಲಬೇಕಿದ್ದ ಗೌರವವನ್ನು ಸಲ್ಲಿಸದ ಸರ್ಕಾರ ಅನ್ಯಾಯವಾಗಿ ಎಂಟು ಮಂದಿಯನ್ನು ಬಲಿತೆಗೆದುಕೊಂಡಿತ್ತು. ಇನ್ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಕೋಟಿಗಟ್ಟಲೇ ಆಸ್ತಿ ಹಾನಿಗೀಡಾಯಿತು. ಬಹುಶಃ ರಾಜ್‌ಗೆ ಅಂತಿಮ ನಮನ ಸಲ್ಲಿಸಲು ಎಲ್ಲರಿಗೂ ಅವಕಾಶವಾಗಿದ್ದರೆ, ನೆರೆದ ಲಕ್ಷಾಂತರ ಅಭಿಮಾನಿಗಳಿಗೆ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸುವ ಅವಕಾಶವಿದ್ದಿದ್ದರೆ ಹೀಗಾಗುತ್ತಿತ್ತೆ?

ಏಪ್ರಿಲ್ ಹದಿಮೂರರ ಘಟನೆಗಳನ್ನೇ ನೋಡಿ. ಅವತ್ತು ರಾಜ್ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಭಾಗವಹಿಸಲೆಂದು ಸರಿಸುಮಾರು ಸಾವಿರದಷ್ಟಿದ್ದ ಅಭಿಮಾನಿಗಳು ಯಶವಂತಪುರ ಸರ್ಕಲ್‌ನಲ್ಲಿ ಕಾದಿದ್ದರು. ಎಲ್ಲಿಂದಲೋ ಬಂದ ಕಿಡಿಗೇಡಿ ಗುಂಪೊಂದು ಏಕಾಏಕಿ ಮೆರವಣಿಗೆ ಇಲ್ಲಿಗೆ ಬರೋಲ್ಲ ಎಂದು ಸುದ್ದಿ ಹಬ್ಬಿಸಿತು. ಹಾಗೆ ಬಂದ ಗುಂಪಿನಲ್ಲಿ ತ್ರಿವೇಣಿ ರಸ್ತೆಯ ವೇಲು, ಕೆನರಾ ವೈನ್ಸ್ ಮಂಜು, ಎನ್.ಟಿ.ಆರ್. ವೆಂಕಟೇಶ್ ಮುಂತಾ ದವರಿದ್ದರು. ಈ ಪೈಕಿ ವೇಲು ಯಶವಂತಪುರ ಪೊಲೀಸ್ ಠಾಣೆಯ ರೌಡಿ ಶೀಟರ್. ಶಾಸಕ ಎಮ್ಮಾರ್ ಸೀತಾರಾಮ್ ಬಲಗೈ ಬಂಟ.

ಈ ಹಿಂದೆ ಯಶವಂತಪುರ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದು ಸದ್ಯ ಲೋಕಾಯುಕ್ತಕ್ಕೆ ಸಿಕ್ಕು ಬಿದ್ದು ಸಸ್ಪೆಂಡಾಗಿರುವ ಶಿವಣ್ಣನ ಸಂಜೆ ಖಯಾಲಿಗಳಿಗೆ ಸಾಥಿಯಾಗಿದ್ದ ವೇಲು, ವೆಂಕಟೇಶ, ಕೆನರಾ ವೈನ್ಸ್ ಮಂಜು, ದಿವಾನರ ಪಾಳ್ಯದ ಜೈಪಾಲ, ಶಾಸಕ ಸೀತಾರಾಮ್ ಅಭಿಮಾನಿಗಳ ಸಂಘದ ಅಧ್ಯಕ್ಷ ಹಾಲು ರಾಜ, ಕೇಶವಮೂರ್ತಿ ಮುಂತಾದವರಿಗೆಲ್ಲ ಶಿವಣ್ಣನ ಜಾಗಕ್ಕೆ ಇನ್ಸ್‌ಪೆಕ್ಟರ್ ಆಗಿ ಬಂದಿದ್ದ ಸಂಪತ್‌ಕುಮಾರ್ ಮೇಲೆ ಸಿಟ್ಟಿತ್ತು, ಬೆಳಗ್ಗೆಯಿಂದಲೇ ರಾಜ್ ನಿಧನಕ್ಕೆ ರ್‍ಯಾಲಿ ಮಾಡುತ್ತೇವೆಂದು ಜನರನ್ನು ಜಮ ಮಾಡಿಕೊಂಡೇ ಇದ್ದರು.

ಯಾವತ್ತು ವೇಲು ಶಿಷ್ಯರು ಬಂದು ಮೆರವಣಿಗೆ ಯಶವಂತಪುರಕ್ಕೆ ಬರೋಲ್ಲ ಎಂದು ಪುಕಾರೆಬ್ಬಿಸಿದರೋ ಇದ್ದಕ್ಕಿದ್ದಂತೆ ಗುಂಪು ಗಲಾಟೆಗಿಳಿಯಿತು. ಯಶವಂತಪುರ



ರಾಜ್ ಅಂತ್ಯ ಸಂಸ್ಕಾರ ವೇಳೆ ಕಿಡಿಗೇಡಿಗಳ ದಾಂಧಲೆ

ಠಾಣೆಗೂ ಪತ್ರಿಕೆಗಳಲ್ಲಿ ಬಂದ ಫೋಟೋಗಳ ಪಟ್ಟಿ ಕಳಿಸಿದ್ದಾರೆ. ಟೀವಿಗಳಲ್ಲಿ ಬಂದ ಹಿಂಸಾಚಾರದ ದೃಶ್ಯಗಳನ್ನು 200m ಮಾಡಿಸಿ ಲೆಕ್ಕವಿಲ್ಲದಷ್ಟು ಫೋಟೋಗಳನ್ನು ಪ್ರಿಂಟ್ ಹಾಕಿಸಿದ್ದಾರೆ. ಇಂಥ ಫೋಟೋಗಳನ್ನು ಹಿಡಿದು ಕನ್ನಡಿಗರೇ ಹೆಚ್ಚಿರುವ ಏರಿಯಾಗಳಲ್ಲಿ ತಲಾಶು ಮಾಡಿದ ಪೊಲೀಸರಿಗೆ ಎಂಥ ನಿರಾಶೆ ಕಾದಿತ್ತೆಂದರೆ ಅಂಥ ಮುಖಗಳ ಪೈಕಿ ರಾಜ್ ಅಭಿಮಾನಿಗಳಾಗಲಿ, ಕನ್ನಡ ಕಾರ್ಯಕರ್ತರಾಗಲೀ ಇರಲೇ ಇಲ್ಲ.



ಗಂಧರ್ವ ಶ್ರೀನಿವಾಸ್

ಟೀವಿಗಳಲ್ಲಿ ಆತನ ಹಿಂದೆ ನಿಂತ ಕಿಡಿಗೇಡಿಯೊಬ್ಬ ಕೈಯಲ್ಲಿ ಕಲ್ಲು ಹಿಡಿದು ನಿಂತಿದ್ದ ಚಿತ್ರ ಪ್ರಕಟಗೊಂಡಿತ್ತು. ಅದನ್ನೇ ಮುಂದಿಟ್ಟುಕೊಂಡು ಈಗ ಪೊಲೀಸರು ಗಂಧರ್ವನ ಬೆನ್ನಿಗೆ ಬಿದ್ದಿದ್ದಾರೆ. ಶವ ಯಾತ್ರೆಗೆ ಹೋದ ತಪ್ಪಿಗೆ ಗಂಧರ್ವ ತಲೆಮರೆಸಿಕೊಂಡು ತಿರುಗುತ್ತಿದ್ದಾನೆ. ಕೆಲವೆಡೆ ತಮಿಳು ಪರೋಡಿಗಳು ನಡೆಸಿದ ಹಿಂಸೆಗೆ ರಾಜ್ ಭಕ್ತರನ್ನು ಜೈಲಿಗೆ ದಬ್ಬಲಾಗಿದೆ. ಶ್ರೀರಾಂಪುರದ ಪ್ರಕಾಶ್‌ನಗರ ಶಿವಾಸ್ ಬಾರ್‌ನ ಹಿಂದಿನ ಒಂದನೇ ಮೇನ್‌ನ ಭಾಸ್ಕರ್ ಎಂಬ ಫ್ಲವರ್ ಡೆಕೋರೇಟರ್ ಹೇಳಿ ಕೇಳಿ ತಮಿಳಾಂಧ. ಈ ಹಿಂದೆ ಕಾವೇರಿ ಗಲಾಟೆಯ[illegible] 'ಈ ಸಂಜೆ', ಅಭಿಮಾನಿ ಪತ್ರಿಕಾ ಕಚೇರಿಗೆ ರೌಡಿಗಳನ್ನು ನುಗ್ಗಿಸಿದ್ದ. ಟಪ್ಪು ಎಂಬ ಮತ್ತೊಬ್ಬ ರೌಡಿಯ ಜೊತೆ ಸೇರಿ ದಾಸನನ್ನು ಕನ್ನಡಿಗ ಎಂಬ ಒಂದೇ ಕಾರಣಕ್ಕೆ ಕೊಂದುಹಾಕಿದ್ದ. ಹೇಗೂ ರಾಜ್ ಶವಯಾತ್ರೆ ಡಾ[illegible] ರಾಜ್‌ಕುಮಾರ್ ರಸ್ತೆಗೆ ಬಂದೇ ಬರುತ್ತೆ ಎಂದುಕೊಂಡು ಮೆರವಣಿಗೆಯ ಮೇಲೆ ಕಲ್ಲು ತೂರಲು ಹಿಂದುಗಟ್ಟಲೆ ಪೊರ್ಕಿ ಹುಡುಗರನ್ನು ಭಾಸ್ಕರ್ ರೆಡಿ ಮಾಡಿಕೊಂಡಿದ್ದ. ಯಾವಾಗ ಮೆರವಣಿಗೆ ರಾಜ್ ರಸ್ತೆಯಲ್ಲಿ ಬರಲಿಲ್ಲವೋ [illegible] ಕುಡಿದು ಚಿತ್ತಾಗಿದ್ದ ಭಾಸ್ಕರನ ಪೊರ್ಕಿ ಗ್ಯಾಂಗ್ ಬೀದಿಗಿಳಿಯಿತು. ಕನ್ನಡಿಗರ ಅಂಗಡಿಗಳ ಮೇಲೆ ಕಲ್ಲು ತೂರಿತು. ಹಾಗೇ ರಾಜ್ ಮೆರವಣಿಗೆಯ ಮೇಲೆ ಕಲ್ಲು ತೂರಲೆಂದು ಪ್ರಕಾಶ್‌ನಗರದ ಕವಿತಾ ಬೇಕರಿಯ ಮಾಲೀಕ ಪ್ರಸನ್ನನ ಗ್ಯಾಂಗ್ ಕೂಡ ಹೊಂಚು ಹಾಕಿತ್ತು. ಒಂದಾನೊಂದು ಕಾಲಕ್ಕೆ ರೌಡಿಯಾಗಿದ್ದ ಮೊಟ್ಟೆಕಣ್ಣ[illegible] ಅಕ್ಕನ ಮಕ್ಕಳು, ಇನ್ನೊಂದಷ್ಟು ತಮಿಳು ಪೊರ್ಕಿಗಳಿದ್ದ ಗ್ಯಾಂಗ್ ಪೊಲೀಸರ ಮೇಲೆ ಕಲ್ಲು ತೂರಿತು. ಆದರೆ ಪೊಲೀಸರು ಇದಕ್ಕೆಲ್ಲ ಹೊಣೆ ಮಾಡಿ ಜೈಲಿಗೆ ಹಾಕಿದ್ದು ಅದೇ ಪ್ರಕಾಶ್ ನಗರದಲ್ಲಿ ರಾಜ್ಯೋತ್ಸವ ಮಾಡುವ ಮಂಜು ಮತ್ತು ಆತನ ಅಕ್ಕನ ಮಕ್ಕಳನ್ನು!

ಕಿಡಿಗೇಡಿಗಳ್ಯಾರು, ಅಭಿಮಾನಿಗಳ್ಯಾರು ಎಂದು ವಿಂಗಡಿಸಿ ಬಗ್ಗುಬಡಿಯುವ ಕೌಶಲ್ಯವೇ ಪೊಲೀಸರಲ್ಲಿರಲಿಲ್ಲ, ಏಪ್ರಿಲ್ ಹದಿನೈದರಂದು ಬೆಂಗಳೂರಿನ ಬೇರೆಬೇರೆ ಠಾಣೆಗಳಲ್ಲಿ ಮುನ್ನೂರಕ್ಕೂ ಅಧಿಕ ಮಂದಿಯನ್ನು ಬಂಧಿಸಿ ಕೋರ್ಟಿಗೆ ಕರೆತಂದಿದ್ದ ಪೊಲೀಸರಿಗೆ ವಕೀಲರೇ ಹಿಡಿಶಾಪ ಹಾಕುತ್ತಿದ್ದರು. ಅದರ ಮರು ದಿನವೇ ಮತ್ತೆ ಇನ್ನೂರು ಮಂದಿಯನ್ನು ಜೈಲಿಗೆ ಹಾಕಲಾಯಿತು. ಜೆ.ಪಿ. ನಗರ ಪೊಲೀಸ್ ಇನ್ಸ್‌ಪೆಕ್ಟರ್ ಕೋನಪ್ಪ ರೆಡ್ಡಿ ಕೈಗೆ ಸಿಕ್ಕ ಹತ್ತು ಮಂದಿ ಕನ್ನಡಾಭಿಮಾನಿಗಳನ್ನು ಜೈಲಿಗೆ ದಬ್ಬಿದ್ದ. ಚಂದ್ರಾಲೇಔಟ್ ಇನ್ಸ್‌ಪೆಕ್ಟರ್ ರಾಜ, ಧನಂಜಯ, ಜಗ್ಗ, ಓಬಳಪ್ಪ ಮುಂತಾದವರನ್ನು ಹಿಡಿದು ಜೈಲಿಗೆ ಸಾಗಿಸಿದ್ದಾರೆ. ಇದು ಪೊಲೀಸ್ ಅತಿರೇಕ ಮತ್ತು ಕುಮಾರಸ್ವಾಮಿಯ ಅವಿವೇಕ ಒಟ್ಟೊಟ್ಟಿಗೆ ಕೈ ಜೋಡಿಸಿದ್ದರ ಪ್ರತಿಫಲ.

ಪ್ರಾರಂಭದಲ್ಲಿ ಹಿಂಸಾಚಾರದಲ್ಲಿ ಅಭಿಮಾನಿಗಳ ಕೈವಾಡವಿಲ್ಲ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಕಾಂಗ್ರೆಸ್ಸಿನತ್ತ ಬೊಟ್ಟು ಮಾಡಿದ್ದರು. ಯಾವತ್ತು ಕಾಂಗ್ರೆಸ್ ತಿರುಗಿಬಿತ್ತೋ ಮತ್ತೆ ಅಭಿಮಾನಿಗಳ ಮೇಲೆ ಬಿದ್ದರು. ಬಂಧಿತರಾದ ಎರಡು ಸಾವಿರ ಮಂದಿಯ ಪೈಕಿ ಬಹುತೇಕರು ರಾಜ್‌ರ ನಿಷ್ಠಾವಂತ ಅಭಿಮಾನಿಗಳು. ಮಿಕ್ಕಂತೆ ಕನ್ನಡ ಕಾರ್ಯಕರ್ತರು. ದುರಂತವೆಂದರೆ ಇಂಥವರನ್ನು ಕಿಡಿಗೇಡಿಗಳು, ರೌಡಿಗಳು ಎಂದು ಕಮಿಷನರ್ ಅಜಯ್ ಕುಮಾರ್ ಸಿಂಗ್ ಹೇಳಿಕೆ ಕೊಡುತ್ತಿದ್ದಾರೆ. ಅದನ್ನೇ ಪತ್ರಿಕೆಗಳು ನಂಬುತ್ತಿವೆ. ಪ್ರತಿಭಟಿಸಬೇಕಿದ್ದ ಕಾಂಗ್ರೆಸ್ ಮತ್ತು ವಾಟಾಳ್ ಏಕಾಏಕಿ ಮುಗುಮ್ಮಾಗಿಬಿಟ್ಟಿದ್ದಾರೆ. ಕನ್ನಡ ಪರ ಹೋರಾಟಗಾರರೂ ತೆಪ್ಪಗಾಗಿದ್ದಾರೆ. ಸಾ.ರಾ.ಗೋವಿಂದು, ರಕ್ಷಣಾ ವೇದಿಕೆಯ ನಾರಾಯಣಗೌಡ, ಪ್ರಭಾಕರ್‌ರೆಡ್ಡಿ ಥರದವರೂ ಕುಮಾರಸ್ವಾಮಿಯ ವಿರುದ್ಧ ಸೊಲ್ಲೆತ್ತಿಲ್ಲ. 'ಅಣ್ಣಾವ್ರ ಭಕ್ತರಾದ ತಪ್ಪಿಗೆ ಅಭಿಮಾನಿಗಳಿಗೆ ಇದೆಂಥ ತಲೆದಂಡ? ಮುಖ್ಯಮಂತ್ರಿ ಕುಮಾರಸ್ವಾಮಿಗೆ ಯಾವ ದೇವರು ತಾನೆ ಬುದ್ಧಿ ಕೊಟ್ಟಾನು?

ಅಕ್ಷರದಂಗಡಿಗಳ ಒಡೆಯ ಟಾಟಾನ ಮರ್ಡರ್

ಅವನನ್ನು ಕೊಚ್ಚುಗೊಂಡಿಯ ಬಳಿ ಭೀಕರವಾಗಿ ...ಲೆ ಮಾಡಲಾಗಿತ್ತು. ಏಪ್ರಿಲ್ 15ರ ಮುಂಜಾನೆ ...ತ್ತಿಗೆ ಶಿವಮೊಗ್ಗದಲ್ಲೆಲ್ಲ 'ಟಾಟಾ ಮರ್ಡರ್' ಎಂಬ ...ದ್ದಿ ಹಬ್ಬತೊಡಗಿತ್ತು. ಸತ್ತವನ ಬಗ್ಗೆ ಮರುಕ ...ಪಡುವವರಿಗಿಂತ "ಹೋಯ್ತಾ ಪಾಪಿ" ಎನ್ನುವವರೇ ...ದ್ದರು. ಕೊಲೆಯಾದ ಈ ಆಸಾಮಿಯ ಹೆಸರು ...ಟಾನಾಯ್ಕ!

ಬಿರ್ಲಾಗಿಂತಲೂ ಶ್ರೀಮಂತನಾಗಲು ಅಡ್ಡದಾರಿ ಹಿಡಿದ ...ಟಾಟಾನಾಯ್ಕನನ್ನು ಕೊಂದವರ್ಯಾರು ಎಂಬುದು ...ಗೂಢವಾಗುತ್ತಿದೆ. ...ಟಾಟಾನಾಯ್ಕನ ಬಡ್ಡಿ ...ವಹಾರ ಜಾಲದ ...ಮಿಗಳೇ ...ಕೊಂದರೋ? ಅಥವಾ ...ಟಾಟಾನಾಯ್ಕನ ಹೆಂಡತಿ ...ತಾನೇ ಗಂಡನ ...ಕೊಲೆ ಮಾಡಿಸಿದಳೋ? ...ಎಂಬ ಪ್ರಶ್ನೆಗಳೀಗ ...ಶಿವಮೊಗ್ಗದಲ್ಲಿ ...ಹರಿದಾಡುತ್ತಿವೆ.



ಟಾಟಾನಾಯ್ಕ ತನ್ನ ಹೆಂಡತಿ ಮಗನೊಂದಿಗೆ

...ಟಾಟಾನ (ಪಡ) ಶಾಲೆಗಳು!

ತರೀಕೆರಿ ಮೂಲದ ...'ಟಾಟಾ' ಬಾಟಾ ...ಪ್ಪಲಿ ಹಾಕಿಕೊಂಡು ...ಶಿವಮೊಗ್ಗಕ್ಕೆ ಬಂದು, ಪರಿಶಿಷ್ಟರಿಗೆ ಸಿಗುವ ಸರ್ಕಾರದ ...ಸವಲತ್ತುಗಳನ್ನೆಲ್ಲ ದುರುಪಯೋಗಪಡಿಸಿಕೊಂಡು, ...ಶಿಕ್ಷಣದ ಹೆಸರಲ್ಲಿ ಅಕ್ಷರದಂಗಡಿಗಳನ್ನು ಎಬ್ಬಿಸಿ, ನೋಡು ...ನೋಡುವುದರೊಳಗೆ ಕುಬೇರನಾಗಿ ಹೋಗಿದ್ದ.

ಈತನ ಸಕಲ 'ಅಕ್ಷರ ವ್ಯಾಪಾರ' ನಡೆಯುತ್ತಿದ್ದುದೆಲ್ಲ ...ಸೇವಾಲಾಲ್ ವಿದ್ಯಾಸಂಸ್ಥೆಯ ಹೆಸರಿನಲ್ಲಿ. 1988 ...ರಲ್ಲೇ ಈ ಟಾಟಾ ನಾಯ್ಕ 'ಅಕ್ಷರ ದಾಸೋಹ'ಕ್ಕೆ ಕೈ ...ಹಾಕಿ ಭದ್ರಾವತಿಯಲ್ಲೊಂದು ಹಿರಿಯ ಪ್ರಾಥಮಿಕ ...ಶಾಲೆ ತೆರೆದುಬಿಟ್ಟ. 'ಅಕ್ಷರ ದಾಸೋಹ' ಎಂದರೆ ...ಅಕ್ಷರಗಳ ಹೆಸರಲ್ಲಿ ಸ್ವಾಹಾ ಮಾಡಿ ಸ್ವ-ದಾಸೋಹ ಮಾಡಿಕೊಳ್ಳುವುದು ಎಂದೇ ನಂಬಿದ್ದ ಈ ಟಾಟಾ ತನ್ನ ಶಿಕ್ಷಣ "ಸೇವೆ"ಯನ್ನು ವಿಸ್ತರಿಸುತ್ತಾ ಸಾಗಿ ಶಿವಮೊಗ್ಗದೆಲ್ಲೆಡೆ ಸ್ಕೂಲ್‌ಗಳೆಂಬ ಶಾಪ್‌ಗಳನ್ನು ತೆರೆದಿದ್ದ.

ಸರ್ಕಾರದ ಅನುದಾನಗಳನ್ನು ನುಂಗುವುದು, ಕೆಲಸ ಕೊಡಲು ಶಿಕ್ಷಕರಿಂದ ಲಕ್ಷಾಂತರ ಹಣ ಪೀಕುವುದು, ನಂತರ ಹಲವರನ್ನು ಬೀದಿ ಪಾಲು ಮಾಡುವುದು ಈ ಸೇವಾಲಾಲನ ಶಿಷ್ಯ ಟಾಟಾನಿಗೆ 'ಅ ಆ ಇ ಈ' ಬರೆದಷ್ಟೇ ಸುಲಭವಾಗಿಬಿಟ್ಟಿತ್ತು. ಈತನ ಪಡ 'ಶಾಲೆ'ಗಳ ಲಿಸ್ಟ್‌ನಲ್ಲಿ ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳಷ್ಟು ಶಾಲೆಗಳೇ ಇವೆ. ಭದ್ರಾವತಿ ತಾಲೂಕಿನ ಗೋಣಿಬೀಡುವಿನಲ್ಲಿ ವೀರಭದ್ರೇಶ್ವರ ದೇವರ ಹೆಸರಲ್ಲೊಂದು ಶಾಲೆ, ಹೆಣ್ಣು ದೇವರುಗಳಿಗೆ ಬೇಜಾರಾಗಬಾರದೆಂದು ಶಿವಮೊಗ್ಗ ತಾಲೂಕಿನ ಸಂತೆ ಕಡೂರಿನಲ್ಲಿ ಚಾಮುಂಡೇಶ್ವರಿ ತಾಯಿ ಹೆಸರಲ್ಲೊಂದು ಶಾಲೆ ತೆಗೆದ ಟಾಟಾ ಕನ್ನಡಮಾತೆ ಭುವನೇಶ್ವರಿಗೆ ಅದ್ಹೇಗೆ ಅನ್ಯಾಯ ಮಾಡಿಯಾನು ಹೇಳಿ.... ಗೋಪಾಳದಲ್ಲಿ ಭುವನೇಶ್ವರಿಯಮ್ಮನ ಹೆಸರಲ್ಲಿ ಸ್ಕೂಲು, ವಿನೋಬ ನಗರದಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆ, ಗೋಪಾಳದಲ್ಲಿ ಜ್ಞಾನಗಂಗೋತ್ರಿ ಶಾಲೆಗಳಾದರೆ ಶರಾವತಿನಗರದಲ್ಲಿ 'ಜ್ಞಾನದೀಪ' ಎಂಬ ಅಕ್ಷರದಂಗಡಿ!

ಎಲ್ಲವನ್ನು ಸೇವಾಲಾಲ್ ಸ್ವಾಮಿಗಳ ಹೆಸರಲ್ಲೇ ಮಾಡಿದರೆ ಅನುದಾನ ಪೀಕುವುದು ಕಷ್ಟ ಎಂದರಿತ ಟಾಟಾನಾಯ್ಕ ಕಬೀರಾನಂದ ವಿದ್ಯಾಸಂಸ್ಥೆ ಹುಟ್ಟು ಹಾಕಿ ಮತ್ತೆ ಮೂರು ಶಾಲೆ ತೆರೆದಿದ್ದ. ಟಿಸಿಎಚ್, ಫಾರ್ಮಸಿ ಕಾಲೇಜುಗಳನ್ನು ತೆರೆಯುವ ಪುಡಾರಿಗಳು ಎಲ್ಲ ರಿಗೂ ಎದ್ದು ಕಾಣುತ್ತಾರೆ. ಆದರೆ ಟಾಟಾನಾಯ್ಕನ ತಂತ್ರವೇ ಭಿನ್ನವಾಗಿತ್ತು, ಅವನಿಗೆ ಪ್ರೈಮರಿ ಎಜುಕೇಷನ್ನೆಂದರೆ 'ಅಪಾರ ಪ್ರೀತಿ'!!



ಟಾಟಾನಾಯ್ಕ

ಶಿವಮೊಗ್ಗ

'ಸರಸ್ವತಿ' ಹೆಸರಲ್ಲಿ ಕಮಾಯಿಸಿದ 'ಲಕ್ಷ್ಮಿ'ಯನ್ನು ಬಡ್ಡಿಗೆ ಬಿಟ್ಟು ಅಕ್ಷರಗಳನ್ನು ಕಾಂಚಾಣಗಳನ್ನಾಗಿ ಪರಿವರ್ತಿಸುವ ಕಲೆ ಸಿದ್ಧಿಸಿಕೊಂಡಿದ್ದ ಟಾಟಾನಾಯ್ಕ ಬಡವರಿಂದ ಬಡ್ಡಿ ಹಣ ಮುಕ್ಕುತ್ತಾ ಆಗರ್ಭ ಶ್ರೀಮಂತನಾಗಿ ಹೋಗಿದ್ದ. ಹಲವಾರು ಮನೆ, ಸೈಟುಗಳ ಒಡೆಯನಾಗಿದ್ದ.

ಹೆಂಡತಿ ಕೊಂದಳಾ?

ಡಿಡಿಪಿಐ ಕಚೇರಿಯ ನಾರಾಯಣ, ಪರಮೇಶ್ವರಪ್ಪ, ಶಿರಾಜ್, ಬಿಇಓ ಕಚೇರಿಯ ಪುಟ್ಟಸ್ವಾಮಿ, ಗಿರಿಯಪ್ಪರಂತಹ ಅಧಿಕಾರಿಗಳಿಗೆ ಸಾಲ ಕೊಟ್ಟು ತನ್ನ ಅಡಿಯಾಳು ಮಾಡಿಕೊಂಡಿದ್ದ ಟಾಟಾನಾಯ್ಕ, ತನ್ನ ವ್ಯವಹಾರಗಳ ಕುರಿತು ಪತ್ನಿಗೂ ವಿವರ ಕೊಡುತ್ತಿರಲಿಲ್ಲ. ಹುಡುಗಿಯರ ಖಯಾಲಿಗೆ ಬಿದ್ದ ಟಾಟಾನಾಯ್ಕನಿಗೆ ಬರುಬರುತ್ತಾ ಹೆಂಡತಿ ಉಷಾಳ ಶೀಲದ ಮೇಲೇ ಅನುಮಾನ ಬರತೊಡಗಿತ್ತು.

ಏಪ್ರಿಲ್ 14ರ ರಾತ್ರಿ ಸ್ಪ್ಲೆಂಡರ್ ಬೈಕ್ ಮೇಲೆ ಗಾಂಧಿನಗರದಲ್ಲಿ ಹೊರಟಿದ್ದಾಗ, ಆಟೋದಲ್ಲಿ ಬಂದ ನಾಲ್ಕು ಜನ ಏಕಾಏಕಿ ದಾಳಿ ಮಾಡಿ ಟಾಟಾನನ್ನು ಕೊಚ್ಚಿ ಹೋಗಿದ್ದಾರೆ. ಬಡ್ಡಿ ವ್ಯವಹಾರದ ಕರಾಳ ಜಾಲ ಟಾಟಾನನ್ನು ಹೆಣ ಮಾಡಿತೆ? ಅಥವಾ ಜನ ಮಾತಾಡುವಂತೆ ಪತ್ನಿ ಉಷಾ ತನ್ನ ಪ್ರಿಯಕರನ ನೆರವಿನಿಂದ ಈ ಕೊಲೆ ಮಾಡಿಸಿದಳೆ ಎಂಬುದು ಈಗ ಚರ್ಚೆಯ ವಿಷಯವಾಗಿದೆ.

ರಾಷ್ಟ್ರಪತಿಗಳಿಂದ ಹಿಡಿದು ರತನ್ ಟಾಟಾವರೆಗೆ ಎಲ್ಲರೂ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿ ಎನ್ನುತ್ತಿರುವ ಈ ವೇಳೆಯಲ್ಲೇ ಪ್ರಾಥಮಿಕ ಶಿಕ್ಷಣವೂ ಒಂದು ವ್ಯಾಪಾರ ಎಂಬ 'ಪ್ರಾಥಮಿಕ ಜ್ಞಾನ' ಗಳಿಸುವಷ್ಟು 'ಪ್ರೌಢ'ನಾಗಿದ್ದ ಟಾಟಾನಾಯ್ಕ ಎಂಬ ಅಕ್ಷರ ವ್ಯಾಪಾರಿ, ಬಡ್ಡಿ ಭಂಡ ಬೀದಿ ಹೆಣವಾಗಿ ಹೋಗಿದ್ದಾನೆ!

-ವರದಿಗಾರ

ಪ್ರಾಮಾಣಿಕರಿಗೂ ಪನಿಶ್‌ಮೆಂಟ್! ಡಿ.ಸಿ. ಹರ್ಷಗುಪ್ತ ವರ್ಗಾ

ಭೂಮಾಲೀಕರು, ಭಜರಂಗಿಗಳ ಗಾಡ್‌ಫಾದರ್‌ನಂತಿರುವ ಈ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಜಿಲ್ಲಾಧಿಕಾರಿ, ಎಸ್ಪಿಗಳ ಎತ್ತಂಗಡಿಗೆ ಸಿದ್ಧತೆಗಳು ಆರಂಭಗೊಂಡಿದ್ದವು. ಅದೀಗ ಒಂದು ಹಂತಕ್ಕೆ ಬಂದು ನಿಂತಿದೆ.



ಜಿಲ್ಲಾಧಿಕಾರಿ ಹರ್ಷ ಗುಪ್ತ

ಚಿಕ್ಕಮಗಳೂರಿನಿಂದ ಒಬ್ಬ ದಕ್ಷ ಅಧಿಕಾರಿಯ ಎತ್ತಂಗಡಿಯಾಗಿ ಹೋಗಿದೆ. ಚೆಡ್ಡಿಗಳ ಆಣತಿಯಂತೆ ಕುಣಿಯುವ ಕುಮಾರಸ್ವಾಮಿ ಸಾಹೇಬರು ಜಿಲ್ಲಾಧಿಕಾರಿ ಹರ್ಷಗುಪ್ತಾರನ್ನು ಹಾಸನಕ್ಕೆ ಟ್ರಾನ್ಸ್‌ಫರ್ ಮಾಡಿ, ಭೂಮಾಲೀಕರು, ಭಜರಂಗಿಗಳು, ಒಂದಂಕಿ ಲಾಟರಿಯವರು, ನಕಲಿ ಸಾರಾಯಿ ಮಾರುವವರಿಗೆಲ್ಲ ಅರ್ಧ ಖುಷಿ ತಂದಿದ್ದಾರೆ. ಈ ಪಾಪಿಗಳೆಲ್ಲ ಪೂರ್ತಿ ಖುಷಿಯಾಗಬೇಕೆಂದರೆ ಎಸ್ಪಿ ಮಧುಕರಶೆಟ್ಟಿಯವರನ್ನು ವರ್ಗಾ ಮಾಡಬೇಕಂತೆ. ಆ ಕಾರ್ಯವೂ ಈಗ ಭರದಿಂದ ಸಾಗಿದೆ.

ಡಿ.ಎಚ್. ಶಂಕರಮೂರ್ತಿ ಈ ಜಿಲ್ಲೆಗೆ ಉಸ್ತುವಾರಿ ಸಚಿವರಾದಾಗಿನಿಂದ ಹರ್ಷಗುಪ್ತ, ಮಧುಕರ ಶೆಟ್ಟಿಯವರನ್ನು ಬೇರೆಡೆ ಕಳಿಸುವ ಕೆಲಸಕ್ಕೆ ಕೈ ಹಾಕಿದ್ದರು. ಬಡವರ ಕಾಳಜಿಗಳ, ಸ್ವಚ್ಛ ಮನಸ್ಸಿನ ಹರ್ಷಗುಪ್ತಾ, ದಿಟ್ಟತನದ ಮಧುಕರ ಶೆಟ್ಟಿ ಇಬ್ಬರೂ ಸೇರಿ ಈ ಒಂದು ವರ್ಷದಲ್ಲಿ ಚಿಕ್ಕಮಗಳೂರಿನ ಜನತೆಗೆ ನೆಮ್ಮದಿ ತಂದಿದ್ದರು. ...ಕೋಮು ಗಲಭೆ, ನಕ್ಸಲ್ ಸಮಸ್ಯೆ ಎಂದು ...ದಲ್ಲಿದ್ದ ಧರಂ ಸರ್ಕಾರ ಈ ಇಬ್ಬರು ದಕ್ಷ ಅಧಿಕಾರಿಗಳನ್ನು ಚಿಕ್ಕಮಗಳೂರಿಗೆ ತಂದಿತ್ತು.

"ಇಲ್ಲಿ ಒತ್ತುವರಿಯೇ ಇಲ್ಲ-ಭೂಮಾಲೀಕರು ...ಯಾವ ಜಗಳವೇ ಇಲ್ಲ" ಎಂದು ರೀಲು ಬಿಡುತ್ತಾ ...ಕಾಂಗ್ರೆಸ್ಸಿನ ಒತ್ತುವರಿ ಒಡೆಯರ ಪಾದ ನೆಕ್ಕುವ ಸಿ.ಟಿ. ರವಿ, ಡಿ.ಬಿ. ಚಂದ್ರೇಗೌಡರಂತಹವರು ಮಾಡಲಾಗದ್ದನ್ನು ಡಿಸಿ-ಎಸ್ಪಿ ಜೋಡಿ ಮಾಡಿ ತೋರಿಸಿತ್ತು. ಭೂಮಾಲೀಕರ ಒತ್ತುವರಿ ಜಮೀನನ್ನು ತೆರವುಗೊಳಿಸಿ, ಕೂಲಿಗಳಿಗೆ ಹಂಚುತ್ತಾ ಸಾಗಿದ ಡಿಸಿ-ಎಸ್ಪಿ ದಲಿತರು, ಹಿಂದುಳಿದವರು, ಗಿರಿಜನರ ಪ್ರೀತಿಗೆ, ಮೆಚ್ಚುಗೆಗೆ ಪಾತ್ರರಾಗುತ್ತಾ ಬಂದರು.

ಸಾರಗೋಡು ಅರಣ್ಯ ಪ್ರದೇಶದಲ್ಲಿ ಭೈರೇಗೌಡ ಎಂಬ ಭೂಮಾಲೀಕ 50 ರಿಂದ 60 ಎಕರೆ ಕಾಡನ್ನು ಒತ್ತುವರಿ ಮಾಡಿ ಕಾಫಿ ಪ್ಲಾಂಟ್ ಮಾಡಿದ್ದನ್ನು ಪತ್ತೆಹಚ್ಚಿದ ಹರ್ಷಗುಪ್ತಾ, ಮಧುಕರ ಶೆಟ್ಟಿಯವರು ಅತ್ಯಂತ ಶಿಸ್ತಿನಿಂದ ಆ ಜಮೀನನ್ನು ತೆರವುಗೊಳಿಸಿ, spot ನಲ್ಲೇ 25 ದಲಿತ, ಗಿರಿಜನ ಕುಟುಂಬಗಳಿಗೆ ತಲಾ ಎರಡೆಕರೆಯಂತೆ ಹಂಚಿ, ಜಮೀನು ಪತ್ರಗಳನ್ನು ನೀಡಿ ಅಪೂರ್ವ ಸಾಧನೆ ಮಾಡಿದ್ದರು.

ದಲಿತರ ಜಮೀನನ್ನು ಅಕ್ರಮವಾಗಿ ಬರೆಸಿಕೊಂಡಿದ್ದ ಭೂಮಾಲೀಕರ ಮೇಲೆ ಅವಹೇಳನದ ಕೇಸು ಜಡಿದು ದಲಿತರಿಗೆ ವಾಪಾಸ್ ಭೂಮಿ ಕೊಡಿಸಿದ್ದೂ ಈ ಡಿಸಿ-ಎಸ್ಪಿಗಳ ಸಾಧನೆಯೇ. ಲೈಸೆನ್ಸ್ ಇಲ್ಲದೇ ಅಕ್ರಮವಾಗಿ ನಡೆಯುತ್ತಿದ್ದ ಸುಮಾರು 80 ಸಾರಾಯಿ ಅಂಗಡಿಗಳನ್ನು ಮುಚ್ಚಿಸಿ ಕೇರಿಗಳಲ್ಲಿ ಶಾಂತಿ ತಂದಿದ್ದರು. ಬಳ್ಳಾರಿ, ಹೊಸಪೇಟೆಗಳಿಂದ ಅದಿರು ಹೊತ್ತು ಮಂಗಳೂರಿಗೆ ಸಾಗುವ ರಾಕ್ಷಸಿ ಟ್ರಕ್‌ಗಳು ಚಿಕ್ಕಮಗಳೂರು ಜಿಲ್ಲೆ ಮೂಲಕ ಹಾಯ್ದು ಹೋಗದಂತೆ ಡಿಸಿ, ಎಸ್ಪಿಗಳು ನಿರ್ಬಂಧ ಹೇರಿದ್ದರಿಂದ ಚಿಕ್ಕಮಗಳೂರು ಜಿಲ್ಲೆ ರಸ್ತೆಗಳು ಬದುಕಿದವು. ಇವತ್ತು ಒಂದಂಕಿ ಲಾಟರಿ ಇಲ್ಲದ ಜಿಲ್ಲೆಯೆಂದರೆ ಅದು ಚಿಕ್ಕಮಗಳೂರು ಒಂದೇ ಎಂದು ಕಾಣುತ್ತದೆ.

ಬಾಬಾಬುಡನ್‌ಗಿರಿಯಲ್ಲಿ ಶಾಂತಿ ಕದಡುವ ಭಜರಂಗಿಗಳಿಗೆ ಕಡಿವಾಣ ಹಾಕಿದ್ದರಿಂದ ಈ ಸಾರಿ ಪೂಜೆಗೆ ಎರಡು ಸಾವಿರ ಮಂಗಗಳು ಮಾತ್ರ ಹಾಜರಾಗುವಂತಾಗಿ ಚೆಡ್ಡಿಗಳಿಗೆ ಮುಖಭಂಗವಾಗಿತ್ತು.

ಬಿಜೆಪಿಯ ಲೋಕಲ್ ಪುಡಾರಿಯೊಬ್ಬನ ಮೇಲೆ ಇನ್ಸ್‌ಪೆಕ್ಟರ್ ಒಬ್ಬರು ಅಟ್ರಾಸಿಟಿ ಕೇಸು ದಾಖಲಿಸಿದ್ದಕ್ಕೆ ಕೆಂಡಾಮಂಡಲನಾದ ಡಿ.ಎಚ್. ಶಂಕರಮೂರ್ತಿ ಎಸ್ಪಿ ಮಧುಕರ ಶೆಟ್ಟಿಗೆ "ಅಲ್ಲಾರೀ, ನಮ್ಮ ಪಾರ್ಟಿ ಲೀಡರ್ಸ್ ಮೇಲೇ ಅಟ್ರಾಸಿಟಿ ಕೇಸು ಹಾಕ್ತೀರಾ... ಭೂಮಾಲೀಕರ ಭೂಮಿ ಕಿತ್ತು ದಲಿತರಿಗೆ ಹಂಚ್ತಿರಾ... ಆದರೆ ಆ ಶೇಷಪ್ಪ ಗೌಡ್ನನ್ನು ಕೊಂದವರನ್ನು ಹಿಡಿಯೋಕಾಗೊಲ್ಲವೇನ್ರಿ" ಎಂದು ಕೆಟ್ಟದಾಗಿ ಮಾತಾಡಿ ಹೋದಾಗಲೇ ಈ ಚೆಡ್ಡಿ ಏನೋ ಮಸಲತ್ತು ಮಾಡಲಿದೆ ಎಂಬುದು ಜನರಿಗೆ ಗೊತ್ತಾಗಿತ್ತು.




ಎಸ್ಪಿ ಮಧುಕರಶೆಟ್ಟಿ

ಈ ಹಿಂದೆ ಹರ್ಷಗುಪ್ತರನ್ನು ಚಾಮರಾಜನಗರದಿಂದ ವರ್ಗಾ ಮಾಡಿದಾಗ ಅಲ್ಲಿನ ಜನ ಸ್ವಯಂಸ್ಫೂರ್ತಿಯಿಂದ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದರು.

ಈಗ ಚಿಕ್ಕಮಗಳೂರಲ್ಲೂ ಹರ್ಷಗುಪ್ತಾ ಪರ, ಸರ್ಕಾರದ ವಿರುದ್ಧ ಪ್ರತಿಭಟನೆಗೆ ಜನ ತಯ್ಯಾರಾಗುತ್ತಿದ್ದಾರೆ. ಇಲ್ಲದಿದ್ದರೆ ಈ ಸರ್ಕಾರ ಎಸ್ಪಿ ಮಧುಕರ ಶೆಟ್ಟಿಯವರನ್ನೂ ಎತ್ತಂಗಡಿ ಮಾಡಲಿದೆ. ಬರಲಿರುವ ಡಿಸೆಂಬರ್‌ನಲ್ಲಿ ಗಲಭೆ ಎಬ್ಬಿಸಲು ಕಾದಿರುವ ಚೆಡ್ಡಿಗಳಿಗೆ ಈಗಿನಿಂದಲೇ ಪ್ರೋತ್ಸಾಹ ಕೊಡುತ್ತಿದೆ ಈ ಕೋಮುವಾದಿ ಸರ್ಕಾರ! ■

ರಾಯಚೂರು ರಾಜಕೀಯ: ಗೌಡ್ರು ಗದ್ಲಕ್ಕೆ ಬ್ರೇಕ್ ಬಿತ್ತೆ?

ರಾಯಚೂರು ರಾಜಕೀಯದಲ್ಲಿ ಲಿಂಗಾಯತ ರೆಡ್ಡಿಗಳ ಪ್ರಭಾವ ಮೊದಲಿನಷ್ಟು ಉಳಿದಿಲ್ಲ. ಪಾಳೆಗಾರಿಕೆ ರಾಜಕಾರಣಕ್ಕೆ ಹಿಂದುಳಿದ ವರ್ಗಗಳು ಸವಾಲು ಎಸೆಯುತ್ತಲೇ ಇವೆ. ವಾಲ್ಮೀಕಿ (ನಾಯಕ) ಮತ್ತು ಕುರುಬ ಜನಾಂಗಗಳು ರಾಜಕೀಯವಾಗಿ ಸಾಕಷ್ಟು ಬೆಳೆದಿದ್ದರೂ, ಆ ಜನಾಂಗಗಳಿಂದ ಗೆಲ್ಲುತ್ತಿರುವ ರಾಜಕಾರಣಿಗಳೂ ಇನ್ನೊಂದು ಬಗೆಯ ಪಾಳೆಗಾರಿಕೆಯತ್ತ ಸಾಗುತ್ತಿರುವುದು ದುರಂತ.



ಸದ್ಯ ಜಿಲ್ಲೆಯ 6 ಎಂಎಲ್‌ಎ ಕ್ಷೇತ್ರಗಳಲ್ಲಿ ಲಿಂಗಸೂರು ಮತ್ತು ಸಿಂಧನೂರುಗಳಲ್ಲಿ ಮಾತ್ರ ಲಿಂಗಾಯತ ಶಾಸಕರಿದ್ದಾರೆ. ಅಂದಹಾಗೆ ಇವರಿಬ್ಬರೂ ಪಾಕ್ ನಾಕ್ ರೆಡ್ಡಿಗಳೇ!

ಲಿಂಗಸೂರು: ಲಿಂಗಾಯತರ ಸೂರು?

ಇವತ್ತಿಗೂ ಇಲ್ಲಿ ಲಿಂಗಾಯತರು ಅಂದರೆ ಮತ್ತದೇ ಪಾಕ್‌ನಾಕ್ ರೆಡ್ಡಿಗಳ ಕಾರುಬಾರು. ಇಲ್ಲಿನ ಹೇಮರಡ್ಡಿ ಮಲ್ಲಮ್ಮ, ಅಮರೇಶ್ವರನ ಭಕ್ತರಾದ ಈ ಲಿಂಗಾಯತ ರಾಜಕಾರಣಿಗಳೆಲ್ಲ ಪಾಳೆಗಾರಿಕೆಯ ಪ್ರಭೃತಿಗಳೇ ಆಗಿದ್ದಾರೆ.

ಗೆಜ್ಜಲಕಟ್ಟ ದೊರೆಸಾನಿ ಬಸವರಾಜೇಶ್ವರಿ ಎಂಬ ಫಿಮೇಲ್ ಪಾಳೇಗಾರಳದು ದಲಿತ ವಿರೋಧಿ, ಹಿಂದುಳಿದವರ ವಿರೋಧಿ ರಾಜಕಾರಣವೇ ಆಗಿತ್ತು. 50ರ ದಶಕದಲ್ಲೇ ಯಂಗ್ ಬಸವರಾಜೇಶ್ವರಿ ಶಾಸಕಿಯಾಗಿ ಬಿಟ್ಟು ಮುಂದೆ ಬರೀ ರಾಯಚೂರಿಗಷ್ಟೇ ಅಲ್ಲ, ಬಳ್ಳಾರಿ ಪಾಲಿಗೂ ಭಯಂಕರ ಬೇತಾಳದಂತೆ ಕಾಡಿದ್ದಳು.

ಸಾವಿರಾರು ಎಕರೆಗಳ ಜಮೀನಿನ ಒಡತಿಯಾಗಿದ್ದ ಬಸವರಾಜೇಶ್ವರಿ ಲಿಂಗಸೂರಿಗಷ್ಟೇ ಅಲ್ಲದೇ ಮಾನ್ವಿಗೂ ಶಾಸಕಿಯಾಗಿ ಮೆರೆದ ಮಾನಿನಿ. ಪ್ರಚಾರ ಮಾಧ್ಯಮಗಳ ಕೊರತೆಯಿದ್ದ ಆ ಕಾಲದಲ್ಲಿ ಪ್ರತಿ ಊರಿನ ಪ್ರಮುಖ ಲೀಡರುಗಳನ್ನು ತನ್ನ ಮುಷ್ಠಿಯಲ್ಲಿಟ್ಟುಕೊಂಡು ಪೊಲಿಟಿಕಲ್ ಗೇಮ್ ನಡೆಸಿದಾಕೆ. ಲಿಂಗಾಯತ ಗೌಡರ ದಬ್ಬಾಳಿಕೆಯೇ ಅಮ್ಮನ ಗೆಲುವಿಗೆ ಅಡಿಪಾಯವಾಗಿತ್ತು.

ಪಿ.ವಿ. ನರಸಿಂಹರಾವ್ ಆಡಳಿತದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಣಿಯಾಗಿ ತನ್ನ ಮಕ್ಕಳ ಕಲ್ಯಾಣ ಮಾಡಿದ್ದು ಈಕೆಯ ಹಿರಿಮೆಯಂತೆ! ರಾಯಚೂರು ಸಾಲದ್ದಕ್ಕೆ ಬಳ್ಳಾರಿಗೂ ಮೂರು ಬಾರಿ ಎಂಪಿಣಿಯಾಗಿ, ಸ್ವಜನಪಕ್ಷಪಾತದ ಸಿಂಹಿಣಿಯಾಗಿ ಮೆರೆದಳು. ಈ ದಬ್ಬಾಳಿಕೆಯ ದರಬಾರಿನ ದೊರೆಸಾನಿ ಎಂದಿಗೂ ಕಾಂಗ್ರೆಸ್ ನಿಷ್ಠೆ ಬಿಡದ ನಿಷ್ಠಾವಂತ ಕಾರ್ಯಕರ್ತೆ ಎನಿಸಿದ್ದಳು.

ಪಿಂಜರಾಪೋಲು ಪುತ್ರ ಡಾ. ವೆಂಕಟ್ ಮಹಿಪಾಲನಿಗೆ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮೇಯ್ದಾಡಲು ಬಿಟ್ಟದ್ದೂ ಈಕೆಯ ಸಾಧನೆಯೇ! ಇನ್ನೊಬ್ಬ ಪುತ್ರ ಅಶೋಕ್ ಭೂಪಾಲ್ ಸಿಂಧನೂರು ಎಪಿಎಂಸಿ ಡೈರೆಕ್ಟರ್ ಆಗಿ ಖುಷಿಪಟ್ಟಿದ್ದ.

ಈ ಬಸವರಾಜೇಶ್ವರಿಯ ನೆರಳಲ್ಲೇ ಖತರ್‌ನಾಕ್ ಪಾಕ್‌ನಾಕ್ ರೆಡ್ಡಿಯೊಬ್ಬ ರಾಜಕೀಯದ ಸಕಲ ಸ್ಟಂಟ್‌ಗಳನ್ನು



ಕಲಿತುಬಿಟ್ಟಿದ್ದ. ಆತ ಬಸವರಾಜ ಪಾಟೀಲ್ ಅನ್ವರಿ ಎಂಬ ಊಸರವಳ್ಳಿ! ಈತ ಕಾಂಗ್ರೆಸ್, ಜನತಾಪಕ್ಷ, ಜನತಾದಳ, ಬಿಜೆಪಿ ಎಂದು ಮನೆಮನೆ ತಿರುಗಿ ಮತ್ತೆ ಹಳೇಮನೆ ಕಾಂಗ್ರೆಸ್‌ನಲ್ಲಿ ಝಂಡಾ ಊರಿದ್ದಾನೆ. ಈತನೂ ಗಾಡ್‌ಮದರ್ ಬಸವರಾಜೇಶ್ವರಿಯಂತೆ ಲಿಂಗಸೂರು, ಮಾನ್ವಿ ಎರಡೂ ಕ್ಷೇತ್ರಗಳನ್ನು ಆಳಿ ಬಿಟ್ಟಿದ್ದಾನೆ. ಹೆಗಡೆ ಸರಕಾರದಲ್ಲಿ ಸಚಿವಗಿರಿ ಸವಿದ ಅನ್ವರಿ, 1989ರಲ್ಲಿ ಕೊಪ್ಪಳ ಎಂ.ಪಿ. ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಎಚ್.ಜಿ. ರಾಮುಲುವನ್ನು ಕೆಳಕ್ಕೆ ಒಗೆದು ಸಂಸತ್‌ಗೂ ಎಂಟ್ರಿ ಹಾಕಿದ್ದ. ವಿ.ಪಿ.ಸಿಂಗ್ ನೇತೃತ್ವದ ಸರ್ಕಾರದಲ್ಲಿ ಉಕ್ಕು ಮತ್ತು ಗಣಿ ಖಾತೆ ರಾಜ್ಯ ಸಚಿವನಾಗಿ ಉಕ್ಕನ್ನು ತಿಂದು ಅರಗಿಸಿಕೊಂಡು 'ಉಕ್ಕಿನ ಮನುಷ್ಯ'ನಾಗಿ ಹೋದ. 1991ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಗೆ ಹಾರಿ ಬಂದು, ಕೊಪ್ಪಳಕ್ಕೆ ವಲಸೆ ಬಂದಿದ್ದ ಸಿದ್ಧರಾಮಯ್ಯರಿಗೆ ಸೋಲಿನ ರುಚಿ ತೋರಿಸಿದ್ದ.



ಪಕ್ಷ, ಕ್ಷೇತ್ರ ಬದಲಿಸುತ್ತಾ ಗೆಲ್ಲುತ್ತಲೇ ಬಂದಿದ್ದ ಅನ್ವರಿಗೆ ಮೊದಲು ಪೆಟ್ಟು ನೀಡಿದ್ದು ಮತ್ತದೇ ಲಿಂಗಾಯತ ರೆಡ್ಡಿ ಸಮೂಹದ ದಳವಾಯಿ ಬಸವರಾಜ ರಾಯರೆಡ್ಡಿ. ರಾಯಚೂರು ಜಿಲ್ಲೆ ವಿಭಜನೆಯಾದಾಗ ಕೊಪ್ಪಳ ಮರೆತು ಇಲ್ಲೇ ಸೆಟ್ಲ್ ಆದ ಅನ್ವರಿ 1999, 2004ರ ಚುನಾವಣೆಗಳಲ್ಲಿ ಕ್ಲೀನ್ ಆಗಿ ಲಗಾಟ ಹೊಡೆದ.

ಈ ಲಿಂಗಸೂರು ಕ್ಷೇತ್ರದಿಂದಲೇ ಆಯ್ಕೆಯಾಗಿದ್ದ ಲಿಂಗವಂತ ಸಿ.ಎಸ್. ಪಾಟೀಲ್ ರಾಜ್ಯ ಅರಣ್ಯ ಸಚಿವಗಿರಿ ಪಡೆದಿದ್ದ. ಇದೇ ಲಿಂಗಸೂರು ತಾಲ್ಲೂಕಿನ ಎಂ.ಎಸ್. ಪಾಟೀಲ್ ಎಂಬ ಲಿಂಗವಂತ 85ರಲ್ಲಿ ಕುಷ್ಟಗಿ ಹಾಗೂ 89, 94ರಲ್ಲಿ ರಾಯಚೂರು ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದು ಹ್ಯಾಟ್ರಿಕ್ ಸಾಧಿಸಿದ ಭೂಪ.

ಈಗ ಲಿಂಗಸೂರಲ್ಲಿ 3 ಅವಧಿಯಿಂದ ಪಾಳೆಗಾರಿಕೆ ನಡೆಸುತ್ತಿರುವ ಮಾಜಿ ಸಚಿವ ಅಮರೇಗೌಡ ಬಯ್ಯಾಪುರ. 2ನೇ ಕಂತಿನಲ್ಲಿ ಮತ್ತೆ ಮಂತ್ರಿಗಿರಿ ಸಿಗಬಹುದೆಂದು ಕಾದು ಕೂತಿದ್ದಾನೆ. ಈ ಕ್ಷೇತ್ರದಲ್ಲಿ ಭಾವಮೈದುನರಾ... ಕಾಂಗ್ರೆಸ್‌ನ ಅಮರಪ್ಪ ನಾಯಕ ಮತ್ತು ರಾಜಾ ಅಮರೇಶ್ವ... ನಾಯಕರ ಜಿದ್ದಾಜಿದ್ದಿಯಿಂದಾ... ಲಿಂಗಾಯತ ಬಯ್ಯಾಪುರನಿ... ಲಾಭವಾಗುತ್ತಿದೆ. ಇವರಿಬ್ಬರ ಮಧ್ಯ... ಭಿನ್ನಾಭಿಪ್ರಾಯ ಬಗೆಹರಿದ... ಲಿಂಗಸೂರಲ್ಲಿ ಲಿಂಗಾಯತರ ಪ್ರಾಬಲ... ಪೆಟ್ಟು ಕೊಡಬಹುದೇನೋ?

ಉಳಿದೆಡೆ ಫಾರ್ವರ್ಡ್‌ರ V/s ಬ್ಯಾಕ್‌ವರ್ಡ್?

ಉಳಿದ ತಾಲ್ಲೂಕುಗಳಲ್ಲಿ ಮೊ... ಲಿಗೆ ಲಿಂಗಾಯತರ ಪ್ರಾಬಲ್ಯವೇ ಇ... ದರೂ ಇತ್ತೀಚೆಗೆ ಅದು ಫಾರ್ವರ್ಡ್... Vs ಬ್ಯಾಕ್‌ವರ್ಡ್ ಎಂಬ ಸ್ಪರ್ಧೆ... ಬಂದು ನಿಂತಿದೆ. ಜಾತಿ ರಾಜಕೀಯ... ಕುಖ್ಯಾತಿ ಪಡೆದಿರುವ ಸಿಂಧನೂರು ಕ್ಷೇತ್ರದಲ್ಲಿ 60... 70ರ ದಶಕದಲ್ಲಿ ಕಾಂಗ್ರೆಸ್‌ನ ಬಸವಂತ್ರಾಯ್ ಪಾಟೀಲ... ಕಮ್ಯುನಿಸ್ಟ್ ಅಮರೇಗೌಡ ಗದ್ರಟಗಿಯಂತವರ... ನಿರಾತಂಕವಾಗಿ ಶಾಸಕರಾಗುತ್ತಿದ್ದರು. ನಂತರ ಈಡಿ... ಜನಾಂಗದ ಆರ್.ನಾರಾಯಣಪ್ಪ ಎರಡು ಬಾ... ಶಾಸಕರಾಗಿದ್ದರು.

ಇತ್ತೀಚಿನ ವರ್ಷಗಳಲ್ಲಿ ಸಿಂಧನೂರು ಕ್ಷೇತ್ರವ... ಜಾತಿ ಸಂಘರ್ಷದ ಕೇಂದ್ರವನ್ನಾಗಿ ಮಾಡಿ, ಅಭಿವೃದ್ಧಿ... ಸಲಾಮು ಹೇಳಿದ ಕೀರ್ತಿ ಕುರುಬರ ಕುಲಘಾತಕ ವಿರೂಪಾಕ್ಷಪ್ಪ ಹಾಗೂ ಲಿಂಗಾಯತ ರೆಡ್ಡಿ ಪಾಳೆಗಾ... ಹಂಪನಗೌಡ ಬಾದರ್ಲಿಗಳಿಗೆ ಸಲ್ಲಬೇಕು. ಈ ಇಬ್ಬರ... ಈಗ ಕಾಂಗ್ರೆನಲ್ಲೇ ಇದ್ದಾರೆ. ಸಿಂಧನೂರಲ್ಲಿ ಹಂಪನಗೌ... ಗೆದ್ದಿದ್ದರೂ ಕುರುಬರು, ದಲಿತರು ಮುಂದಿನ ಸಾ... ಗೌಡನನ್ನು ಮನೆಗೆ ಕಳಿಸಲಿದ್ದಾರೆ.


ಮಾನ್ವಿ: ಲಿಂಗಾಯತರು V/s ಹಿಂದುಳಿದವರು

ಇಲ್ಲಿ 70ರ ದಶಕದಿಂದಲೂ ಲಿಂಗಾಯತರಿಗೆ ಸೆಡ... ಹೊಡೆಯುತ್ತಲೇ ಬಂದಿದ್ದಾರೆ ಹಿಂದುಳಿದವರು. ಮೊದಲ... ಕಾಂಗ್ರೆಸ್‌ನ ಅಂಬಣ್ಣ ನಾಯಕ ಮತ್ತು ಜನತಾಪಕ್ಷ...

ಚಿತ್ರದುರ್ಗ

ಸಂಜೀವಮೂರ್ತಿಗೆ ಚುರುಕ್

ಎಲ್ಲೂ ಸಲ್ಲದವರು ರಾಜಕೀಯದಲ್ಲಿ ಸಲ್ಲುತ್ತಾರೆ ಎಂಬ ಮಾತು ಚಳ್ಳಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜೀವ ಮೂರ್ತಿಯಂತವರಿಂದಾಗಿಯೇ ಹುಟ್ಟಿಕೊಂಡಿರಬೇಕು. ಒಂದೂವರೆ ದಶಕದಷ್ಟು ಕಾಲ ಕಾಂಗ್ರೆಸ್‌ನಲ್ಲಿದ್ದು ಸಕಲೆಂಟು ರಾಜಕೀಯ ಸ್ಥಾನಮಾನಗಳನ್ನನುಭವಿಸಿ ತನ್ನ ವಿಧ್ವಂಸಕ ಗುಣ, ಅಧಿಕಾರ ಲಾಲಸೆಯ ಧೋರಣೆಗಳಿಂದಾಗಿ ಕುಖ್ಯಾತಿ ಪಡೆದವ. ಕಾಂಗ್ರೆಸ್ಸಿಗರಿಂದ ಬಹುತೇಕ ಕಡೆಗಣಿಸಲ್ಪಟ್ಟಿರುವ ಈತ ಇದೀಗ ಜನತಾದಳದ ಬಾಗಿಲಲ್ಲಿ ನಿಂತಿದ್ದಾನೆ. ಕಾಂಗ್ರೆಸ್ಸಿಗರಂತೂ ಈತ ತೊಲಗಿದರೆ ಸಾಕೆಂದು ಕಾಯುತ್ತಿದ್ದಾರೆ.



ಅಪ್ಪ ನಂಬಿಕಸ್ಥ ರಾಜಕಾರಣಿ

ಈ ಸಂಜೀವಮೂರ್ತಿ ಹಳೆ ತಲೆಮಾರಿನ ರಾಜಕಾರಣಿ ಚಿದಾನಂದಪ್ಪನವರ ಪುತ್ರರತ್ನ. ಚಿದಾನಂದಪ್ಪ ಬಿ.ಎಲ್. ಗೌಡರ ಬೆಂಬಲಿಗರಾಗಿದ್ದರು, ನಂಬಿಕಸ್ಥರಾಗಿದ್ದವರು. ಖಾದಿ ಬೋರ್ಡ್‌ನ ಅಧ್ಯಕ್ಷರೂ ಆಗಿದ್ದರು. ತಂದೆಯ ಇವೋಜಿನ ನೆರಳಲ್ಲೇ ಬೆಳೆದ ಸಂಜೀವಮೂರ್ತಿ ಮೀರಾಸಾಬಹಳ್ಳಿಯಲ್ಲಿ ಮಂಡಲ ಪ್ರಧಾನನಾಗುವುದರ ಮೂಲಕ ರಾಜಕೀಯ ಶುರುವಿಟ್ಟುಕೊಂಡನು. ಸ್ವಲ್ಪ ದಿನ ಬಿಜೆಪಿಯಲ್ಲಿದ್ದು 89-90 ರಲ್ಲಿ ಮುಖ್ಯಸಚೇತಕರಾಗಿದ್ದ ಎನ್. ಜಯಣ್ಣನವರ ಚುಂಗು ಹಿಡಿದು ಕಾಂಗ್ರೆಗೆ ವಕ್ಕರಿಸಿದ. ಪಕ್ಷದಲ್ಲೊಂದಿಷ್ಟು ಪ್ರಭಾವ ಬೆಳೆಸಿಕೊಂಡು 1999 ರ ಹೊತ್ತಿಗೆ ತನಗೆ ರಾಜಕೀಯ ಆಶ್ರಯ ನೀಡಿದ ಜಯಣ್ಣನವರ ಬುಡಕ್ಕೇ ಎಳ್ಳು ನೀರು ಬಿಡಲು ತಯಾರಾದ. ಪಕ್ಷದ ಯಾವ ಸಮಿತಿಗಳಿಂದಲೂ ಈತನ ಹೆಸರು ಶಿಫಾರಸ್ಸು ಆಗದಿದ್ದರೂ ಟಿಕೆಟ್‌ಗಾಗಿ ದೆಹಲಿಯವರೆಗೂ ಎಡತಾಕಿ ಬಂದ. ಆಗ ಪ್ರಭುದೇವ್ ಎಂಬಾತನಿಗೆ ಟಿಕೆಟ್ ಸಿಕ್ಕಿತು.

ಸಂಜೀವಮೂರ್ತಿ ಸುಮ್ಮನಾಗಲಿಲ್ಲ, ಮತ್ತೆ ಜಯಣ್ಣನವರ ಬಳಿ ಹೋಗಿ ಕಾಲು ಒತ್ತತೊಡಗಿದ. ಕ್ಷೇತ್ರದಲ್ಲಿ ನಿಮಗೆ ತುಂಬಾ ಪ್ರಭಾವವಿದೆ ಎಂದು ತಿವಿಯಲ್ಲಿ ಹೂ ಇಟ್ಟು ಜಯಣ್ಣ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವಂತೆ ಮಾಡಿದ. ಚುನಾವಣೆಯಲ್ಲಿ ಪ್ರಭುದೇವ್-ಜಯಣ್ಣ ಇಬ್ಬರೂ ಸೋತರು. ಆನಂತರ ಪಕ್ಷ ವಿರೋಧಿ ಚಟುವಟಿಕೆಯ ಆರೋಪದ ಮೇಲೆ ಅಮಾನತುಗೊಂಡಿದ್ದ ಸಂಜೀವಮೂರ್ತಿ ಸಂಸದ ಮೂಡಲಗಿರಿಯಪ್ಪನವರಿಗೆ ಮಸ್ಕಾ ಹೊಡೆದು ಬಚಾವಾದ. ಮತ್ತೆ ಪಕ್ಷದ ಸಾಂಸ್ಥಿಕ ಚುನಾವಣೆಗಳು ಬಂದವು. ಸಂಜೀವಮೂರ್ತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಗಿರಿಗೆ ರೆಡಿಯಾದ. ಪ್ರಭುದೇವ್ ಗುಂಪು ಇದನ್ನು ವಿರೋಧಿಸಿತು. ನೇರವಾಗಿ ಸುಧಾಕರ್ ಬಳಿ ಹೋಗಿ ಕೈಕಾಲು ಹಿಡಿದು, ಮೊಸಳೆ ಕಣ್ಣೀರು ಸುರಿಸಿ ಅವರಿಗೇ ನಿಷ್ಠನಾಗಿರುವುದಾಗಿ ಅಲವತ್ತುಕೊಂಡ. ಸುಧಾಕರ್‌ಗೆ ಈತನ ವಂಚಕ ಪ್ರವೃತ್ತಿಯ ಬಗ್ಗೆ ಕೆಲ ಮುಖಂಡರು ಮುನ್ಸೂಚನೆ ಕೊಟ್ಟರೂ ಪ್ರಯೋಜನವಾಗಲಿಲ್ಲ. ಸಂಜೀವಮೂರ್ತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿಯೇಬಿಟ್ಟ. ಆಗ ಸುಧಾಕರ್ ಕೆಪಿಸಿಸಿ ಮೆಂಬರಾದರು.

ಶುರುವಾಯಿತಲ್ಲ ವರಸೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುಧಾಕರ್ ಸ್ಪರ್ಧೆಗಿಳಿಯುತ್ತಿದ್ದಂತೆ ಈತನ ವರಸೆಯೇ ಬದಲಾಯಿತು. ಇದೀ ಚುನಾವಣೆಯ ರೂವಾರಿ ತಾನೇ ಎಂಬಂತೆ ಬಿಂಬಿಸಿಕೊಂಡ. ತಕ್ಕ ಮಟ್ಟಿಗೆ ಸಂಘಟನಾ ಚಾತುರ್ಯವನ್ನೂ ಪ್ರದರ್ಶಿಸಿದ. ಈ ನಡುವೆ ಬೆಂಗಳೂರಿನಲ್ಲಿ ಕೆಲ ಕಾರ್ಯಕರ್ತರು ಸಂಜೀವಮೂರ್ತಿ ವಿರುದ್ಧ ಗಲಾಟೆ ಮಾಡಿದ್ದನ್ನೇ ನೆಪವಾಗಿಟ್ಟುಕೊಂಡು 'ನಾನು ಚುನಾವಣೆ ಮಾಡುವುದಿಲ್ಲ' ಎಂದು ಬೆದರಿಕೆ ಹಾಕಿದ.

ಗೆಲುವೊಂದನ್ನೇ ಮುಖ್ಯವಾಗಿಸಿಕೊಂಡು ಚುನಾವಣೆಗಿಳಿದಿದ್ದ ಸುಧಾಕರ್ ಯಾರ ಶತ್ರುತ್ವವನ್ನೂ ಕಟ್ಟಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಸಂಜೀವಮೂರ್ತಿಯ ಮನವೊಲಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿದರು. ಇದನ್ನೆಲ್ಲ ಬಂಡವಾಳ ಮಾಡಿಕೊಂಡು ತಾನು ಹೇಳಿದ್ದಕ್ಕೆಲ್ಲಾ ಸುಧಾಕರ್ 'ಯೆಸ್' ಅನ್ನುವಂತಾ ಸನ್ನಿವೇಶ ನಿರ್ಮಿಸಿದ. ಲಿಕ್ಕರ್ ದಂಧೆಯಲ್ಲಿ ಬಂದ ಹಣ ಸುರಿಯುವುದು ಮಾತ್ರ ಗೊತ್ತಿದ್ದ ಸುಧಾಕರ್‌ಗೆ ತನ್ನದೇ ಚುನಾವಣೆಯನ್ನು ಹೇಗೆ ನಿರ್ವಹಿಸಬೇಕೆಂಬ ಅನುಭವ ಇರಲಿಲ್ಲ. ಸಂಜೀವಮೂರ್ತಿ ಹೇಳಿದವರಿಗೆಲ್ಲಾ ಕೇಳಿದಷ್ಟು ಹಣ ಕೊಟ್ಟು, ಅವನು ತಾನೇ ಕಿಂಗ್‌ಮೇಕರು, ಎಲ್ಲಾ ನನ್ನಿಂದಲೇ ನಡೆಯುತ್ತಿದೆ ಎಂಬಂತೆ ಎಲ್ಲೆಡೆ ಪೋಸು ಕೊಟ್ಟ. ಈತನ ಪ್ರಚಾರದ ಭರಾಟೆ ನೋಡಿ-ಪಕ್ಷದ ಕಾರ್ಯಕರ್ತರ ಸಭೆಯೊಂದರಲ್ಲಿ ರಾಜ್ಯಸಭೆಯ ಮಾಜಿ ಸದಸ್ಯ ಎಚ್. ಹನುಮಂತಪ್ಪ "ಹಣ ಸುರಿದು ವಿಷ ಬೆಳೆಸ್ತಿದಾರೆ ಸುಧಾಕರ್. ಹೆಸರೆಲ್ಲಾ ಸಂಜೀವಮೂರ್ತಿಗೆ ಹೋಗ್ತಿದೆ" ಎಂದು ಕೊಡವಿದರು. ಏನು ಕೊಡವಿದರೇನು ಸುಧಾಕರ್‌ಗೆ ಗೆಲುವೆಂಬುದು ದುಬಾರಿಯಾಗಿತ್ತು.

ಸ್ಥಾನಮಾನಗಳೆಲ್ಲಾ ನನಗಿರಲಿ

ಸುಧಾಕರ್ ಶಾಸಕರಾದ ನಂತರ ಈ ಸಂಜೀವ ಮೂರ್ತಿ ಸ್ಥಳೀಯ ಸಂಸ್ಥೆಗಳಲ್ಲಿ ತನಗೆ ಬೇಕಾದವರೆಲ್ಲರದೊಂದು ಪಟ್ಟಿಕೊಟ್ಟು ನಾಮನಿರ್ದೇಶನ ಮಾಡಿಸಿದ. ಇದರಿಂದ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಅಸಮಾಧಾನವಾಯಿತು. ಸಂಜೀವಮೂರ್ತಿಯ ಮಸಲತ್ತುಗಳ ಬಗ್ಗೆ ಸುಧಾಕರ್‌ಗೆ ಎಚ್ಚರಿಕೆಯನ್ನೂ ನೀಡಿದರು.

ಇಷ್ಟೊತ್ತಿಗಾಗಲೇ ಸಂಜೀವಮೂರ್ತಿ ಡಿಸಿಸಿ ಬ್ಯಾಂಕಿಗೆ, ರಾಜ್ಯ ಸಹಕಾರ ಸಂಘಗಳ ಒಕ್ಕೂಟಕ್ಕೆ ನಿರ್ದೇಶಕನಾಗಿ ನಾಮನಿರ್ದೇಶನಗೊಂಡಿದ್ದ. ತನ್ನ ಹೆಂಡತಿಯನ್ನು ಗ್ರಾಮ ಪಂಚಾಯ್ತಿ ಸದಸ್ಯೆಯನ್ನಾಗಿ ಮಾಡಿದ. ತಾನು ತಾಲ್ಲೂಕು ಸೊಸೈಟಿಗೂ ನಿರ್ದೇಶಕನಾದ. ಇಲ್ಲಿ ಅಧ್ಯಕ್ಷಗಿರಿ ಹೊಡೆದುಕೊಳ್ಳಲು ಆಮಾಯಕರನ್ನು ಕೋರ್ಟು ಹತ್ತಿಸಿ ಶಾಸಕರ ಮುಂದೆ ತಾನೇ ಅಧ್ಯಕ್ಷನಾಗಬೇಕೆಂಬ ಪ್ರಸ್ತಾಪ ಮುಂದಿಟ್ಟ. ಶಾಸಕ ಸುಧಾಕರ್ "ಈಗಾಗಲೇ ಬ್ಲಾಕ್ ಕಾಂಗ್ರೆ ಅಧ್ಯಕ್ಷಗಿರಿ, ಡಿಸಿಸಿ ಹಾಗೂ ರಾಜ್ಯ ಸಹಕಾರ ಸಂಘ, ಒಕ್ಕೂಟಗಳೆರಡರ ನಿರ್ದೇಶಕತ್ವ ಇದ್ದು ಸೊಸೈಟಿ... ಅಧ್ಯಕ್ಷನೂ ಆಗಬೇಕೆಂದರೆ ಜನ ಒಪ್ಪುವುದಿಲ್ಲ. ಒಬ್ಬರಿ... ಎಷ್ಟು ಪದವಿ ಕೊಡೋಕಾಗುತ್ತೆ" ಎಂದು ಅಪಸ್ವ... ಎತ್ತಿದರು. ಕುಂಬಾರ ಸಮುದಾಯದ ಜೋಗಣ್ಣನನ್ನು... ಅಧ್ಯಕ್ಷನನ್ನಾಗಿ ಮಾಡೋಣ ಎಂದರು. ಈ ಜೋಗ... ಸಂಜೀವಮೂರ್ತಿ ಯಶಸ್ಸಿ... ಮೆಟ್ಟಿಲಾಗಿ ಶ್ರಮಿಸಿದಾತ. ಆ ಕೃತಜ್ಞ... ಸಂಜೀವಮೂರ್ತಿಗಿರಲಿಲ್ಲವಾದ್ದರಿಂ... ಅದನ್ನು ಒಪ್ಪಲಿಲ್ಲ. ಕೊನೆಗೆ 'ಬ್ಲಾ... ಕಾಂಗ್ರೆ ಅಧ್ಯಕ್ಷಗಿರಿಗೆ ರಾಜೀನಾಮೆ ಕೊಡ್ತೀನಿ' ಎಂದ... ರೈಲು ಬಿಟ್ಟು ತಾಲ್ಲೂಕು ಸೊಸೈಟಿ ಅಧ್ಯಕ್ಷನಾದ. ನಂತ... ಬ್ಲಾಕ್ ಕಾಂಗ್ರೆಗೆ ರಾಜೀನಾಮೆ ಕೊಡದೆ ಸಬೂಬುಗಳನ್ನು... ಹೇಳುತ್ತಾ ಬಂದ.

ಶಾಸಕ ಸುಧಾಕರ್ ಜಾಗೃತರಾದರು. ಆನಂತರ ನಡೆ... ಜಿಲ್ಲಾ ಕಾಂಗ್ರೆ ಸಮಾವೇಶದ... ಸಂಜೀವಮೂರ್ತಿಯನ್ನು ಬದಿಗಿಡಲಾಯಿತು... ಜಿಲ್ಲಾ ಪಂಚಾಯ್ತಿ, ತಾಲ್ಲೂಕ್ ಪಂಚಾಯ... ಚುನಾವಣೆಗಳಲ್ಲೂ ಈತನಿಗೆ ಸೊಪ... ಹಾಕಲಿಲ್ಲ. ಸಂಜೀವ ಮೂರ್ತಿ... ಜನತಾದಳದವರೊಂದಿಗೆ ಒಳ ಒಪ್ಪಂ... ಮಾಡಿಕೊಂಡು ಕಾಂಗ್ರೆ ಅಭ್ಯರ್ಥಿ ಸೋಲುವಂ... ನೋಡಿಕೊಂಡ.

ಹೆಜ್ಜೆ ಇಟ್ಟಲ್ಲೆಲ್ಲಾ ವಿಧ್ವಂಸ

ತಂತ್ರಗಾರಿಕೆ, ಸಮಯಸಾಧಕತನ, ಎಂತವರನ್ನೂ ಬಲಿ... ಕೆಡಹುವ ನಾಜೂಕಿನ ಮಾತುಗಾರಿಕೆಗಳ... ಸಂಜೀವಮೂರ್ತಿಯ ಬಂಡವಾಳ. "ಅನುಕೂಲವಿದ್ದ... ನಿಷ್ಠೆ ಇಲ್ಲವಾದರೆ ವಿಶ್ವಾಸದ್ರೋಹ" ಎಂಬುದು ಈತ... ಧೋರಣೆ. ಈತ ಕಮಾಯಿ ವ್ಯವಹಾರದಲ್ಲೂ ಎತ್ತಿ... ಕೈ. ನಾಲ್ಕು ವರ್ಷಗಳ ಹಿಂದೆ ಬರ್ಬಾದಾಗಿ ಭದ್ರಾವ... ಯಲ್ಲಿದ್ದ ಈತನಿಗೆ ಮರುಜೀವ ನೀಡಿದ್ದೇ ಸುಧಾಕರ... ತೆರಿಗೆ ಇಲಾಖೆಯವರು ರೈಡು ಮಾಡಿದಾಗ ಇದ... ಸುಧಾಕರ್ ಬೆಂಬಲಕ್ಕೆ ನಿಂತು ಸ್ವತಃ ತಾವೇ ಜಾಮೀನ... ನೀಡಿದರು.

ಸಂಜೀವಮೂರ್ತಿಯ ಎಲ್ಲಾ ಬೆಳವಣಿಗೆಯ ಹಿಂದ... ಶಾಸಕ ಸುಧಾಕರ್ ಹಣ ಬೆಂಬಲದ ಊರುಗೋಲಿದ... ಎಲ್ಲೋ ಒಂದು ಕಡೆ ಈತ ಶಾಸಕ ಸುಧಾಕರ್‌ಗೆ ಮೋ... ಮಾಡಿಬಿಟ್ಟ ಅನಿಸಬಹುದು. ಅದು ನಿಜವೂ ಕೂಡ...

ಳಾಳೇ ರಾಜಶೇಖರಪ್ಪ ಮಧ್ಯೆ ಕೈಫೋಟು ಇರುತ್ತಿತ್ತು ವಲಸೆ ಬಂದವರಿಗೂ ಣೆ ಹಾಕುವುದರಲ್ಲಿ ಮಾಸ್ಟರಿಯದು ಎತ್ತಿದ ಕೈ. 1989ರಲ್ಲಿ ಕಾಂಗ್ರೆಸ್‌ನ ಮರುಳೇಶ್, ಪಕ್ಷೇತರ ಬ್ಯಾಗವಾಟ ಎಂಬ ಲಿಂಗಾಯತರ ಸ್ಪರ್ಧೆಯಲ್ಲಿ ಂದುಳಿದವರು ಬ್ಯಾಗವಾಟನಿಗೊಂದು ಚಾನ್ಸ್ ನೀಡಿದ್ದರು. 1994ರಲ್ಲಿ ತಿ ಮತ್ತುರದ ರಾಜಕೀಯದ ದಳವಾಯಿ ಹಿಂದುಳಿದ ವರ್ಗದ ಂಗಾಧರ ನಾಯಕ್ ಗೆದ್ದಿದ್ದ. ನಂತರ ಎರಡು ಬಾರಿ ಗೆದ್ದವರು ಈಗಿನ ಸಕ ಹಿಂದುಳಿದ ವರ್ಗದ ಬೋಸರಾಜ್.

ಕಲ್ಮಲಾ: ಹಿಂದುಳಿದವರು ಮುಂದೆ...

ಕಲ್ಮಲಾ ಕ್ಷೇತ್ರದಲ್ಲಿ 1983ರಲ್ಲಿ ಸುಧೀಂದ್ರರಾವ್ ಕಸಬೆ ಎಂಬ ಾಹ್ಮಣ ಶಾಸಕನಾಗಿ, ಮಂತ್ರಿಯೂ ಆಗಿಬಿಟ್ಟಿದ್ದ. ನಂತರ ಇಲ್ಲಿ ಂದುಳಿದವರದ್ದೇ ಪ್ರಾಬಲ್ಯ. ಮಾಜಿ ಸಚಿವ ಮುನಿಯಪ್ಪ ಮುದ್ದಪ್ಪ ಂಬ ನಿರುಪಯುಕ್ತ ಈಗ ಶಾಸಕನಾಗಿದ್ದಾನೆ. ಬಿಜೆಪಿಯ ಶಂಕರಗೌಡ ವಿ ಎಂಬ ಲಿಂಗವಂತ ಸತತ 4 ಸೋಲು ಪಡೆದ ನಾಚಿಕೆಗೇಡಿ ಎಂಬ ್ಯಾತಿ ಪಡೆದಿದ್ದಾನೆ. ರಾಯಚೂರು ತಾಲ್ಲೂಕಲ್ಲೂ ಅಷ್ಟೇ. ಎಂ. ನಾಗಪ್ಪ ಎಸ್. ಪಾಟೀಲ ಬಿಟ್ಟರೆ ಗೆದ್ದವರೆಲ್ಲ ಅಲ್ಪಸಂಖ್ಯಾತ, ಹಿಂದುಳಿದ ರ್ಗದವರೇ. ಈಗ ಬಿಜೆಪಿಯ ಪಾಪಾರೆಡ್ಡಿ ಎಂಬ ಪಾಪಿ ಗೆದ್ದಿದೆ.

ಮೀಸಲು ದೇವದುರ್ಗದ ಕತೆ

60ರ ದಶಕದಿಂದಲೂ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾಗಿರುವ ೇವದುರ್ಗದಲ್ಲಿ, ಅದಕ್ಕೂ ಮೊದಲು ಸದಾಶಿವಪ್ಪ ಪಾಟೀಲ ಎಂಬ ಂಗಾಯತ ಶಾಸಕರಾಗಿದ್ದರು. ಬಿ.ಟಿ. ಲಲಿತಾನಾಯಕ್ ಇಲ್ಲಿಂದ ಗೆದ್ದು ಂತ್ರಿಯೂ ಆಗಿದ್ದರು. ಈಗ ಹಿಂದುಳಿದ ವರ್ಗದ ಶಾಸಕ ಹನುಮಂತಪ್ಪ ಲ್ಕೋಡ್ ಮಂತ್ರಿ ಆಗಿದ್ದಾನೆ. ದೇವದುರ್ಗ ಮಾತ್ರ ರಾಜ್ಯದ ಅತಿ ಂದುಳಿದ ತಾಲ್ಲೂಕುಗಳ ಪಟ್ಟಿಯಿಂದ ಹೊರಬರುವಂತೆ ಕಾಣುತ್ತಿಲ್ಲ.

ರಾಯಚೂರು ಎಂ.ಪಿ.ಕ್ಷೇತ್ರದಲ್ಲಿ ನಿರಂತರವಾಗಿ ಹಿಂದುಳಿದವರು ಯ್ಯೆಯಾಗುತ್ತಲೇ ಬಂದಿದ್ದಾರೆ. 1989ರಿಂದ ನಿರಂತರವಾಗಿ ವಾಲ್ಮೀಕಿ ಾಯಕ) ಜನಾಂದವರೇ ಎಂ.ಪಿ.ಯಾಗುತ್ತಾ ಲಿಂಗಾಯತರ ಪ್ರಾಬಲ್ಯಕ್ಕೆ ಟ್ಟು ನೀಡಲಾಗಿದೆ.

ಅಭಿವೃದ್ಧಿ ಮಾತ್ರ ಶೂನ್ಯ!

ಜಾತಿ ರಾಜಕೀಯದಲ್ಲೇನೋ ಲಿಂಗಾಯತ ರಾಜಕಾರಣಿಗಳಿಗೆ ಂದುಳಿದವರು ಚಾಲೆಂಜ್ ಮಾಡಿ ಮುನ್ನುಗ್ಗುತ್ತಿದ್ದಾರೆ ನಿಜ. ಆದರೆ ರಡೂ ಕಡೆಯ ರಾಜಕಾರಣಿಗಳ ಕಾರ್ಯಶೈಲಿಯಲ್ಲಿ ಅಂತಹಾ ವ್ಯತ್ಯಾಸ ೇನೂ ಇಲ್ಲ. ಅದೇ ಕಾರಣಕ್ಕೆ ರಾಯಚೂರು ಹಿಂದುಳಿಯುತ್ತಲೇ ಇದೆ. ಾಜಕೀಯದಲ್ಲಿ ಏನಾದರೇನು? ಹಳ್ಳಿಗಳಲ್ಲಿ ಇವತ್ತಿಗೂ ಲಿಂಗಾಯತ ದ್ದಿಗಳ ಪಾಳೇಗಾರಿಕೆ ಮುಂದುವರಿದೇ ಇದೆ.

ಆ ಕಾರಣಕ್ಕೇ ಇಲ್ಲಿ ಶಿವಲಿಂಗ, ಹಾಜಿಮಾರು ಹುಟ್ಟುತ್ತಿರುವುದಾ? ಂಘರ್ಷವಂತೂ ಶುರುವಾಗಿದೆ! ಅದು ರಾಜಕಾರಣವನ್ನು ಮೀರಿದ ಂಘರ್ಷದಂತಿದೆ.....

–ಅಶೋಕ್ ನೀಮಕರ್

ದರೆ ಲಿಕ್ಕರ್ ದೊರೆಯಾಗಿರುವ ಸುಧಾಕರ್ ತಮ್ಮ ರಾಜಕೀಯ ವೃತ್ತಿ ೀವನದ ಯಶಸ್ಸಿಗಾಗಿ ಎಂತೆಂಥಾ ಅಪಾತ್ರರನ್ನೆಲ್ಲಾ ಬೆಳೆಸಿ, ಪೋಷಿಸಿದರು ಂಬುದಕ್ಕೂ ಇದು ನಿದರ್ಶನವಾಗಿದೆ.

ಇಂತಿಪ್ಪ ಸಂಜೀವ ಮೂರ್ತಿಯ ಲೇಟೆಸ್ಟ್ ಸುದ್ದಿಯೆಂದರೆ ಈತ ಧ್ಯಕ್ಷನಾಗಿದ್ದ ಟಿಎಪಿಸಿಎಂಎಸ್‌ನಿಯಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ಡೆದಿದ್ದು.

ಈ ಕಾರಣಕ್ಕೆ ಈತನನ್ನು ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನದಿಂದ ನರ್ಹಗೊಳಿಸಿ ಕಳೆದ ತಿಂಗಳ 16 ರಂದು ಜಿಲ್ಲಾ ಸಹಕಾರ ಸಂಘಗಳ ಪನಿಬಂಧಕರು ಆದೇಶ ಹೊರಡಿಸಿದ್ದಾರೆ. 8.50 ಲಕ್ಷ ಅಂದಾಜು ೊತ್ತದ ವಾಣಿಜ್ಯ ಸಂಕೀರ್ಣವನ್ನು 13.03 ಲಕ್ಷ ಅಧಿಕ ವೆಚ್ಚದಲ್ಲಿ ರ್ಮಿಸಿರುವುದು, ಇದರ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ಡೆಯುವ ಮುನ್ನವೇ ಕಟ್ಟಡ ನಿರ್ಮಾಣ ಪ್ರಕ್ರಿಯೆ ಪ್ರಾರಂಭಿಸಿ ಹಣ ಳಕೆ ಮಾಡಿಕೊಂಡಿರುವುದು, ನಿರ್ಮಾಣದಲ್ಲಿ ಉಪಸಮಿತಿಯನ್ನು ಕಡೆಗಣಿಸಿರುವುದು, ಆಡಳಿತ ಮಂಡಳಿಯಲ್ಲಿ ಖಾಲಿಯಿದ್ದ ನಿರ್ದೇಶಕ ಸ್ಥಾನಗಳಿಗೆ ಸಹಕಾರ ನಿಯಮಾವಳಿಗೆ ವಿರುದ್ಧವಾಗಿ ಕೋ-ಆಪ್ ಮಾಡಿಕೊಂಡಿರುವುದು, ಸಂಘವು ಹೊಂದಿರುವಂತ ಮಿಷನರಿಗಳ ಮಾರಾಟ, ಹೊಸ ಯಂತ್ರಗಳ ಖರೀದಿ; ಅವಳಡಿಕೆ ಮಾಡುವಾಗ ಆಡಳಿತಾತ್ಮಕ ಮಂಜೂರಾತಿ ಪಡೆಯದೇ ವ್ಯವಹರಿಸಿರು ವುದು.... ಇವೆಲ್ಲಾ ಈತನ ಮೇಲೆ ಇರುವ ಆರೋಪಗಳು.

ಸಂಜೀವಮೂರ್ತಿ ತಾನೇ ಮುಖ್ಯ ಪ್ರವರ್ತಕನಾಗಿರುವ ಹರ್ಷ ಪತ್ತಿನ ಸಹಕಾರ ಸಂಘಕ್ಕೆ ಬೇನಾಮಿ ಹೆಸರಿನಲ್ಲಿ ಸಂಘದ ಕಟ್ಟಡ ಬಾಡಿಗೆ ಪಡೆದು ಪಾವತಿಸದಿರುವುದು, ಸಂಘದ ಕಟ್ಟಡ, ಗೋಡೋನ್, ತಡೆಗೋಡೆ ನಿರ್ಮಾಣ, ಪೀಠೋಪಕರಣಗಳ ಖರೀದಿ, ಸ್ಪೇರ್ ಕೇಸ್ ಅಳವಡಿಕೆ ಇತ್ಯಾದಿಗಳಿಗೆ ಆಡಳಿತಾತ್ಮಕ ಅನುಮೋದನೆ ಇಲ್ಲದೇ ಅಧಿಕ ವೆಚ್ಚ ಮಾಡಿರುವುದು, ಲೆಕ್ಕ ಪರಿಶೋಧನೆ ಇಲಾಖೆಯಿಂದ ದೃಢೀಕರಿಸಿದ ದಸ್ತಾವೇಜುಗಳನ್ನು ಮರು ಹೊಂದಾಣಿಕೆ ಮಾಡಿರುವುದು ಸೇರಿದಂತೆ ಒಟ್ಟಾರೆ ಸಂಘದ ನಿಯಮಾವಳಿಗಳು ಹಾಗೂ ಸಂಘದ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸಿರುವ ಆರೋಪದ ಮೇಲೆ ಈತನನ್ನು ಅನರ್ಹಗೊಳಿಸ ಲಾಗಿದೆ. ಈ ಮುಖಭಂಗದಿಂದ ಪಾರಾಗಲು ಮಾಜಿ ಸಚಿವ ಶಿವಣ್ಣಸ್ವಾಮಿಯವರ ಬಳಿ ದುಂಬಾಲು ಬಿದ್ದು ಮುಖ್ಯಮಂತ್ರಿಯವರಿಂದ ಆದೇಶಕ್ಕೆ ತಡೆಯಾಜ್ಞೆ ತಂದಿದ್ದಾನೆನ್ನಲಾಗಿದೆ. ಹೇಗೂ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ಎಸ್.ಟಿ.ಗೆ ಮೀಸಲಾಗುವುದರಿಂದ ತನಗೆ ದೊಡ್ಡಮಟ್ಟದ ರಾಜಕೀಯ ಭವಿಷ್ಯವೇನೂ ಇಲ್ಲ, ಮಾಜಿ ಮಂತ್ರಿ ತಿಪ್ಪೇಸ್ವಾಮಿ ಮತ್ತೆ ರಾಜಕೀಯವಾಗಿ ಪ್ರಬಲರಾಗುತ್ತಾರೆ. ಅವರ ನೆರಳಲ್ಲೇ ಅಧಿಕಾರ ಪಡೆಯುವ ಕನಸು ಕಾಣುತ್ತಿದ್ದಾನೆ. ಈಗ ಸಂಜೀವಮೂರ್ತಿ ಬೇಲಿಯ ಮೇಲೆ ಕುಂತಿದ್ದಾನೆ. ಜಿಗಿಯುವುದು ಬಾಕಿಯಿದೆ.

–ಮೋಸಾ. ಅಹೋಬಳಪತಿ

ಹೆದ್ದಾರಿ ನುಂಗತೊಡಗಿದ ಮಠಾಧೀಶರು!



ಆಕ್ರಮಣಕಾರಿ ಚರಿತ್ರೆ ಹೊಂದಿರುವ ಉಡುಪಿ ಮತ್ತೆ ಆಕ್ರಮಣಕ್ಕೆ ತುತ್ತಾಗಿದೆ. ಶತಮಾನಗಳ ಹಿಂದೆ ಆದಿ ಶಂಕರಾಚಾರ್ಯರು ಆರಂಭಿಸಿದ ಆಕ್ರಮಣಕಾರಿ ಕುಕೃತ್ಯಗಳ ಸರಣಿಯನ್ನು ಮಧ್ವಾಚಾರ್ಯ-ವಾದಿರಾಜರ ಪಳೆಯುಳಿಕೆಗಳಾದ ಅಷ್ಟ ಮಠಾಧೀಶರು ಮುಂದುವರಿಸಿದ್ದಾರೆ.

ಮೂರು ಕೋಟಿ ರೂಪಾಯಿಗಳ ವಜ್ರ ಕವಚ ಸಮರ್ಪಣೆಯಂತಹ ಹೊಸ ಹೊಸ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿಗಳನ್ನು ತಿಂದು ತೇಗಿ ಕೊಬ್ಬಿರುವ ಇಲ್ಲಿನ ಸರ್ವಸಂಗ ಪರಿತ್ಯಾಗಿಗಳು ಎಲ್ಲ ರೀತಿಯ ಮಜಾ ಉಡಾಯಿಸುತ್ತಿದ್ದಾರೆ. ಕೃಷ್ಣನೇ ಈ ಮಠಾಧೀಶರನ್ನು ಕೈ ಬಿಟ್ಟನೋ, ಮಠಾಧೀಶರೇ ಕೃಷ್ಣನನ್ನು ಮರೆತರೋ ಅಂತೂ ಇಲ್ಲಿನ ಹಲವು ಸ್ವಾಮೀಜಿಗಳು ಪಿಸ್ತೂಲ್‌ಗಳನ್ನಿಟ್ಟುಕೊಂಡು ಮಾಡಬಾರದ್ದನೆಲ್ಲ ಯಾವುದೇ ಮುಲಾಜಿಲ್ಲದೆ ಮಾಡುತ್ತಿದ್ದಾರೆ.


ಉಡುಪಿ

ಉಡುಪಿಯ ಜಿಲ್ಲಾಧಿಕಾರಿ, ಎಸ್.ಪಿ, ತಹಶೀಲ್ದಾರ್, ನಗರ ಸಭೆಯ ಆಡಳಿತಗಾರರು, ಸಚಿವರು, ಶಾಸಕರು ಅಷ್ಟ ಮಠಾಧೀಶರ ಸರ್ವ ರೀತಿಯ ಅನ್ಯಾಯ-ಅಕ್ರಮಗಳಿಗೆ ರಕ್ಷಣೆ ನೀಡುತ್ತಾ ಬಂದಿದ್ದಾರೆ. ಇಲ್ಲಿ ಲಾಗಾಯ್ತಿನಿಂದಲೂ ನಡೆದುಕೊಂಡು ಬಂದಿರುವ ಸಾಮಾನ್ಯ ಜನರ ಮೇಲಿನ ಶೋಷಣೆ, ದೌರ್ಜನ್ಯ ಆಕ್ರಮಣಕಾರಿ ಕುಕೃತ್ಯಗಳು ಅಡೆತಡೆಯಿಲ್ಲದೆ ಮುಂದುವರಿಯಲು ಇದೇ ಮೂಲ ಕಾರಣವಾಗಿದೆ.

ರಾಜ್ಯ ಹೆದ್ದಾರಿ ಗುಳುಂ

ಮದನಂತೇಶ್ವರ ದೇವಸ್ಥಾನ (ಅನಂತನಾಥ ಬಸದಿ) ಮತ್ತು ಚಂದ್ರಮೌಳೇಶ್ವರ ದೇವಸ್ಥಾನ (ಚಂದ್ರನಾಥ ಬಸದಿ)ಗಳನ್ನು ಸುತ್ತುವರಿದಿರುವ ಸಾರ್ವಜನಿಕ ರಸ್ತೆ ರಥ ಬೀದಿಯೆಂಬ ಪ್ರಚಾರಕ್ಕೆ ಬಂದಿದೆ. 'ನಾಲ್ಕು ವೀಥಿ' ಎಂದೂ ಕರೆಯಲ್ಪಡುವ ಸಾರ್ವಜನಿಕರ ಸೊತ್ತಾಗಿರುವ ರಾಜ್ಯ ಹೆದ್ದಾರಿಯನ್ನು ತಮ್ಮ ಅಧಿಪತ್ಯಕ್ಕೆ ಒಳಪಡಿಸಿಕೊಳ್ಳಲು ಅಷ್ಟ ಮಠಾಧೀಶರು ಷಡ್ಯಂತ್ರ ಹೆಣೆದಿರುವುದೇ ಸದ್ಯದ ವಿವಾದ.


ರಥ ಬೀದಿ ಎಂದೂ, ನಾಲ್ಕು ವೀಥಿ ಎಂದೂ ಕರೆಯಲ್ಪಡುವ ಸಾರ್ವಜನಿಕ ಪ್ರದೇಶ ಇಡೀ ಉಡುಪಿಯ ಜೀವನಾಡಿ. ನೂರಾರು ವ್ಯಾಪಾರಿಗಳ, ಉದ್ಯಮಗಳ, ವಾಹನ ಚಾಲಕರ ಜೀವನಾಧಾರ ವಾಗಿರುವ ಸ್ಥಳ.



ಸರಕಾರದ ದಾಖಲೆಗಳ ಪ್ರಕಾರ ಸುಬ್ರಹ್ಮಣ್ಯ ಮತ್ತು ಕೊಲ್ಲೂರುಗಳನ್ನು ಜೋಡಿಸುವ ರಾಜ್ಯ ಹೆದ್ದಾರಿಯಲ್ಲಿ ರಥ ಬೀದಿ ಇದೆ. ತೆಂಕು ಪೇಟೆ ಮತ್ತು ಬಡಗು ಪೇಟೆಗಳ ಮೂಲಕ ಹಾದು ಹೋಗುವ ಈ ಹೆದ್ದಾರಿ ರಥ ಬೀದಿಯ ಪಶ್ಚಿಮ ಪಾರ್ಶ್ವದ ಮೂಲಕ ಹಾದು ಹೋಗುತ್ತದೆ. ಅದೇ ರೀತಿ ತೆಂಕು ಪೇಟೆ ಮತ್ತು ಬಡಗು ಪೇಟೆಗಳನ್ನು ರಥ ಬೀದಿಯ ಪೂರ್ವ ಪಾರ್ಶ್ವದ ಮುನಿಸಿಪಲ್ ರಸ್ತೆ ಕೂಡಾ ಜೋಡಿಸುತ್ತದೆ. ಈ ಮುನಿಸಿಪಲ್ ರಸ್ತೆ ರಥ ಬೀದಿಯ ಪೂರ್ವಾರ್ಧದಲ್ಲಿರುವ ಕೃಷ್ಣ ದೇವಾಲಯದ ಮುಖ್ಯ ಪ್ರವೇಶ ದ್ವಾರದ ಮುಂಭಾಗದಿಂದ ಹಾದು ಹೋಗುತ್ತದೆ.

ದೀರ್ಘ ವೃತ್ತಾಕಾರದಿಂದ ಕೂಡಿರುವ ರಥ ಬೀದಿಗೆ ಪಶ್ಚಿಮ ಪಾರ್ಶ್ವದಲ್ಲಿ ಕನಕದಾಸ ಮಾರ್ಗ (ಪಡುಪೇಟೆ)ವೆಂಬ ಮುನಿಸಿಪಲ್ ಹೆದ್ದಾರಿ ಸೇರಿಕೊಳ್ಳುತ್ತದೆ. ಆಗ್ನೇಯ ದಿಕ್ಕಿನಲ್ಲಿ ವಾದಿರಾಜ ಮಾರ್ಗವೆಂಬ ಮುನಿಸಿಪಲ್ ರಸ್ತೆ ನೈರುತ್ಯ ದಿಕ್ಕಿನಲ್ಲಿ ಬಹುಜನೋಪಯೋಗಿಯಾದ ಓಣಿಯೊಂದು ಸಹ ರಥ ಬೀದಿಗೆ ಬಂದು ಸೇರಿಕೊಳ್ಳುತ್ತದೆ.

ಕಳೆದ ಏಳು ದಶಕಗಳಿಂದ ರಾಜ್ಯದ ಮತ್ತು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವಾಗಿ ರೂಪುಗೊಂಡಿರುವ ರಥ ಬೀದಿ ಸುತ್ತಮುತ್ತ ಅಷ್ಟ ಮಠಗಳು, ಕೃಷ್ಣ ದೇವಾಲಯ, ಮದನಂತೇಶ್ವರ-ಚಂದ್ರಮೌಳೇಶ್ವರ ದೇವಾಲಯಗಳು, ರಾಘವೇಂದ್ರ ಮಠ, ಸಾರ್ವಜನಿಕ ಕಲ್ಯಾಣ ಮಂಟಪಗಳು, ಸಭಾಗೃಹಗಳು, ಅತಿಥಿಗೃಹಗಳು, ರಾಷ್ಟ್ರೀಕೃತ, ಖಾಸಗಿ ಮತ್ತು ಸರಕಾರಿ ಬ್ಯಾಂಕ್‌ಗಳ ಕಚೇರಿಗಳು, ಅಂಚೆ ಕಚೇರಿ, ಚಿಕಿತ್ಸಾಲಯಗಳು, ಔಷಧಾಲಯಗಳು, ಹೋಟೆಲುಗಳು, ವಾಣಿಜ್ಯ ಸಂಸ್ಥೆಗಳು ಹಾಗೂ ವಾಣಿಜ್ಯ ಸಂಕೀರ್ಣಗಳಿವೆ.



ಇಂತಹ ರಥ ಬೀದಿಗೆ ರಥ ಬೀದಿಯನ್ನೇ ಇಡಿಯಾಗಿ ಒಳಗೆ ಹಾಕಲು ಹೊರಟಿದ್ದಾರೆ ಅಷ್ಟ ಮಠಾಧೀಶರು. ಇವರ ಬೇಕು ಬೇಡಗಳಿಗೆ ಸ್ಪಂದಿಸುತ್ತಿದ್ದಾರೆ ಡಿಸಿ, ಎಸ್‌ಪಿ ಸಾಹೇಬರು.

ಬಾಂಬ್ ಭಯವಂತೆ!

ದೇವರ ಹೆಸರಿನಲ್ಲಿ, ಪಾಪ-ಪುಣ್ಯದ ಲೆಕ್ಕಾಚಾರದಲ್ಲಿ, ಸೇವೆಗಳ ರೂಪದಲ್ಲಿ ಅಷ್ಟ ಮಠಾಧೀಶರು ಹಾಗೂ ಅವರ ಹಿಂಬಾಲಕರು ನಡೆಸುವ ಧಾರ್ಮಿಕ ಬಿಸಿನೆಸ್‌ನಲ್ಲಿ ಮಾಡುವ ಆಸ್ತಿ ಸಂಪತ್ತು ಅಪಾರ. ಈ ಸಾಲಿಗೆ ಈಗ ಸೇರಿರುವುದೇ ಅಮೂಲ್ಯ ಸಾರ್ವಜನಿಕ ಪ್ರದೇಶವಾದ ರಥ ಬೀದಿ ಎಂಬ ರಾಜ್ಯ ಹೆದ್ದಾರಿಯನ್ನು ನುಂಗುವ ಸಂಚು.

ಕೃಷ್ಣ ದೇವಾಲಯವಿರುವುದೇ ಮದನಂತೇಶ್ವರ ದೇವಾಲಯಕ್ಕೆ ಸೇರಿದ ಸ್ಥಳದಲ್ಲಿ. ಕೃಷ್ಣ ದೇವಾಲಯಕ್ಕೆ ಸೇರಿದ ರಥ ಕೃಷ್ಣ ದೇವಾಲಯಕ್ಕೆ ಸುತ್ತು ಹಾಕುವ ಬದಲು ಇಂದಿಗೂ ಸುತ್ತು ಹಾಕುವುದು ರಥ ಬೀದಿಯ ಮೂಲಕ ಮದನಂತೇಶ್ವರ ಮತ್ತು ಚಂದ್ರಮೌಳೇಶ್ವರ ದೇವಾಲಯಕ್ಕೆ ಎಂಬುದು ಕೃಷ್ಣ ದೇವಾಲಯದ ನಿರ್ಮಾಣದ ಹಿನ್ನೆಲೆಯನ್ನು ಬಯಲು ಪಡಿಸುತ್ತದೆ.

ಹೀಗೆ ಅಕ್ರಮಗಳನ್ನೆಸಗಿಯೇ ಭೂತದಂತೇ ಬೆಳೆದು ನಿಂತಿರುವ ಸನಾತನಿಗಳ ಪರವಾಗಿ ಡಿಸಿ, ಎಸ್‌ಪಿ ಮಹಾಶಯರು ಟೊಂಕಕಟ್ಟಿ ನಿಂತಿರುವುದು ಸೋಜಿಗದ ವಿಷಯ.

ಇದೀಗ ರಾಜ್ಯ ಹೆದ್ದಾರಿಯನ್ನೇ ನುಂಗಲು ಹೊರಟಿರುವ ಅಷ್ಟ ಮಠಾಧೀಶರು ಡಿಸಿ ಹಾಗೂ ಎಸ್ಪಿ ಸಾಹೇಬರ ಮುಂದಿಡುತ್ತಿರುವ ಬೇಡಿಕೆ ರಥ ಬೀದಿ ವಾಹನ ಮುಕ್ತವಾಗಬೇಕು ಮತ್ತು ವಾಣಿಜ್ಯ ಸಂಸ್ಥೆಗಳ ಸ್ಥಳಾಂತರವಾಗಬೇಕು ಎಂಬುದು. ಭಯೋತ್ಪಾದಕರ ಬೆದರಿಕೆ ಎನ್ನುವುದು ಇದಕ್ಕೊಂದು ಕುಂಟು ನೆಪ ಮಾತ್ರ.

ಉಡುಪಿಯಾದಿಯಾಗಿ ಹಾದು ಹೋದ ಕೊಂಕಣ ರೈಲ್ವೆಯಲ್ಲಿ ಶಂಕಿತ ಉಗ್ರಗಾಮಿಯೊಬ್ಬ ಸಂಚರಿಸಿ ಗೋವಾದಲ್ಲಿ ಪೋಲೀಸರ ಕೈಗೆ ಸಿಕ್ಕಿಬಿದ್ದುದ್ದೇ ಕೃಷ್ಣ ದೇವಾಲಯಕ್ಕೂ ಭಯೋತ್ಪಾದಕರ ಭೀತಿ ಇದೆ ಎಂದು ವದಂತಿ ಹುಟ್ಟಲು ಕಾರಣ.

ದೇವರ ಭಯವೊಂದನ್ನುಳಿದು ಬೇರೆಲ್ಲಾ ರೀತಿಯ ಭಯಗಳನ್ನೆದುರಿಸುತ್ತಿರುವ ಅಷ್ಟ ಮಠಾಧೀಶರ ಹೆದ್ದಾರಿ ನುಂಗುವ ಮಾಸ್ಟರ್ ಪ್ಲಾನ್‌ಗೆ ಹೌದಪ್ಪಗಳಾದವರು. ಭ್ರಷ್ಟಾತಿಭ್ರಷ್ಟ ಪ್ರಭಾರ ಜಿಲ್ಲಾಧಿಕಾರಿ ಶಾಂತಕುಮಾರ್, ಎಸ್‌ಪಿ ಮುರುಗನ್, ತಹಶೀಲ್ದಾರ್ ಮುರಳೀಧರ್ ಹಾಗೂ ಸ್ಥಳೀಯ ಸಚಿವ ಡಾ. ಪಿ.ಎಸ್. ಆಚಾರ್ಯರು.

ದಾಖಲಾದ ಪ್ರತಿಭಟನೆ

ಉಡುಪಿಗೆ ಬರುವ ಭಕ್ತಾದಿಗಳ ಕಣ್ಣಿಗೆ ಕೃಷ್ಣ ದೇಗುಲ ಮಾತ್ರ ಕಾಣಬೇಕು. ಮದನಂತೇಶ್ವರ ಹಾಗೂ ಚಂದ್ರಮೌಳೇಶ್ವರ ದೇಗುಲಗಳು ಕಾಣಬಾರದು. ಈ ತಂತ್ರಕ್ಕೆ ಅಷ್ಟ ಮಠಾಧೀಶರು ಉಳಿಸಿಕೊಂಡದ್ದು ಇದೇ ವ್ಯಾಪಾರಿಗಳನ್ನು. ಕಲ್ಸಂಕ ಎಂಬಲ್ಲಿದ್ದ ವ್ಯಾಪಾರಿಗಳನ್ನು ಸಹ ರಥ ಬೀದಿಗೆ ಬಂದು ವ್ಯಾಪಾರ ನಡೆಸುವಂತೆ ಆಹ್ವಾನಿಸುತ್ತಿದ್ದರು ಮಠಾಧೀಶರು. ಈ ಸರ್ವಸಂಗ ಪರಿತ್ಯಾಗಿಗಳ ಅಂದಿನ ಉದ್ದೇಶ ಮದನಂತೇಶ್ವರ-ಚಂದ್ರಮೌಳೀಶ್ವರ ದೇಗುಲಗಳನ್ನು ಭಕ್ತಾದಿಗಳ ಕಣ್ಣಿನಿಂದ ಮರೆಮಾಚುವುದಾಗಿತ್ತು. ಇಂದಿನ ಉದ್ದೇಶ ಸ್ಪಷ್ಟವಾಗಿದೆ. ಸಾರ್ವಜನಿಕರಿಗೆ ಸೇರಿದ ರಾಜ್ಯ ಹೆದ್ದಾರಿಯನ್ನು ಸಲೀಸಾಗಿ ನುಂಗುವುದು!

ಸ್ವಾಮಿಗಳ ದ್ವಂದ್ವ

ಕೃಷ್ಣ ದೇಗುಲ ಸಾರ್ವಜನಿಕ ಸ್ವತ್ತಾಗುವುದು ಇವರಿಗೆ ಬೇಕಾಗಿಲ್ಲ. ದೇಗುಲವನ್ನು ಮಠವೆನ್ನುವ ಸ್ವಾಮಿಗಳು ಅದು ಮಾಧ್ವ ತುಳು ಶಿವಳ್ಳಿ ಬ್ರಾಹ್ಮಣರಿಗೆ ಮಾತ್ರ ಸೇರಿದ ಖಾಸಗಿ ಮಠವೆನ್ನುತ್ತಾರೆ. ಅದೇ ಉಸಿರಿನಲ್ಲಿ ತಾವು ನಿರ್ಮಿಸಿದ-ನಿರ್ಮಿಸುವ ಶೌಚಾಲಯ, ಅತಿಥಿಗೃಹ, ಸಭಾಂಗಣ ಇತ್ಯಾದಿಗಳಿಗೆ ಸರಕಾರಿ ಅನುಧಾನವನ್ನು ಕೇಳಿ ಪಡೆಯುತ್ತಾರೆ.

ಮತ್ತೊಂದೆಡೆ ತಮ್ಮ ಖಾಸಗಿ ಮಠದ ರಕ್ಷಣೆಗಾಗಿ ರಾಜ್ಯ ಹೆದ್ದಾರಿಯನ್ನೇ ತಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ವಾಣಿಜ್ಯ ಸಂಸ್ಥೆಗಳ ಎತ್ತಂಗಡಿಗೆ ಬೇಡಿಕೆ ಮುಂದಿಡುತ್ತಿದ್ದಾರೆ. "ಕೃಷ್ಣ ದೇಗುಲ ಸಾರ್ವಜನಿಕವಲ್ಲವಾದರೆ, ಸಾರ್ವಜನಿಕರಿಗಾದರೂ ಕೃಷ್ಣ ದೇಗುಲ ಯಾಕೆ ಬೇಕು? ಅಷ್ಟ ಮಠಾಧೀಶರಿಗೆ ಬಾಂಬ್ ಭಯವಿದ್ದರೆ, ಬೇಕಾದರೆ ಕೃಷ್ಣ ದೇಗುಲವನ್ನು ಮತ್ತು ತಮ್ಮ ಶಾಖಾ ಮಠಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲಿ. ನಾವಂತೂ ಸ್ಥಳಾಂತರಗೊಳ್ಳೆವು" ಎಂದೇ ದೃಢವಾಗಿ ಘೋಷಿಸಿದ್ದಾರೆ ನಾಲ್ಕು ವೀಥಿ ನಿವಾಸಿಗಳು ಹಾಗೂ ವ್ಯಾಪಾರಿಗಳು.

ಮಠಾಧೀಶರ, ಡಿಸಿ, ಎಸ್‌ಪಿ ಮಹಾಶಯರ ಜನವಿರೋಧಿ, ಅಪ್ರಜಾತಾಂತ್ರಿಕ ಕ್ರಮಗಳನ್ನು ಖಂಡಿಸಿ ನೂರಾರು ಜನರು ಇತ್ತೀಚೆಗೆ ರಥ ಬೀದಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ತಮ್ಮ ಆಕ್ಷೇಪಗಳನ್ನು, ಹಕ್ಕೊತ್ತಾಯಗಳನ್ನು ಮಂಡಿಸಿದ್ದಾರೆ.

ಇಂತಹ ಪಾಪಿಷ್ಠ ಖಾವಿಧಾರಿಗಳ ಕಾಲು ನೆಕ್ಕುವ ಕೆಲಸವನ್ನು ಡಿ.ಸಿ. ಎಸ್‌ಪಿ. ತಹಶೀಲ್ದಾರ್. ಸಚಿವರಾದಿಯಾಗಿ ಭ್ರಷ್ಟರು, ದುಷ್ಟರು ನಿಲ್ಲಿಸುವರೇ? ಕಾದು ನೋಡಬೇಕು!

–ಶ್ರೀರಾಮ ದಿವಾಣ

ವೈಯಕ್ತಿಕ ಭಯ, ಸಾಮಾಜಿಕ ದಬ್ಬಾಳಿಕೆ, ಭಾವನಾ ಪ್ರಧಾನವಾದ ಹೋರಾಟಗಳನ್ನು ಬೇರ್ಪಡಿಸಿ ಒಗ್ಗೂಡಿಸುವುದೇ ಶಿಕ್ಷಣ-ಕೆ.ಜೆ. ಸ್ಟೈಯರ್ನ್

ಬಂಡಾಯ ಸಾಹಿತ್ಯ -25

ಹೆಡೆಯು ನೆರಳಿಂದ ಹೊರಬರದೆ...?


- ಶಿವಸುಂದರ್ -

ಸ್ವಾತಂತ್ರ್ಯೋತ್ತರ ಕನ್ನಡ ಸಮಾಜದ ಮತ್ತು ಸಾಹಿತ್ಯದ ಪ್ರಮುಖ ಸಾಹಿತ್ಯಿಕ ಮತ್ತು ಸಾಮಾಜಿಕ ವಿದ್ಯಮಾನವೇ ಆಗಿದ್ದ ಬಂಡಾಯ ಸಾಹಿತ್ಯ ಸಂಘಟನೆಗೆ ಕಾಲು ಶತಮಾನ ತುಂಬಿದೆ. ಅದಕ್ಕೆಂದೇ ಬಹಳ ವರ್ಷಗಳ ನಂತರ ಕಳೆದ ಏಪ್ರಿಲ್ 8 ಮತ್ತು 9ರಂದು ಶಿವಮೊಗ್ಗೆಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ 14ನೇ ರಾಜ್ಯ ಸಮ್ಮೇಳನವು ನಡೆಯಿತು. ಈ ಸಮ್ಮೇಳನಕ್ಕೆ ಒಂದು ಹಿನ್ನೆಲೆಯೂ ಇತ್ತು. ಸುಮಾರು ವರ್ಷಗಳ ಕಾಲ ನಿಷ್ಕ್ರಿಯವೇ ಆಗಿಬಿಟ್ಟಿದ್ದ ಬಂಡಾಯಕ್ಕೆ ಮರು ಹುಟ್ಟು ನೀಡುವ ಮಹಾನ್ ಉದ್ದೇಶದಿಂದಾಗಿ ಈ ಸಮ್ಮೇಳನ ಒಂದು ಗಂಭೀರವಾದ ಗಮನವನ್ನೂ ಪಡೆದುಕೊಂಡಿತ್ತು.

ಆ ಕಾರಣದಿಂದಲೇ ಸಮ್ಮೇಳನ ನಡೆಯುವ ಕೆಲವು ದಿನಗಳ ಮುನ್ನ ಹೂವಿನಹಡಗಲಿಯಲ್ಲಿ ನಡೆದ ಸಂಘಟನಾ ಸಮಿತಿಯ ಸಭೆ ಪ್ರಮುಖ ನಿರ್ಣಯವೊಂದನ್ನು ಕೈಗೊಂಡು, ಆಳ್ವಿಕೆಯಲ್ಲಿರುವ ಕೋಮುವಾದಿ ಪ್ರಭುತ್ವವು ಕೊಡಮಾಡುವ ಯಾವುದೇ ಪ್ರಶಸ್ತಿಗಳನ್ನು ಧಿಕ್ಕರಿಸಬೇಕೆಂದೂ, ಹಾಗೂ ಈ ಹಿಂದಿನ ಸರ್ಕಾರ ನೇಮಕ ಮಾಡಿದ್ದ ಅಕಾಡೆಮಿ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಹೊರ ಬರಬೇಕೆಂದೂ ನಿರ್ಣಯ ಕೈಗೊಂಡಿತು. ಇದು ಪ್ರಾಯಶಃ ತನ್ನ ಇತ್ತೀಚಿನ ದಿನಗಳಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಕೈಗೊಂಡ ಅತಿ ಪ್ರಮುಖ ನಿರ್ಣಯಗಳಲ್ಲಿ ಒಂದು. ಆದರೆ ಇಂತಹ ಪ್ರಮುಖ ನಿರ್ಣಯವನ್ನು ಸಮ್ಮೇಳನದಲ್ಲಿ ತೆಗೆದುಕೊಳ್ಳದೇ ಕೆಲವೇ ಜನ ಏಕಪಕ್ಷೀಯವಾಗಿ ಕೈಗೊಂಡರೆಂಬುದೇ ಪ್ರಧಾನವಾಗಿ ಉಳಿದ ವಿಷಯಗಳು ಹಿಂದೆ ಸರಿದು ಬಿಟ್ಟಿದ್ದು ಮಾತ್ರ ವಿಷಾದಕರ. ಆ ನಂತರ ಮೊದಲ ದಿನದ ರಾತ್ರಿ ನಡೆದ ಸಂಘಟನಾ ಸಭೆಯಲ್ಲಿ ಈ ಸರ್ಕಾರದ ಬಗ್ಗೆ ಬಂಡಾಯ ಸಂಘಟನೆಯ ನಿಲುವೇನಾಗಿರಬೇಕು ಎಂಬ ಬಗ್ಗೆ ಒಂದು ಕರಡು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

ಅದೇನೇ ಇರಲಿ, ಒಂದು ಸರ್ಕಾರದ ಕಾರ್ಯಕ್ರಮಗಳ ಬಗ್ಗೆ, ಯಾವುದಾದರೂ ಒಂದು ಯೋಜನೆಯ ಬಗ್ಗೆ ಜನಪರ ದೃಷ್ಟಿಯಿಂದ ಕಾರ್ಯ ತಾಂತ್ರಿಕವಾದ ಹಾಗೂ ಕಾರ್ಯ ಸಾಧುವಾದ ತಾತ್ಕಾಲಿಕ ಧೋರಣೆ ಹೊಂದುವುದು ಬೇರೆ. ಆಗಲೂ ಅಂತಹ ಸರ್ಕಾರಿ ಯೋಜನೆಯನ್ನು ಸರ್ಕಾರದ ಒಟ್ಟಾರೆ ನೀತಿಗಳ ಸಂದರ್ಭದಲ್ಲಿಟ್ಟು ನೋಡದೇ ಕೇವಲ ಆ ಕಾರ್ಯಕ್ರಮವನ್ನು ಮಾತ್ರ ಒಂದು ಅಪವಾದವನ್ನಾಗಿ ನೋಡಿ ಸಮರ್ಥಿಸುವುದೂ ಜನತೆಗೆ ಉಪಯೋಗಕ್ಕಿಂತ ಹಾನಿಯನ್ನೇ ಹೆಚ್ಚು ಮಾಡುತ್ತದೆಂಬುದನ್ನು ಬಂಡಾಯವನ್ನೂ ಒಳಗೊಂಡಂತೆ ಎಲ್ಲಾ ಜನಪರ ಸಂಘಟನೆಗಳು ತಮ್ಮ ಅನುಭವಗಳಿಂದಲೇ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಒಂದು ಸರ್ಕಾರಿ ಕಾರ್ಯಕ್ರಮವನ್ನು ಬೆಂಬಲಿಸುವಾಗಲೇ ಇಷ್ಟೆಲ್ಲಾ ಮುನ್ನೆಚ್ಚರಿಕೆ ವಹಿಸುವ ಅಗತ್ಯವಿರುವಾಗ, ಒಂದು ಸರ್ಕಾರವನ್ನೇ ಪರೋಕ್ಷವಾಗಿ ಬೆಂಬಲಿಸುವ ಅಥವಾ ಪ್ರತ್ಯಕ್ಷವಾಗಿ ಅದನ್ನು ವಿರೋಧಿಸದೇ ಇರುವ ನಿಲುವನ್ನು ತೆಗೆದುಕೊಳ್ಳುವುದು ಹೇಗೆ ಸಾಧ್ಯವಾಗುತ್ತದೆ? ಅದರಲ್ಲೂ ಕರ್ನಾಟಕದಲ್ಲಿ ಅಧಿಕಾರವನ್ನು ಪ್ರಪ್ರಥಮವಾಗಿ ಪಡೆದಿರುವ ಬಿ.ಜೆ.ಪಿ. ತನ್ನ ಅಧಿಕಾರದ ಮೂಲಕ ಕರ್ನಾಟಕದಲ್ಲಿ ತನ್ನ ಬೇರುಗಳನ್ನು ಮತ್ತಷ್ಟು ಸಧೃಡ ಪಡಿಸಿಕೊಂಡು ಇಡೀ ದಕ್ಷಿಣ ಭಾರತಕ್ಕೇ ವಿಸ್ತರಿಸುವ ಹೊಂಚನ್ನು ಹಾಕುತ್ತಿರುವಾಗ... ಈಗಾಗಲೇ ಅಂಬೇಡ್ಕರರ ಭಾವ ಚಿತ್ರವನ್ನು ಸಾಂಕೇತಿಕವಾಗಿ ವಿಧಾನಸೌಧದಿಂದ ಹೊರಹಾಕುವ, ಬಜೆಟ್ಟನಲ್ಲಿ ಹಿಂದೂವಾದಿ ಮತ್ತು ವಿಶ್ವಬ್ಯಾಂಕ್ ಪ್ರಾಯೋಜಿತವಾದ, ಕರ್ನಾಟಕವನ್ನು ವಿದೇಶಿ ಕಂಪನಿಗಳ ವಸಾಹತುವನ್ನಾಗಿ ಮಾಡುವ ಎಲ್ಲಾ ಯೋಜನೆಗಳನ್ನು ಜಾರಿಗೆ ತಂದು ತನ್ನ ಜನವಿರೋಧಿತನವನ್ನು ಅನುಮಾನಕ್ಕೆಡೆಯಿಲ್ಲದಂತೆ ಸಾಬೀತು ಮಾಡಿರುವಾಗ...ಪ್ರಭುತ್ವ ಅತ್ಯಂತ ನಿರ್ಲಜ್ಜವಾಗಿ ಉಳ್ಳವರ, ವಿದೇಶಿ ಬಂಡವಾಳದ ಏಜೆಂಟಾಗಿದೆ ಎಂದು ಮೇಧಾ ಪಾಟ್ಕರರಂತ ಗಾಂಧೀವಾದಿಗಳೇ ಘೋಷಿಸುತ್ತಿರುವಾಗ.. ಸರ್ಕಾರದ ಜೊತೆ ಬಂಡಾಯದಂತಹ ಒಂದು ಜನಪರ ಸಾಂಸ್ಕೃತಿಕ ಸಂಘಟನೆಯ ಸಂಬಂಧವೇನಾಗಿರಬೇಕೆಂಬುದು ಈಗಲೂ ಚರ್ಚಾಸ್ಪದ ವಿಷಯವಾಗಿಯೇ ಉಳಿದಿರುವುದು ವಿಷಾದಕರ ಸಂಗತಿ..!

ಬಂಡಾಯದ ಒಳಗಿನ ಈ ಚರ್ಚೆಗಳು ಏನೇ ಇದ್ದರೂ ಶಿವಮೊಗ್ಗೆಯ ಸಮ್ಮೇಳನಕ್ಕೆ ಸಿಕ್ಕ ಸ್ಪಂದನೆ ಜನರು ಬಂಡಾಯದ ಮೇಲಿಟ್ಟಿರುವ ಅಪಾರ ನಿರೀಕ್ಷೆ ಮತ್ತು ಅಪೇಕ್ಷೆಗಳನ್ನೇ ಪ್ರತಿಫಲಿಸುತ್ತಿದ್ದವು. ಅದರಲ್ಲಿ ಅರ್ಧಕ್ಕೂ ಹೆಚ್ಚು ಜನ ಹೊಸಬರು. ಕಣ್ಣಲ್ಲಿ ಕನಸನ್ನೂ, ಮನಸಲ್ಲಿ ಆದರ್ಶಗಳನ್ನೂ, ತಲೆಯಲ್ಲಿ ಪ್ರಶ್ನೆಗಳನ್ನೂ ಇಟ್ಟುಕೊಂಡು ಅಪಾರ ನಿರೀಕ್ಷೆಯಿಂದ ಬಂದ ಯುವ ಜನರು. ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ 37 ಕವಿಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಯುವ ತಲೆಮಾರಿನವರು. ಅವರೆಲ್ಲರ ಕಾವ್ಯದ ವಸ್ತು ವರ್ತಮಾನದ ಶೋಷಣೆ ಮತ್ತು ಅಸಮಾನತೆಗಳೇ. ಎಲ್ಲವೂ ವ್ಯವಸ್ಥೆಯನ್ನು ಪ್ರಶ್ನಿಸಿದ್ದು ಮಾತ್ರವಲ್ಲದೇ ಪರೋಕ್ಷವಾಗಿ ಪ್ರಭುತ್ವದ ಪಾತ್ರವನ್ನು ಪ್ರಶ್ನಿಸಿದವು. ಅರ್ಧಕ್ಕೂ ಹೆಚ್ಚು ಜನರ ಕಾವ್ಯಾಭಿವ್ಯಕ್ತಿ ಕಲಾತ್ಮಕತೆಯಲ್ಲೂ ಉತ್ಕೃಷ್ಟವಾಗಿತ್ತು. ಹೀಗೆ ಹೊಸ ತಲೆಮಾರು ಒಂದು ಬಗೆಯ ಸಿದ್ಧತೆಯಿಂದ ಆದರೆ ವರ್ತಮಾನದ ಕೆಲವು ಗೊಂದಲಗಳಿಗೆ ಪರಿಹಾರವನ್ನು ಅಪೇಕ್ಷಿಸುತ್ತಲೇ ಬಂಡಾಯದ ಸುತ್ತಾ ನೆರೆದಿದ್ದರು. ಈ ಗೊಂದಲ ಹಾಗೂ ನಿರೀಕ್ಷೆಗಳು ವಿವಿಧ ಗೋಷ್ಠಿಗಳಲ್ಲಿ ಈ ಯುವ ಸಭಿಕರ ಭಾಗವಹಿಸುವಿಕೆಯಲ್ಲಿ, ಕೇಳುತ್ತಿದ್ದ ಪ್ರಶ್ನೆಗಳಲ್ಲಿ ಗೋಷ್ಠಿಯ ನಂತರವೂ ಬಗೆಹರಿಯದಿದ್ದ ಪ್ರಶ್ನೆಗಳಿಗೆ ಸಮಾಧಾನ ಹುಡುಕಿಕೊಳ್ಳಲು ತೋರುತ್ತಿದ್ದ ಉತ್ಸಾಹದಲ್ಲಿ ವ್ಯಕ್ತಗೊಳ್ಳುತ್ತಿತ್ತೆಂದು ಸಮಾವೇಶದ ಎರಡೂ ದಿನಗಳ ಗೋಷ್ಠಿಗಳಲ್ಲಿ ಭಾಗವಹಿಸಿ ಒಂದು ಗೋಷ್ಠಿಯಲ್ಲಿ ಪ್ರಬಂಧವನ್ನೂ ಮಂಡಿಸಿದ ನನಗೆ ಬಲವಾಗಿ ಅನಿಸಿದೆ.



ಆ ರೀತಿಯಲ್ಲಿ ಯುವ ತಲೆಮಾರಿಗೆ ಬಂಡಾಯದ ಕಿಚ್ಚನ್ನು ವರ್ಗಾಯಿಸಿದ ಮಟ್ಟಿಗೆ ಶಿವಮೊಗ್ಗೆಯ ಬಂಡಾಯ ಸಮ್ಮೇಳನ ಯಶಸ್ವಿಯಾಯಿತೆಂದೇ ಹೇಳಬೇಕು. ಆದರೆ ಅದೇ ಮಾತನ್ನು ಸಭಿಕರ ಪ್ರಶ್ನೆಗಳ ರೂಪದಲ್ಲಿ ವ್ಯಕ್ತವಾದ ಇಂದಿನ ಎಲ್ಲಾ ಜನಪರ ಚಳವಳಿಗಳು ಎದುರಿಸುತ್ತಿರುವ ಗೊಂದಲಗಳಿಗೆ ಪರಿಹಾರವನ್ನು ಮತ್ತು ಅದನ್ನು ನಿಭಾಯಿಸುವ ತಾತ್ವಿಕ ಹಾಗೂ ಸಂಘಟನಾತ್ಮಕ ನಾಯಕತ್ವವನ್ನೂ ಒದಗಿಸಿತೇ ಎಂಬ ಪ್ರಶ್ನೆಗೆ ಈಗಲೇ ಅಷ್ಟು ಖಚಿತವಾದ ಉತ್ತರವನ್ನು ಹೇಳುವುದು ಕಷ್ಟ.

ಬಂಡಾಯ ತನ್ನ ಹುಟ್ಟಿನಲ್ಲೂ, ನಂತರದ ಬಿಕ್ಕಟ್ಟಿನಲ್ಲೂ, ಇಂದಿನ ಮರು ಹುಟ್ಟಿನಲ್ಲೂ ಎದುರಿಸುತ್ತಿರುವ ಪ್ರಮುಖ ಪ್ರಶ್ನೆ ಪ್ರಭುತ್ವ ಹಾಗೂ ವ್ಯವಸ್ಥೆಯ ಸಂಬಂಧದ ಕುರಿತಾದದ್ದೇ. ತಾನು ಹುಟ್ಟುವಾಗಲೇ ಬಂಡಾಯ ಈ ಪ್ರಶ್ನೆಯನ್ನು ಒಂದು ರೀತಿಯಲ್ಲಿ ಬಗೆಹರಿಸಿಕೊಂಡೇ ಹುಟ್ಟಿತ್ತು, ಬಂಡಾಯದ ಮೊದಲ ಸಮಾವೇಶವನ್ನು ಉದ್ಘಾಟಿಸಿದವರು ಆಂಧ್ರದ ಕ್ರಾಂತಿಕಾರಿ ಕವಿ ಮತ್ತು ವಿಪ್ಲವ ರಚಯಿತುಲ ಸಂಘಂ(ವಿರಸಂ) ಅಧ್ಯಕ್ಷ ಶ್ರೀಶ್ರೀಯವರು.

ಆಂಧ್ರದ ವಿರಸಂನ ಮಟ್ಟಿಗೆ ವ್ಯವಸ್ಥೆ ಮತ್ತು ಪ್ರಭುತ್ವದ ಸಂಬಂಧದ ಪ್ರಶ್ನೆ ಬಗೆಹರಿದ ಪ್ರಶ್ನೆಯೇ ಆಗಿತ್ತು, ಅವರ ಮಟ್ಟಿಗೆ ಈ ಪ್ರಭುತ್ವ ಎಂಬುದು ವ್ಯವಸ್ಥೆಯಲ್ಲಿರುವ ವರ್ಗ ಅಸಮಾನತೆ, ಲಿಂಗ ಹಾಗೂ ಜಾತಿ ಅಸಮಾನತೆಗಳನ್ನು ಪೋಷಿಸಿ ಧೃಢೀಕರಿಸುವ ಉಳ್ಳವರ ಉಪಕರಣ. ಅಲ್ಲದೆ ಪ್ರಭುತ್ವದ ಪೋಷಣೆಯಿಲ್ಲದೆ ಈ ಅಸಮಾನ ವ್ಯವಸ್ಥೆ ಉಳಿಯಲು ಸಾಧ್ಯವೇ ಇಲ್ಲ ಎಂಬುದೇ ವಿರಸಂನ ತಾತ್ವಿಕ ತಿಳುವಳಿಕೆಯಾಗಿತ್ತು. ಆದ್ದರಿಂದ ವ್ಯವಸ್ಥೆಯಲ್ಲಿನ ಅಸಮಾನತೆಗಳನ್ನು, ಶೋಷಣೆಯನ್ನು ಪ್ರಭುತ್ವವನ್ನು ಬಳಸಿ ಹೋಗಲಾಡಿಸಬಹುದೇ ಎಂಬ ತಾತ್ವಿಕ ಗೊಂದಲಕ್ಕೆ ಅಲ್ಲಿ ಅವಕಾಶವೇ ಇರಲಿಲ್ಲ. ಅದಕ್ಕೇ ವಿರಸಂನ ಬಹುಪಾಲು ಸದಸ್ಯರು ಮಾರ್ಕ್ಸ್‌ವಾದಿಗಳಾಗಿದ್ದುದೇ ಕಾರಣವೆಂಬುದು ಕೇವಲ ಒಂದು ಕಾರಣವಿರಬಹುದಷ್ಟೇ. ಆದರೆ ಆಂಧ್ರವನ್ನು ಹೊರತುಪಡಿಸಿ ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಆ ಕಾಲ ಘಟ್ಟದಲ್ಲಿ ಹುಟ್ಟಿಕೊಂಡ ಬಹುಪಾಲು ಜನಪರ ಸಾಹಿತ್ಯ ಸಂಘಟನೆಗಳು ಇದೇ ಬಗೆಯ ನಿಲುವನ್ನೇ ಹೊಂದಿದ್ದವು ಎಂಬುದನ್ನು ಗಮನಿಸಿದರೆ, ಪ್ರಭುತ್ವದ ಪಾತ್ರವನ್ನು ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಅಗತ್ಯವಿಲ್ಲದೇ ಜನಪರ ಸಂಘಟನೆಗಳು ತಮ್ಮ ಸಾಮಾಜಿಕ ಅನುಭವದಿಂದಲೇ ಅರ್ಥಮಾಡಿಕೊಂಡಿದ್ದರೆಂಬುದು ತಿಳಿಯುತ್ತದೆ. ಶ್ರೀ ಶ್ರೀಯವರೇ ಬರೆದ ಒಂದು ಕವನದ ಪ್ರಕಾರ ಕವಿ ಎಂದರೆ "ಕಷ್ಟಜೀವಿ"ಯ ಎಡಬಲಕ್ಕೆ ನಿಲ್ಲುವವನೆಂದರ್ಥ. ಹೀಗಾಗಿಯೇ ವಿರಸಂ ಆಂಧ್ರದ ರೈತಾಪಿಗಳ, ಕೂಲಿ ಕಾರ್ಮಿಕರ ಹೋರಾಟಗಳಲ್ಲಿ ಅವರ ಎಡಬಲಗಳಲ್ಲಿ ನಿಂತು ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಯಿತು. ಗುರಿಯಾಗುತ್ತಿದೆ. ಪ್ರಾಯಶಃ ವಿರಸಂನ ದಿಗ್ಗಜರುಗಳಲ್ಲಿ ಜೈಲು ಕಾಣದ ಯಾವೊಬ್ಬ ಕವಿಯೂ ಇಲ್ಲ. ತಮ್ಮ ಬದುಕಿನಲ್ಲೂ ಮತ್ತು ಬರಹದಲ್ಲೂ ಬಂಡಾಯವನ್ನು ಆಚರಿಸಿದ್ದರಿಂದಲೇ ಅವರ ಸಾಹಿತ್ಯಕ್ಕೆ ಒಂದು ಜನಾಂಗವನ್ನೇ ಕದಲಿಸುವಷ್ಟು ಶಕ್ತಿ ಪ್ರಾಪ್ತವಾಯಿತು. ಅವರೆಂದೂ ಪ್ರಭುತ್ವದ ಪಲ್ಲಕ್ಕಿಗೆ ಭೋಗಿಗಳೂ ಆಗಲಿಲ್ಲ-ಆಳುವ ವರ್ಗದ ಹಾಡುಗಳಿಗೆ ಪಲ್ಲವಿಗಳೂ ಆಗಲಿಲ್ಲ.

ಅದೇ ರೀತಿ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ವಿವಿಧ ತಾತ್ವಿಕ ಧಾರೆಗಳು ಒಟ್ಟಾಗಿದ್ದರೂ ಪ್ರಭುತ್ವವೆಂಬುದು ಶೋಷಿತ ಜನವಿರೋಧಿ ಹಾಗೂ ಸಮಾಜ... ಶೋಷಕ ವರ್ಗಗಳ ಪರವಾದದ್ದೆಂದು ಅರ್ಥಮಾ... ಕೊಳ್ಳಲು ತಾತ್ವಿಕ ಅಡ್ಡಿಯೇನೂ ಇರಲಿಲ್ಲ, ಒಂದ... ದಲ್ಲಿ ಅದು ಬಂಡಾಯ ಸಾಹಿತ್ಯ ಸಂಘಟನೆ... ಸಾಮಾನ್ಯ ಕನಿಷ್ಠ ತಿಳುವಳಿಕೆಯಲ್ಲಿ ಒಂದಾಗಿತ್ತು, ... ತಿಳುವಳಿಕೆಯ ಮೂಲ ನೆಲೆಯಿದ್ದದ್ದು ಬಂಡಾ... ಸಂಘಟನೆಯನ್ನು ತಮ್ಮ ಸಾಂಸ್ಕೃತಿಕ ಮುಖವಾಣಿಯಾ... ಬೆಳೆಸಿದ ದಲಿತ, ರೈತ, ಹಾಗು ಎಡಪಂಥೀ... ಚಳವಳಿಗಳಲ್ಲಿ.

ಆ ವೇಳೆಗಾಗಲೇ ದಲಿತ ಚಳವಳಿ ಭ... ಹೋರಾಟಗಳಲ್ಲಿ ತನ್ನ ಅನುಭವದಿಂದಲೇ ಪ್ರಭು... ಹೇಗೆ ಮೇಲ್ಜಾತಿ ಭೂಮಾಲಿಕರ ಪರವೆಂಬುದ... ಕಂಡುಕೊಂಡಿತ್ತು. ರೈತ ವಿರೋಧಿ ಕಾಂಗ್ರೆಸ್ ಸರ್ಕಾ... ರೈತರ ಮೇಲೆ ನಡೆಸಿದ ಗೋಲಿಬಾರುಗಳು ಪ್ರಭುತ್ವ... ಸ್ವಭಾವವೇನೆಂದು ಸ್ಪಷ್ಟಪಡಿಸಿದ್ದವು. ಎಡ ಪಂಥೀಯ... ಕಾರ್ಮಿಕ ಚಳವಳಿಗಳ ಮೇಲೆ ಸತತವಾಗಿ ಧಾಳಿಗಳ... ನಡೆಯುತ್ತಿದ್ದವು. ಆ ಚಳವಳಿಗಳ ಅನುಭವಗ... ಗುಣಪಾಠಗಳು ಪ್ರಭುತ್ವದ ಗುಣ ಸ್ವಭಾವದ ಬಗೆಗಿ... ಸೈದ್ಧಾಂತಿಕ ಚರ್ಚೆಯನ್ನೇ ಅನಗತ್ಯಗೊಳಿಸಿದ್ದವು. ನಂತರ... ದಿನಗಳ ಬೆಳವಣಿಗೆಗಳು ಸಾಬೀತುಪಡಿಸಿದಂತೆ ... ಸೈದ್ಧಾಂತಿಕ ಚರ್ಚೆಯಾಗದೇ ಹೋದದ್ದು ಬಂಡಾ... ಯದ ಶಕ್ತಿಯಾಗದೇ ಒಂದು ಅತಿ ದೊಡ್ಡ ಮಿ... ಯಾಗಿಬಿಟ್ಟಿತು.

ಈ ಸಂಗತಿ ಎದ್ದು ಕಂಡದ್ದು 1985ರ ನಂತರ... ಅವಧಿಯಲ್ಲಿ, 1983-1989ರ ವರೆಗಿನ ರಾಮಕೃ... ಹೆಗಡೆ ನೇತೃತ್ವದ ಜನತಾ ಪಕ್ಷದ ಆಳ್ವಿಕೆಯ ಕಾಲವ... ಜನಪರ ಚಳವಳಿಗಳನ್ನು ಪ್ರಭುತ್ವವು ಸಾಮ ನೀತಿಯಿಂ... ನುಂಗಿ ಹಾಕಿದ ಕಾಲವೆಂದೇ ಹೇಳಬಹುದು. ಶೋಷಿ... ಜನವರ್ಗಗಳಿಗೆ ಯಾವುದೇ ಬಗೆಯ ಪರಿಹಾರಗಳನ್ನ... ಒದಗಿಸದೆ ಚಳವಳಿಗೆ ಹುಸಿ ಭರವಸೆಗಳನ್ನು ಮಾ... ನೀಡುತ್ತಾ ಚಳವಳಿಗಳ ನಾಯಕತ್ವವನ್ನು ತಾತ್ವಿಕವಾ... ಹಾಗೂ ಭೌತಿಕವಾಗಿ ಭ್ರಷ್ಟಗೊಳಿಸಿದ ಕಾಲವದು... ಇದೇ ಕಾಲಘಟ್ಟದಲ್ಲೇ ಜನಪರ ಚಳವಳಿಗಳ... ಕ್ರಮೇಣವಾಗಿ ಕಷ್ಟಕರವಾದ ಹೋರಾಟ ಮಾರ್ಗವನ್ನ... ಬಿಟ್ಟು ಅತಿ ಸುಲಭವಾದ ಲಾಬಿ ಮಾರ್ಗ... ವನ್ನು ಅನುಸರಿಸಲು ಪ್ರಾರಂಭಿ... ಸಿದವು. ಅದರ ಪ್ರತಿಫಲನವಾ... ಪ್ರಭುತ್ವ ಹಾಗೂ ವ್ಯವಸ್ಥೆ... ಪರ್ಯಾಯವಾದ ಸಂಸ್ಥೆಗಳನ್ನು... ಸಂಸ್ಕೃತಿಯನ್ನು ಹುಟ್ಟ ಹಾಕು... ಆದರ್ಶದಿಂದ ಹುಟ್ಟಿಹಾ... ಲಾಗಿದ್ದ ಬಂಡಾಯದಲ್ಲೂ ಪ್ರಭುತ್ವ ಹಾಗೂ ವ್ಯವಸ್ಥೆಯ... ಸಂಸ್ಥೆಗಳು ಒಳಹೊಕ್ಕು ಜನರ ಧ್ವನಿಯನ್ನು ದಾಖಲಿಸುವ... ಪ್ರತಿಫಲಿಸುವ ವಾದಗಳು ಮುಂದೆ ಬಂದವು.

ಬಂಡಾಯದ ಕೆಲವು ಹಿರಿಯ ಸಿದ್ಧಾಂತವಾದಿಗಳ... ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ... ಬಂಡಾಯ ಇರುವುದು ವ್ಯವಸ್ಥೆಯ ವಿರುದ್ಧವೇ ವಿನಾ... ಪ್ರಭುತ್ವದ ವಿರುದ್ಧವಲ್ಲವೆಂದೂ, ಬದಲಿಗೆ ಪ್ರಭುತ್ವವನ್ನು... ಬಳಸಿಕೊಂಡು ವ್ಯವಸ್ಥೆಯ ಅನಿಷ್ಟಗಳ ವಿರುದ್ಧ... ಹೋರಾಡಬಹುದೆಂದು ಹೊಸ ಪಥವನ್ನೇ ಸೃಷ್ಟಿ... ಬಿಟ್ಟರು. ಆ ಮೂಲಕ ಅವರಲ್ಲಿ ಕೆಲವರು ಅಕಾಡೆಮಿ... ಗಳ ಅಧ್ಯಕ್ಷರಾಗಿಯೂ, ಸಾಹಿತ್ಯ ಪರಿಷತ್ತಿನ ಪದಾಧಿ... ಕಾರಿಗಳಾಗಿಯೂ, ಸರ್ಕಾರದ ಪ್ರಾಧಿಕಾರದ ಅಧ್ಯಕ್ಷರಾ... ಗಿಯೂ ನೇಮಕಗೊಂಡು ಪ್ರಭುತ್ವವನ್ನು ಜನಪರವಾ... ದುಡಿಸಿಕೊಳ್ಳುವ ವಿಫಲ ಪ್ರಯೋಗಗಳನ್ನು ಪ್ರಾರಂಭಿ... ಬಿಟ್ಟರು.

ಈ ಪ್ರಕ್ರಿಯೆಯಲ್ಲಿ ಪ್ರಭುತ್ವವನ್ನು ಎಷ್ಟರಮಟ್ಟಿ... ಜನಪರವಾಗಿ ಹಾಗೂ ವ್ಯವಸ್ಥೆಯ ಸ್ಥಾಪಿತ ಮೌಲ್ಯಗ... ವಿರುದ್ಧವಾಗಿ ಬಳಸಿಕೊಳ್ಳಲಾಯಿತೆಂಬುದನ್ನು ವಿಶೇ... ವಾಗಿ ವಿವರಿಸುವ ಅಗತ್ಯವೇನೂ ಇಲ್ಲ. ಬದಲಿ... ಆದದ್ದೇನೆಂದರೆ ಜನವಿರೋಧಿ ಪ್ರಭುತ್ವವನ್ನು ಮಿತ್ರನನ್ನಾ... ಪರಿಭಾವಿಸುವ ಪರಿಪಾಠವೇ ಮುಂದುವರೆಯಿತು... ಪ್ರಭುತ್ವದಿಂದ ಉಪಕೃತರಾದವರ ಸಂಖ್ಯೆ ಬಂಡಾಯ... ದೊಳಗೆ ಹೆಚ್ಚುತ್ತಾ ಸಾಗಿತು. ಹೊರಗಡೆ ಹಲವಾರು... ಜನಚಳವಳಿಗಳೂ ಇದೇ ದಾರಿ ಹಿಡಿದಿದ್ದರಿಂದ... ಸಾರಾಂಶದಲ್ಲಿ ವ್ಯವಸ್ಥೆಯ ವಿರುದ್ಧವಾಗಲೀ, ಪ್ರಭುತ್ವದ... ವಿರುದ್ಧವಾಗಲೀ ಪರಿಣಾಮಕಾರಿ ಬಂಡಾಯ ಇಲ್ಲದೆ... ಒಂದು ದಶಕಕ್ಕೂ ಹೆಚ್ಚಿನ ಕಾಲ ಸಂದಿತು. ಹೀಗಾ... ಬಹುಪಾಲು ಬಂಡಾಯ ಸಮ್ಮೇಳನಗಳು ವಾರ್ಷಿ... ಜಾತ್ರೆಗಳಾಗಿ ಮಾತ್ರ ಉಳಿದುಬಿಟ್ಟವು.

ಆದರೆ ಇದೇ ದಶಕದಲ್ಲೇ ಜಾಗತೀಕರಣ ಮತ್ತು... ಕೋಮುವಾದಿ ಶಕ್ತಿಗಳು ಜನರ ಬದುಕನ್ನು ಮತ್ತು... ನೆಮ್ಮದಿಯನ್ನು ಹಿಂದೆಂದೂ ಕಾಣದಷ್ಟು ಹಾಳುಗೆಡ... ವಲು ಪ್ರಾರಂಭಿಸಿದ್ದವಷ್ಟೆ. ಜನರ ಬದುಕನ್ನು ಕಂಗೆಡಿಸಿ... ಈ ಶಕ್ತಿಗಳ ಬೆಳವಣಿಗೆಯಲ್ಲಿ ಪ್ರಭುತ್ವ ವಹಿಸಿದ... ದಲ್ಲಾಳಿ ಪಾತ್ರ ನಿಚ್ಚಳವಾಗಿತ್ತು. ಈಗಾಗಲೇ ವಿವರಿಸಿದಂತೆ...

> ವಿಪರ್ಯಾಸವೆಂದರೆ ಪ್ರಭುತ್ವದ ಗುಣಧರ್ಮ ಪಾಮರರಿಗೂ ಅರ್ಥವಾಗುವಷ್ಟು ಸ್ಪಷ್ಟವಾಗಿರುವ ಹೊತ್ತಿನಲ್ಲೇ ಕೆಲವು ಪಂಡಿತರು, ಸಿದ್ಧಾಂತವಾದಿಗಳು ಪ್ರಭುತ್ವವನ್ನು ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಆ ಮೂಲಕ ಪ್ರಭುತ್ವದ ಅಸಲಿ ಗುಣಧರ್ಮವನ್ನು ಮರೆಮಾಚಿ ಮಾನವತೆಯ ಮುಖವಾಡವನ್ನು ತೊಡಿಸುತ್ತಿದ್ದಾರೆ ಹಾಗೂ ವ್ಯವಸ್ಥೆಯ ಬದಲಾವಣೆಗಳ ಬಗ್ಗೆ ಮತ್ತಷ್ಟು ಗೊಂದಲಗಳನ್ನು ಹುಟ್ಟಿಹಾಕುತ್ತಿದ್ದಾರೆ. ಬಂಡಾಯದ ಇಷ್ಟು ವರ್ಷಗಳ ನಿಷ್ಕ್ರಿಯತೆಗೆ ಮತ್ತು ಬಿಕ್ಕಟ್ಟಿಗೆ ಮೂಲ ಕಾರಣ ಬಗೆಹರಿಸಿಕೊಳ್ಳಲಾಗದ ದ್ವಂದ್ವದಲ್ಲಿದೆ.

ಸಫಲ ಜೀವನ ನಡೆಸುವ ಯೋಗ್ಯತೆಯನ್ನು ತಂದುಕೊಡುವುದೇ ಶಿಕ್ಷಣ -ಹರ್ಬರ್ಟ್ ಸ್ಪೆನ್ಸರ್

ನರ ಬದುಕಿಗಾಗಿ ರಾಜಕೀಯರಹಿತ ಹೋರಾಟ ನಡೆಸುತ್ತಿರುವವರು ಬೇರೆಬೇರೆ ಸಿದ್ಧಾಂತಗಳ ಪ್ರಭಾವದ ಹೋರಾಟ ನಡೆಸುತ್ತಿರುವವರೂ ಪ್ರಭುತ್ವ ಸಂಪೂರ್ಣವಾಗಿ ಸ್ವದೇಶಿ ಹಾಗೂ ವಿದೇಶಿಗಳ ಬಂಡವಾಳಗಾರರ ಕೈಗೊಂಬೆಯಾಗಿದೆಯೆಂದು. ಈ ಸಾಮ್ರಾಜ್ಯಶಾಹಿ ಕೈಗೊಂಬೆ ಪ್ರಭುತ್ವದಿಂದ ವ್ಯವಸ್ಥೆಯಲ್ಲಿನ ವರ್ಗ, ಜಾತಿ, ಲಿಂಗ ಅಸಮಾನತೆಗಳ ಕಂದರ ಹಿಂದೆಂದೂ ಇಲ್ಲದಷ್ಟು ಹೆಚ್ಚಾಗುತ್ತಿದೆಯೆಂದೂ ಘೋಷಿಸುತ್ತಿದ್ದಾರೆ.

ಭಾರತದ ಪ್ರಭುತ್ವದ ಗುಣ ಸ್ವಭಾವ 91ರ ನಂತರವಂತೂ ಅತ್ಯಂತ ಜನವಿರೋಧಿಯಾಗಿರುವುದರಿಂದಲೇ ಜನರ ಬೇಡಿಕೆಯ ಅತಿ ಸಣ್ಣ ಹೋರಾಟಗಳು ಅತ್ಯಂತ ತ್ವರಿತವಾಗಿ ಪ್ರಭುತ್ವ ವಿರೋಧಿ ಹೋರಾಟಗಳಾಗಿ ಪರಿವರ್ತನೆಯಾಗುತ್ತಿವೆ. ಜನರ ಸಣ್ಣ ಹೋರಾಟವನ್ನೂ ಸಹಿಸದ ಸರ್ಕಾರಗಳು ಅತಿ ಕ್ರೂರವಾಗಿ ಅದನ್ನು ಮಟ್ಟ ಹಾಕುತ್ತಿವೆ. ಕಳೆದ ದಶಕದಲ್ಲಿ ಹೆಚ್ಚಾದ ಗೋಲಿಬಾರ್‌ಗಳು, ಎನ್‌ಕೌಂಟರ್ ಕೊಲೆಗಳು, ಇದಕ್ಕೆ ಪುರಾವೆಗಳು. ಅಷ್ಟೇಲ್ಲಾ ಏಕೆ? ಸರ್ದಾರ್ ಸರೋವರ ಅಣೆಕಟ್ಟಿನಿಂದ ನಿರ್ವಸಿತರಾಗಿರುವ ಆದಿವಾಸಿಗಳಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಅತ್ಯಂತ ಶಾಂತಿಯುತವಾಗಿ ಉಪವಾಸ ಸತ್ಯಾಗ್ರಹ ಕೂತಿದ್ದ ಮೇಧಾ ಪಾಟ್ಕರ್ ವಿರುದ್ಧವೇ ಹಿಂಸಾಚಾರ ನಡೆಸಿದರೆಂದು ಎಡ ಪಕ್ಷ ಬೆಂಬಲಿತ ಯು.ಪಿ.ಎ. ಸರ್ಕಾರ ಕೇಸು ದಾಖಲಿಸುತ್ತದೆಂಬುದೇ ಪ್ರಭುತ್ವ ಎಷ್ಟರ ಮಟ್ಟಿಗೆ ಸಾಮ್ರಾಜ್ಯಶಾಹಿಗಳ ಸೊತ್ತಾಗಿದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ.

ವಿಪರ್ಯಾಸವೆಂದರೆ ಪ್ರಭುತ್ವದ ಗುಣಧರ್ಮ ಪಾಮರರಿಗೂ ಅರ್ಥವಾಗುವಷ್ಟು ಸ್ಪಷ್ಟವಾಗಿರುವ ಹೊತ್ತಿನಲ್ಲೇ ಕೆಲವು ಪಂಡಿತರು, ಸಿದ್ಧಾಂತವಾದಿಗಳು ಪ್ರಭುತ್ವವನ್ನು ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಆ ಮೂಲಕ ಪ್ರಭುತ್ವದ ಅಸಲಿ ಗುಣಧರ್ಮವನ್ನು ಮರೆಮಾಚಿ ಮಾನವತೆಯ ಮುಖವಾಡವನ್ನು ತೊಡಿಸುತ್ತಿದ್ದಾರೆ ಹಾಗೂ ವ್ಯವಸ್ಥೆಯ ಬದಲಾವಣೆಗಳಿಗೆ ಮತ್ತಷ್ಟು ಗೊಂದಲಗಳನ್ನು ಹುಟ್ಟಿಹಾಕುತ್ತಿದ್ದಾರೆ. ಬಂಡಾಯದ ಇಷ್ಟು ವರ್ಷಗಳ ನಿಷ್ಕ್ರಿಯತೆಗೆ ಮತ್ತು ಬಿಕ್ಕಟ್ಟಿಗೆ ಮೂಲ ಕಾರಣ ಬಗೆಹರಿಸಿಕೊಳ್ಳಲಾಗದ ದ್ವಂದ್ವದಲ್ಲಿದೆ.


ಬಂಡಾಯ ತನ್ನ ಮರುಹುಟ್ಟಿಗೆ ಯತ್ನಿಸುತ್ತಿರುವ ಈ ಹೊತ್ತಿನಲ್ಲಿ ಈ ತಾತ್ವಿಕ ಗೊಂದಲದಿಂದ ಹೊರಬರದೆ ಅರ್ಥಪೂರ್ಣ ಮರುಹುಟ್ಟು ಅಸಾಧ್ಯ. ದುರದೃಷ್ಟಕರ ವಿಷಯವೆಂದರೆ ಶಿವಮೊಗ್ಗೆಯ ಸಮಾವೇಶ ಈ ದ್ವಂದ್ವಗಳನ್ನು ಬಗೆಹರಿಸಿತೆಂದು ಹೇಳಲಾಗುವುದಿಲ್ಲ. ಅಷ್ಟು ಸುಲಭವಾಗಿ ಅವು ಬಗೆಹರಿಯುವುದೂ ಇಲ್ಲ. ಆದರೆ ಕನಿಷ್ಠ ಪಕ್ಷ ಅಂತಹ ಚರ್ಚೆಗಳನ್ನಾದರೂ ಯಾವುದೇ ಪೂರ್ವಾಗ್ರಹವಿಲ್ಲದೆ, ಹಿರಿತನದ ಯಜಮಾನಿಕೆಯ ಒತ್ತಡವಿಲ್ಲದೆ ಪ್ರಜಾತಾಂತ್ರಿಕವಾಗಿ ನಡೆಸಿದರೆ ಅರ್ಥಪೂರ್ಣ ಸಂವಾದ ಹಾಗೂ ಫಲಿತಾಂಶಗಳು ಬರಲು ಸಾಧ್ಯ. ಆದರೆ ಶಿವಮೊಗ್ಗೆಯಲ್ಲಿ ಆ ಬಗೆಯ ಯೋಗ್ಯ ಪೂರ್ಣ ಚರ್ಚೆಗಳೂ ಪ್ರಾರಂಭವಾಗಲಿಲ್ಲ.

ನಾಗರ ಹೆಡೆಯ ಅಡಿಯನ್ನು ನೆರಳೆಂದು ಭಾವಿಸದೆ ಇರಲು, ಮೊದಲು ಹಾವನ್ನು ಹಾವೆಂದು, ಕಪ್ಪೆಯನ್ನು ಕಪ್ಪೆಯೆಂದು ಪರಿಗಣಿಸಬೇಕು. "ಖಡ್ಗವಾಗಲಿ ಕಾವ್ಯ – ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ" ಎಂಬುದೇ ಈಗಲೂ ಬಂಡಾಯದ ಘೋಷವಾಕ್ಯವೆನ್ನುವುದಾದರೆ ಜನರ ಶತೃಗಳನ್ನು ಪ್ರಾಣ ಮಿತ್ರರೆಂದು ತಿಳಿಯದೆ, ಜನತೆಯೇ ತಮ್ಮ ಪ್ರಾಣ ಮಿತ್ರರೆಂದು ಭಾವಿಸುವ ತಾತ್ವಿಕತೆ ಅತ್ಯಗತ್ಯ. ಹಾಗಾಗದಿರುವುದೇ ಹಲವಾರು ಪ್ರಗತಿಪರ ಚಳವಳಿಗಳ ಸಾವಿಗೆ ಕಾರಣ.

ಜನತೆಯ ದುಃಖ ದುಮ್ಮಾನಗಳು ನಮ್ಮ ಕವಿಗಳದೆ ತಕ್ಕ ತಾತ್ವಿಕತೆಯೂ ಆಗುವುದಿಲ್ಲ; ಪ್ರಾಂತ ಸಂವೇದನೆಯೂ ಆಗುವುದಿಲ್ಲ, ನಿಚ್ಚಳವಾಗಿ ಜನತೆಯ ಶತ್ರುವಾಗಿರುವ ವಿಧಾನಸೌಧದ ಮೆಟ್ಟಿಲುಗಳಿಂದ ಕೆಳಗಿಳಿದು ಜನರೊಡನೆ ಬೀದಿಯಲ್ಲಿ ಒಂದಾಗದೆ ಇದ್ದರೆ ಬಂಡಾಯಕ್ಕೆ ಆ ತಾತ್ವಿಕತೆಯೂ ದಕ್ಕುವುದಿಲ್ಲ, ಸಂವೇದನೆಯೂ ದೊರೆಯುವುದಿಲ್ಲ.

ಇದೀ ಬಂಡಾಯದಷ್ಟೇ ಕಂಫರ್ಟ್ ಜೋನಿಗಳಿ ಜಾಗ ಪ್ರಭುತ್ವದ ಹುನ್ನಾರಗಳಿಂದ ಹೊರಬಂದು, ಸದ್ಯವಾಗದಿದ್ದರೂ ಜನರ ನೋವಿಗೆ ಮಿಡಿವ [illegible] ಉಳಿಯುವುದೇ ಇಂದು [illegible] ಮುಂದಿರುವ ಬಹು ದೊಡ್ಡ ಸವಾಲಾಗಿದೆ. ●

ನರ್ಮದಾ ಹೆಸರಲ್ಲಿ ನರಮೇಧ



ಗಾಂಧಿ ತಮ್ಮ ಕೊನೆಯ ದಿನಗಳಲ್ಲಿ ತಾನೊಂದು ಹೆಣ್ಣು ಎಂದು ತಿಳಿಯಬಯಸಿದರು. ಪೌರುಷದ ಪರಿಭಾಷೆಯನ್ನು ರೂಢಿಸಿಕೊಳ್ಳುತ್ತಿದ್ದ ತನ್ನ ಕಾಲದ ಜಗತ್ತಿಗೆ ಅದು ಗಾಂಧಿಯ ಸವಾಲು. ಗಾಂಧಿ ತನ್ನ ಇಡೀ ಜೀವನವನ್ನು ಪ್ರಭುತ್ವ/ಅಧಿಕಾರಗಳ ಪೌರುಷದ ಅಸತ್ಯವನ್ನು ಎದುರಿಸುವುದರಲ್ಲೇ ಕಳೆದವರು. ತಾನೇ ಆಯ್ಕೆ ಮಾಡಿದ ನೆಹರೂ ನೇತೃತ್ವದ ಸ್ವತಂತ್ರ ಭಾರತ ಸರ್ಕಾರದ ಪ್ರಭುತ್ವಕ್ಕೂ ಸತ್ಯದ ಬಿಸಿ ಮುಟ್ಟಿಸಿದವರು. ದರ್ಪದ ಎಲ್ಲ ಅಧಿಕಾರ ಕೇಂದ್ರಗಳಿಗೂ ಆತ ಮುಟ್ಟಿಸಿದ ಬಿಸಿಯ ಏರು ಎಂಥದ್ದೆಂದರೆ, ಒಬ್ಬ ಮಹಾ(ಸಭಾದ) ಹಿಂದೂ ಆತನನ್ನು ಗುಂಡಿಕ್ಕಿ ಕೊಲೆಗೈದ. ಸಾಯುವ ಕಾಲಕ್ಕೆ ಗಾಂಧಿ ಉಸುರಿದ ರಾಮನಾಮ ಇವತ್ತು ಆತನ ಕೊಲೆಪಾತಕಿಗಳ ಪಕ್ಷದ ವಿಕಟ ಮಂತ್ರವಾಗಿದೆ ಎಂಬುದು ನಮ್ಮ ಕಾಲದ ಅಸತ್ಯಗಳಿಗೆ ಉಜ್ವಲ ಸಾಕ್ಷಿಯಾಗಿದೆ. ಗಾಂಧಿ ಎಂಬ ಪರಮ ಧಾರ್ಮಿಕನ ಕೊಲೆ ಮಾಡಿದ ಹಂತಕರ ಹಿಂದೂತ್ವದ ಪ್ರಕಾರ ಗಾಂಧಿ ಒಬ್ಬ ಹೆಣ್ಣಿಗ; ಇಡೀ ದೇಶವನ್ನು ಹೆಣ್ಣಿಗ ದೇಶವನ್ನಾಗಿ ಮಾಡುತ್ತಿದ್ದ ಹಿಂದೂತ್ವ ವೈರಿ. "ಸಹನೆ, ಪಾಲನೆ, ಹಾಗೂ ಕುಟುಂಬದೊಳಗೆ ಇದ್ದುಕೊಂಡೇ ಸಂಸಾರದ ದಬ್ಬಾಳಿಕೆಯನ್ನು ಎದುರಿಸುವ ಕಲೆಯನ್ನು ತಾನು ತನ್ನ ಹೆಂಡತಿಯಿಂದ ಕಲಿತೆ" ಎಂದರು ಗಾಂಧಿ. ಈ ಮೌಲ್ಯಗಳೇ ಹಿಂಸೆ ಮತ್ತು ಪೌರುಷದ ಅಸತ್ಯಗಳನ್ನು ಎದುರಿಸಬಲ್ಲ, ಪ್ರತಿ ಮನುಷ್ಯರಿಗೂ ಸಾಧ್ಯವಿರುವ ಶಕ್ತಿ ಎಂದು ತೋರಲು ಆತ ಪ್ರಯತ್ನಿಸಿದರು.

ಅಭಿವೃದ್ಧಿ ಎಂಬ (ತಿರು)ಮಂತ್ರ:

ರಾಶ್ಯುತ್ಪನ್ನವಲ್ಲ, ಬಹುಜನರಿಂದ ಉತ್ಪಾದನೆ (**"Not mass production, but production by the masses"**) ಎಂಬುದು ಗಾಂಧಿ ಪ್ರತಿಪಾದಿಸಿದ ಪ್ರಮುಖ ತತ್ವಗಳಲ್ಲಿ ಒಂದು. ಗಾಂಧಿಯ ಪ್ರಕಾರ ಸ್ವರಾಜ್ಯ ಎಂದರೆ, ಸರ್ಕಾರದ ಹಂಗಿಲ್ಲದಂತೆ, ದೈನ್ಯದ ಕುಗ್ಗಿಲ್ಲದಂತೆ, ಪರಾವಲಂಬನೆಯ ಸಂಕೋಲೆಯಿಲ್ಲದಂತೆ, ಪ್ರತಿ ವ್ಯಕ್ತಿಯೂ ಜವಾಬ್ದಾರಿಯುತವಾಗಿ, ಆದರೆ ಸರ್ವ ಸ್ವತಂತ್ರವಾಗಿ ಕ್ರಿಯಾಶೀಲರೂ ಗೌರವಾನ್ವಿತರೂ ಆಗಬಲ್ಲ ಬಹುಕೇಂದ್ರಿತ ಸಾಮಾಜಿಕ/ರಾಜಕೀಯ/ಸಾಂಸ್ಕೃತಿಕ ವ್ಯವಸ್ಥೆ/ನಾಡು.

ಆದರೆ ಬೃಹತ್ ಯೋಜನೆಗಳ ಭಾರದಲ್ಲಿ ಮನುಷ್ಯ ವಿವೇಕವೆಲ್ಲವೂ ಧೂಳೀಪಟವಾಗುವ ನಮ್ಮ ಜನವಿರೋಧಿ ಅರ್ಥನೀತಿ ಮಾತ್ರ "ಅಭಿವೃದ್ಧಿ" ಎಂಬ ಭ್ರಮೆಗೆ ಗಂಟುಬಿದ್ದಿದೆ. ಸ್ವತಂತ್ರ ಭಾರತದ ಎಲ್ಲ ಸರ್ಕಾರಗಳೂ, ಪಕ್ಷಬೇಧ ರಹಿತವಾಗಿ, ಇಡಿಯಾಗಿ ಸ್ವೀಕರಿಸಿರುವ ಭ್ರಮೆಯೂ ಅದೇ ಆಗಿದೆ. ಬಡವರ, ನಿರ್ಲಕ್ಷಿತರ ದುಃಸ್ವಪ್ನ ಕೂಡಾ ಈ "ಅಭಿವೃದ್ಧಿ"ಯೇ ಆಗಿದೆ ಎಂಬುದು ಈಗಂತೂ ಹಗಲು ಬೆಳಕಿನಷ್ಟು ಸ್ಪಷ್ಟವಾಗಿದೆ. "ಅಭಿವೃದ್ಧಿ" ಎಂಬುದು ಒಂದು ಮಂತ್ರವಲ್ಲ, ಅದೊಂದು ತಿರುಮಂತ್ರ. ಬೃಹತ್ ಕೈಗಾರಿಕೆಗಳನ್ನು, ಬೃಹತ್ ಅಣೆಕಟ್ಟುಗಳನ್ನು ನೆಹರೂ "ಆಧುನಿಕ ಭಾರತದ ದೇವಾಲಯಗಳು" ಎಂದು ಕರೆದರು. ಇಲ್ಲ ಸಲ್ಲದ ಜಾಗಗಳಲ್ಲಿ ದೇವಾಲಯಗಳನ್ನು ಕಟ್ಟುತ್ತೇವೆ ಎಂದು ಪಶುಗಳಂತೆ ಗರ್ಜಿಸುತ್ತಿರುವ ಪರಿವಾರ ಕೂಡಾ, 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೇನಂತೆ, ಜುಟ್ಟಿಗೆ ಕಮಲ ವಿರಲಿ' ಎಂದು ಅಣುಬಾಂಬು ಸ್ಫೋಟಿಸುವ ಉದ್ಯಮದಲ್ಲಿ ತೊಡಗಿದ್ದು ಇದೇ ಅಭಿವೃದ್ಧಿ ಎಂಬ ತಿರುಮಂತ್ರದ ಸಮಕಾಲೀನ ದುರಂತಮಯ ವಾಸ್ತವ.

ನರ್ಮದಾ ನದಿ ಭಾರತದ ಬಹುಮುಖ್ಯ ಜೀವನದಿಗಳಲ್ಲಿ ಒಂದು. ಅದು ಸಾಕಿ ಸಲಹುತ್ತಿರುವ ಜನ ಮತ್ತು ಜೀವನಕ್ರಮಗಳು ಅಸಂಖ್ಯಾತ. ಆದರೆ ನದಿ, ನೀರು, ನೆಲ, ಬೆಟ್ಟ, ಕಾಡು ಇವುಗಳೆಲ್ಲ ತನ್ನ ಸರ್ವತಂತ್ರ ಸ್ವತಂತ್ರ ಆಸ್ತಿ ಎಂದು ನಮ್ಮ ಸರ್ಕಾರಗಳು ಭಾವಿಸಿವೆ. ತನ್ನ ವಿಕಪಕ್ಷೀಯ ಆಸೆಗಳಿಗೆ ತಕ್ಕಂತೆ ಇವೆಲ್ಲವನ್ನೂ ಪರಭಾರೆ ಮಾಡುವ ಅನಿಯಂತ್ರಿತ ಹಕ್ಕು ಕೂಡಾ ತನ್ನದು ಎಂದು ಅವು ಹೇಳುತ್ತಿವೆ. ಬಹುರಾಷ್ಟ್ರೀಯ ಬಂಡವಾಳದ ತಾಳ ಕೂಡಾ ಅದೇ ಆಗಿದೆ. ಬಹುರಾಷ್ಟ್ರೀಯ ತಾಳಕ್ಕೆ ತಕ್ಕಂತೆ ತೂಕತಪ್ಪಿ ಕುಣಿಯುವುದು ನಮ್ಮ "ಅಭಿವೃದ್ಧಿ" ನೀತಿಯಾಗಿದೆ. ಜನರಿಂದಲೂ, ಸತ್ಯದಿಂದಲೂ ಸರ್ಕಾರಗಳು, ಅವುಗಳ ಅಭಿವೃದ್ಧಿ ಯೋಜನೆಗಳು ಸಾವಿರಾರು ಯೋಜನಗಳಷ್ಟು ದೂರದಲ್ಲಿ, ಬಹುರಾಷ್ಟ್ರೀಯ ಬಂಡವಾಳದ ಪದತಲದಲ್ಲಿ ಇವೆ.

1960 ರ ದಶಕದಲ್ಲಿ ಆರಂಭಗೊಂಡ ನರ್ಮದಾ ಕಣಿವೆ ಯೋಜನೆ **130** ರಷ್ಟು ದೊಡ್ಡ ಅಣೆಕಟ್ಟುಗಳು, ಹಾಗೂ ಒಟ್ಟಾರೆ **3200** ರಷ್ಟು ದೊಡ್ಡ-ಸಣ್ಣ ಅಣೆಕಟ್ಟುಗಳ ವಿಕಾರ ಯೋಜನೆಯನ್ನು ಹೊಂದಿದೆ. ನರ್ಮದಾ ನದಿ ಹರಿಯುವ ಮೂರು ರಾಜ್ಯಗಳನ್ನು (ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್) ಈ ಯೋಜನೆಗಳು ಆವರಿಸಿವೆ. ಇಷ್ಟು ಬೃಹತ್ತಾದ, ಇನ್ನೂ ಮುಂದುವರಿಯುತ್ತಲೇ ಇರುವ ಈ ಯೋಜನೆ ಸ್ವತಂತ್ರ ಭಾರತದ ಎಲ್ಲ ಅಭಿವೃದ್ಧಿ ಯೋಜನೆಗಳ ಹಿರಿಯಕ್ಕನಂತಿದೆ. ಈ ಯೋಜನೆಗಳ ಪರಿಣಾಮವಾಗಿ ಮುಳುಗಿ ಸಾಯುತ್ತಿರುವ ಕುಟುಂಬಗಳು ಹಾಗೂ ಜೀವನಕ್ರಮಗಳನ್ನು ಕಣ್ಣು ತೆರೆದು ನೋಡಿ ಎಂಬುದಷ್ಟೇ ಮೇಧಾ ಹಾಗೂ ನರ್ಮದಾ ಬಚಾವೋ ಆಂದೋಲನದ ಎರಡು ದಶಕಗಳ ದಿನಂಪ್ರತಿಯ ವಾದವಾಗಿದೆ. ಇದರ ಪರಿಣಾಮವಾಗಿ ಸತ್ಯವನ್ನು ಕಂಡು ಹಿಮ್ಮೆಟ್ಟಿ ವಿಶ್ವಬ್ಯಾಂಕ್ ಕೂಡಾ ಯೋಜನೆಯಿಂದ ಹಿಂದೆ ಸರಿದದ್ದಿದೆ. ಈ ಯೋಜನೆಯಿಂದ ಅತಂತ್ರಗೊಳ್ಳುವ ಜೀವನವನ್ನು ಮರುವಸತಿಗೆ ಒಳಪಡಿಸಿದ ಆರು ತಿಂಗಳ ಅನಂತರವಷ್ಟೇ ಯೋಜನೆಗಳು ಮುಂದುವರಿಯಬಹುದು ಎಂದು ನಮ್ಮ ಸರ್ವಶ್ರೇಷ್ಠ ನ್ಯಾಯಾಲಯ ಕೂಡಾ ಆದೇಶಿಸಿದೆ. ನ್ಯಾಯಾಲಯದ ಈ ಆನುಷಂಗಿಕ ಆದೇಶಕ್ಕೆ ಪ್ರತಿಯಾಗಿ, ಭೂಮಿ ಮಾತ್ರ ಕೊಟ್ಟರೆ ಸಾಕೇ ಎಂಬುದು ಕೇಳಬಹುದಾದ ಪ್ರಶ್ನೆ; ಬಿಡಿಗಾಸು ಕೊಟ್ಟರೂ ಸಾಕು ಎಂಬುದು ಸರ್ಕಾರಿ ಉತ್ತರ. ಆದರೆ ನಿರ್ವಸಿತರಾದವರ, ಆಗಲಿರುವವರ ಲೆಕ್ಕ ಸರ್ಕಾರದ ಬಳಿ ಇಲ್ಲ, ಅವರ ಮರುವಸತಿಗೆ ಭೂಮಿಯೂ ಇಲ್ಲ ಎಂದು ಸರ್ವಶ್ರೇಷ್ಠ ನ್ಯಾಯಾಲಯದೆದುರು ಅವು ಅಹವಾಲನ್ನು ಮಂಡಿಸಿವೆ. ಆದರೂ ಪುನರ್ವಸತಿ ಕಾರ್ಯ ತೃಪ್ತಿಕರವಾಗಿ ಮುಗಿದಿದೆ ಎಂಬ, ದಫ್ತರುಗಳಲ್ಲಿ ಸೃಷ್ಟಿಯಾದ, "ಸತ್ಯ"ವನ್ನು ಅವು ಹೇಳುತ್ತಿವೆ. ತಮ್ಮದೇ ನೆಲದಲ್ಲಿ ನಿರ್ವಸಿತರಾಗುವ ಕುಟುಂಬಗಳೇ ಅವರ ಜೀವನವೇ ಸರ್ಕಾರದ, ಅಭಿವೃದ್ಧಿಯ, ಕಲ್ಪನೆಗೆ ಹೊರಗಾದದ್ದು ಎಂಬುದು ಅಪ್ಪಟ ಸತ್ಯ. ಒಂದು ಅಂದಾಜಿನ ಪ್ರಕಾರ, ಸ್ವತಂತ್ರ ಭಾರತದ ಅಣೆಕಟ್ಟು ಯೋಜನೆಯೊಂದರಿಂದಲೇ ಇದುವರೆಗೆ ನಿರ್ವಸಿತರಾದ ಜನರ ಸಂಖ್ಯೆ ಕನಿಷ್ಠವೆಂದರೆ **50** ಮಿಲಿಯ. ಇದು ನಮ್ಮ ಅಭಿವೃದ್ಧಿ ನರಮೇಧದ ಒಂದು ಪಾಲು ಮಾತ್ರ.

ಲೋಕಾಯುಕ್ತ ನ್ಯಾಯಮೂರ್ತಿ ವೆಂಕಟಾಚಲರವರು ದಿನಂಪ್ರತಿ ತೋರಿಸಿಕೊಡುತ್ತಿರುವಂತೆ, ಜನರ ಹಾಗೂ ಸರ್ಕಾರದ ಹಣವನ್ನು ಕೊಳ್ಳೆ ಹೊಡೆದು ಕೊಬ್ಬಿರುವ ನಮ್ಮ ಅಧಿಕಾರಶಾಹಿ, ಹಾಗೂ ಈ ಅಧಿಕಾರಶಾಹಿಯ ಮನುಷ್ಯ ವಿರೋಧಿ ತಿಳುವಳಿಕೆಗಳೇ ನಮ್ಮ ಎಲ್ಲ ಸರ್ಕಾರಿ ಯೋಜನೆಗಳಿಗೆ ಆಧಾರ. ಹಾಗಾಗಿಯೇ, ಚಿಲ್ಲರೆ ಹಣವನ್ನು ಎದುರು ಸಿಕ್ಕ ಒಬ್ಬಿಬ್ಬರಿಗೆ ಹಂಚಿ ಪುನರ್ವಸತಿಯ ಕಾರ್ಯ ಸಂಪೂರ್ಣಗೊಂಡಿದೆ ಎಂಬ ಹಸಿಸುಳ್ಳನ್ನು ಹೇಳುತ್ತಾ, ಸರ್ವಶ್ರೇಷ್ಠ ನ್ಯಾಯಾಲಯದ ಆದೇಶವನ್ನು ತಿರಸ್ಕಾರ ಮಾಡುತ್ತಾ, ನರ್ಮದಾ ಯೋಜನೆಯ ಹಣದ ಪ್ರವಾಹದಲ್ಲಿ "ಅಭಿವೃದ್ಧಿ" ಪರ ಜನರು ತೇಲುತ್ತಿದ್ದಾರೆ. ಜನರು ಮತ್ತು ದೇಶ ಮುಳುಗಿ ಸಾಯುವುದಾದರೆ ಅಣೆಕಟ್ಟಿನ ನೀರಿನಲ್ಲೇ ಮುಳುಗಿ ಸಾಯಲಿ ಎಂಬುದು ಅವರ ವಾದವಾಗಿದೆ.

ಮೇಧಾ ಹೇಳುತ್ತಿರುವುದೇನು?

ಮೇಧಾ ಕೇಳುತ್ತಿರುವುದೇನು? ಎಷ್ಟು ಕಾಲದಿಂದ? ಯಾವ ಕ್ರಮದಲ್ಲಿ? ಎಂದು ಒಮ್ಮೆ ನಿಂತು ಯೋಚಿಸಿದರೆ, ಪ್ರಭುತ್ವ ಎಂಬ ಭಯೋತ್ಪಾದನೆ ಮತ್ತು ಅಭಿವೃದ್ಧಿ ಮೂಲಭೂತವಾದ ಎಂಬ ಹಿಂಸಾಚಾರವನ್ನೇ ಉಂಡು ಉಟ್ಟ ಸರ್ಕಾರಗಳ ಅಸತ್ಯ ಸ್ಪಷ್ಟಗೊಳ್ಳುತ್ತದೆ. "ಅಭಿವೃದ್ಧಿ" ಎಂಬ ಸರ್ಕಾರಿ ದುಃಸ್ವಪ್ನದೊಳಗೆ ಅಡಕವಾಗಿರುವ ಜನವಿರೋಧವನ್ನು ಆಕೆ ಎಡೆಬಿಡದಂತೆ ದಿನಂಪ್ರತಿ ಪ್ರಶ್ನಿಸುತ್ತಿರುವವಳು. ಮಾತಿಗೆ ಕವಡೆ ಕಿಮ್ಮತ್ತನ್ನೂ ಕೊಡದ ಜನರನ್ನು/ಪ್ರಭುತ್ವವನ್ನು ಅವರದೇ ಮಾತಿಗೆ ಆಕೆ ಎದುರು ಮಾಡುತ್ತಿರುವವಳು. ಒಂದೊಮ್ಮೆ, ಅವಳ ಪ್ರಶ್ನೆಗಳಲ್ಲಿ/ ಮಾತುಗಳಲ್ಲಿ ತುಂಬಿರುವ ಸತ್ಯವನ್ನು ವಿಶ್ವಬ್ಯಾಂಕ್ ಕೂಡಾ ಪರಿಗಣಿಸಿ, ತಾನೇ ಖಾತ್ರಿ ಪಡಿಸಿಕೊಂಡ ಭೀಕರ ವಾಸ್ತವದ ಕಾರಣವಾಗಿ, ನರ್ಮದಾ ಕಣಿವೆ ಯೋಜನೆಯಿಂದ

ಆದರೆ ಬೃಹತ್ ಯೋಜನೆಗಳ ಭಾರದಲ್ಲಿ ಮನುಷ್ಯ ವಿವೇಕವೆಲ್ಲವೂ ಧೂಳೀಪಟವಾಗುವ ನಮ್ಮ ಜನವಿರೋಧಿ ಅರ್ಥನೀತಿ ಮಾತ್ರ "ಅಭಿವೃದ್ಧಿ" ಎಂಬ ಭ್ರಮೆಗೆ ಗಂಟುಬಿದ್ದಿದೆ. ಸ್ವತಂತ್ರ ಭಾರತದ ಎಲ್ಲ ಸರ್ಕಾರಗಳೂ, ಪಕ್ಷಬೇಧ ರಹಿತವಾಗಿ, ಇಡಿಯಾಗಿ ಸ್ವೀಕರಿಸಿರುವ ಭ್ರಮೆಯೂ ಅದೇ ಆಗಿದೆ. ಬಡವರ, ನಿರ್ಲಕ್ಷಿತರ ದುಸ್ವಪ್ನ ಕೂಡಾ ಈ "ಅಭಿವೃದ್ಧಿ"ಯೇ ಆಗಿದೆ ಎಂಬುದು ಈಗಂತೂ ಹಗಲು ಬೆಳಕಿನಷ್ಟು ಸ್ಪಷ್ಟವಾಗಿದೆ.

ಹೇಸಿಗೆ ಮೆಟ್ಟಿ ವೈಮನಸ್ಸುಗಳನ್ನು ಹೊಲಸು ಮಾಡಿಕೊಂಡವರಂತೆ, ತೊಳೆದುಕೊಳ್ಳಲು ಬೇರೆ ನೀರು ಹುಡುಕಿ ಕಾಲ್ತೆಗೆಯಿತು.

1980 ರ ದಶಕದಿಂದ ಈ ದಿನದ ತನಕವೂ ಪ್ರತಿದಿನ ಮೇಧಾ ತನ್ನ ಬೆಂಬಲಿಗರಾದ ನಿರ್ವಸಿತಗೊಂಡ ನಿರ್ವಸಿತಗೊಳ್ಳಲಿರುವ ಆದಿವಾಸಿ ಕುಟುಂಬಗಳು, ಹಾಗೂ ಜನಪರ ಕಾರ್ಯಕರ್ತರ ಜೊತೆಗೆ ಅಹಿಂಸಾತ್ಮಕ ಹೋರಾಟವನ್ನು ನಡೆಸಿಕೊಂಡು ಬಂದಿದ್ದಾಳೆ: ಮುಳುಗುತ್ತಿರುವ ಮನೆಮಾರುಗಳಲ್ಲಿ ತಾನೂ ಮುಳುಗುತ್ತಾ, ಸಾಯುತ್ತಿರುವ ನೋಯುತ್ತಿರುವ ಜನರ ಜೊತೆ ತಾನೂ ನೋಯುತ್ತಾ.

ಇದು ನಮಗ್ಯಾರಿಗೂ ಸುದ್ದಿಯೇ ಆಗದಂತೆ ನಮ್ಮ ಮಾಹಿತಿ ಕ್ರಾಂತಿ ನೋಡಿಕೊಂಡಿದ್ದಾಗಲೂ ಆಕೆಯ ನೈತಿಕತೆಯೇನೂ ಕುಂದಲಿಲ್ಲ, ಹೋರಾಟ ಕಳೆ ಕಳೆದುಕೊಳ್ಳಲಿಲ್ಲ.

ಹಿಂಸೆ ನಮ್ಮ ಕಾಲದ ಸರ್ವಮಾನ್ಯ ಭಾಷೆ. ಭಯೋತ್ಪಾದಕರಿಗೂ ಅಷ್ಟೇ. ಸರ್ಕಾರಗಳಿಗೂ ಅಷ್ಟೇ. ಎರಡು ದಶಕಗಳಿಗೂ ಮಿಕ್ಕಿ, ನಮ್ಮೆಲ್ಲರ ನಡುವೆ ಅಟ್ಟಹಾಸ ಗೈಯುತ್ತಿರುವ ಹಿಂಸಾಚಾರಗಳ ನಡುವೆಯೇ, ಅಹಿಂಸೆ ಮತ್ತು ಸತ್ಯಗಳ ಪ್ರತಿಪಾದಕಿಯಾಗಿ ಉಳಿದಿರುವುದೇ ಮೇಧಾಳ ದೊಡ್ಡ ಸಾಧನೆ. ಅದನ್ನು ಗೌರವಿಸುವುದು, ಆಕೆಯ ಮಾತನ್ನು ಕೇಳಿಸಿಕೊಳ್ಳುವುದು ನಮ್ಮ ಕರ್ತವ್ಯ ಮಾತ್ರವಲ್ಲ, ನಮ್ಮ ಜೀವ ಹಾಗೂ ಮಾನ ಉಳಿಸಿಕೊಳ್ಳುವ ಕ್ರಮ ಕೂಡಾ. ಅದು ಗಾಂಧಿಗೆ ನಾವು ತೋರಬಹುದಾದ ಗೌರವ ಕೂಡಾ ಹೌದು.

–ಎಚ್. ಪಟ್ಟಾಭಿರಾಮ ಸೋಮಯಾಜಿ

ದೇವೇಗೌಡರು ಒಂದು ರೀತೀಲಿ ಮಹಾತ್ಮಾಗಾಂಧಿ ಇದ್ದಂಗೆ

ದೇವೇಗೌಡ-ಕುಮಾರಸ್ವಾಮಿ ಪ್ರಶಸ್ತಿ

ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಈ ಸಾಲಿನಲ್ಲಿ ಯಾರಿಗೆ ಪ್ರಧಾನ ಮಾಡಬೇಕು ಎಂಬುದನ್ನು ಕುರಿತಂತೆ ರಾಜಕಾರಣಿಗಳಲ್ಲಿ ಜಿಜ್ಞಾಸೆ ಮೂಡಿರುವಂತಿದೆ. ಸಿದ್ಧರಾಮಯ್ಯ ಬಣ ಈ ಪ್ರಶಸ್ತಿಗೆ ದೇವೇಗೌಡರೇ ಅರ್ಹರೆಂದು ಈ ಹಿಂದೆಯೇ ತಿಳಿಸಿದ್ದರು. ಈಗ ಉಗ್ರಪ್ಪನವರು ದೇವೇಗೌಡ-ಕುಮಾರಸ್ವಾಮಿ ಇಬ್ಬರೂ ಅಧಿಕಾರ ಗ್ರಹಣ ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿರುವುದರಿಂದ ಈ ಈರ್ವರು ಮಹನೀಯರೂ ಅದಕ್ಕೆ ಅರ್ಹರೆಂದು ಪ್ರತಿಪಾದಿಸಿದ್ದಾರೆ. ಇದರಲ್ಲಿ ತೊಡಕು ಇರುವಂತಿದೆ. ಫಾಲ್ಕೆ ಪ್ರಶಸ್ತಿ ಸಿನಿಮಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಇದನ್ನು ರಾಜಕೀಯ ಕ್ಷೇತ್ರಕ್ಕೂ ಅನ್ವಯಿಸಬಹುದೆ ಎಂಬುದು ಮೊದಲ ತೊಡಕಾದರೆ, ಹಾಗೆ ಅನ್ವಯಿಸಿದ್ದೇ ಆದರೆ ಎಲ್ಲ ಸಾಲಿನ ಪ್ರಶಸ್ತಿಗಳೂ ರಾಜಕೀಯ ಧುರೀಣರಿಗೇ ದೊರೆತು ಸಿನಿಮಾ ಕ್ಷೇತ್ರದ ಜನರಿಗೆ ಅದು ಕನಸಿನ ಗಂಟು ಆಗುವ ಸಂಭವವೇ ಹೆಚ್ಚು ಇರುತ್ತದೆ ಎನ್ನುವುದು ಇನ್ನೊಂದು ತೊಡಕಾಗಿರುತ್ತದೆ. ಕೆಲವರ ಸೂಚನೆಯಂತೆ ಇನ್ನೊಂದು ಪ್ರಶಸ್ತಿಯನ್ನು "ದೇವೇಗೌಡ ಕುಮಾರಸ್ವಾಮಿ ಪ್ರಶಸ್ತಿ" ಎಂಬ ಹೆಸರಿನಲ್ಲಿ ಪ್ರತಿಷ್ಠಾಪಿಸಿ ರಾಜಕೀಯ ರಂಗದ ಅದ್ವಿತೀಯ ಸಾಧನೆಗೆ ಫಾಲ್ಕೆ ಪ್ರಶಸ್ತಿಯನ್ನೂ, ಸಿನಿಮಾ ರಂಗದವರಿಗೆ ಈ ಪ್ರಶಸ್ತಿಯನ್ನೂ ಪ್ರಧಾನ ಮಾಡಬಹುದೆಂಬುದು ಪರಿಶೀಲನಾರ್ಹವಾಗಿದೆ!

ದೇವೇಗೌಡ-ಕುಮಾರಸ್ವಾಮಿ ಪ್ರಶಸ್ತಿ ಪ್ರತಿಷ್ಠಾಪನೆಗೆ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅವರಿಗೆ ಇತ್ತೀಚಿನ ಬೆಳವಣಿಗೆಗಳು ಸರಿಯಾಗಿ ಗಮನಕ್ಕೆ ಬಾರದಿರಬಹುದು. ಸ್ವಾಮಿ ಬೆಂಗಳೂರು ಹತ್ತಿ ಉರಿಯಿತಲ್ಲ, ರಾಜ್ಯದಲ್ಲಿ ಸರ್ಕಾರವೇ ಇಲ್ಲ ಎನ್ನುವ ಅನುಮಾನ ಬಂದಿತಲ್ಲ.... ಅದೇ ರಾಜ್‌ಕುಮಾರ್ ನಿಧನರಾದ ದಿನ, ನಂತರದ ದಿನ... ಆ ವಾರದ ಶನಿವಾರ, ಮುಖ್ಯಮಂತ್ರಿಯವರಿಂದ ಜನತಾ ದರ್ಶನ ಇತ್ತಲ್ಲ... ಅಲ್ಲಿ ಜನರ ನೂಕು ನುಗ್ಗಲು ಸಹಜವೇ. ಆ ಗೊಂದಲದಲ್ಲೂ ಕೆಲವರು ಬಂದದ್ದು ಸುಮ್ಮನೆ ಮುಖ್ಯಮಂತ್ರಿಯವರನ್ನು ನೋಡಿ ಹೋಗಲು! ಕೆಲವು ಯುವಕರು ಮುಖ್ಯಮಂತ್ರಿಯವರ ಆಟೋಗ್ರಾಫ್ ಅನ್ನು ತಮ್ಮ ಕೈಮೇಲೆ ಪಡೆದರಂತೆ! ಹಿರಿಯರನೇಕರು ಒಳ್ಳೆಯ ಆಡಳಿತ ನೀಡುತ್ತಿದ್ದೀರಿ, ಇದನ್ನು ಮುಂದುವರೆಸಿ ಎಂದು ಆಶೀರ್ವಾದ ಮಾಡಿದರಂತೆ! ಆಡಳಿತ ಯಂತ್ರವೇ ಕುಸಿದು ಬಿದ್ದಿದ್ದ ವಾರದಲ್ಲಿ ಈ ಮಾತು ಬಂದಿದೆ ಅಂದರೆ.... ಎಂತಹ ಸ್ಟೇಜ್ ಮೇನೇಜು ಏನು ಕಥೆ! ಇದು ನಟನಾ ಸಾಮರ್ಥ್ಯ ಅಲ್ಲದಿದ್ದರೆ ಮತ್ತಾವುದು?

ಇನ್ಫೋಸಿಸ್‌ನ ನಾರಾಯಣಮೂರ್ತಿಯಂತಹ ನಾರಾಯಣಮೂರ್ತಿಯೇ ಕುಮಾರಸ್ವಾಮಿಯವರನ್ನು ಡೈನಾಮಿಕ್ ಚೀಫ್ ಮಿನಿಸ್ಟರ್ ಅನ್ನಬೇಕಾದರೆ ಹುಡುಗಾಟದ ಮಾತಲ್ಲ, ಬೆಂಗಳೂರಿನ ಹೊರವಲಯದಲ್ಲಿ 850 ಎಕರೆ ಜಮೀನನ್ನು ಅವರಿಗೆ ಸರ್ಕಾರದ ಕೊಡುಗೆಯಾಗಿ ನೀಡಿದ ಮೇಲೆ ಈ ಮಾತು ಅವರ ಬಾಯಿಂದ ಹೊರಬಿತ್ತು, ಮೊದಲೇ ಯಾಕೆ ಈ ಮಾತು ಹೇಳಲಿಲ್ಲ ಅಂತ ಕೊಂಕು ಮಾತನಾಡುವವರೂ ಇದ್ದಾರೆ ಅನ್ನಿ. 850 ಎಕರೆ ಡೈನಾಮಿಕ್ಸ್ ಅಂತ ಕರೆವವರು ಕರೆದುಕೊಳ್ಳಲಿ. ಅಂತೂ ಯುವ ಮುಖ್ಯಮಂತ್ರಿ ಡೈನಾಮಿಕ್ ಅಂತ ನಾರಾಯಣಮೂರ್ತಿ ಬಾಯಿಂದ ಬಂತಲ್ಲ.... ಶಂಖದಿಂದಲೇ ಬಂದ ಮೇಲೆ ಅದು ತೀರ್ಥನೇ ಇರಬೇಕು ಅಲ್ಲವೆ.

ಈ 850 ಎಕರೆ ಡೈನಾಮಿಕ್‌ಗೆ ಪಾಪ ದೇವೇಗೌಡರ ಹೆಸರನ್ನೂ ಎಳೆದು ತರುತ್ತಾರೆ ನೋಡಿ ಈ ಹಲ್ಕಾ ಜನ. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಇದೇ ಜಮೀನನ್ನು ಸರ್ಕಾರ ಇನ್ಫೋಸಿಸ್ ಸಂಸ್ಥೆಗೆ ಮಂಜೂರು ಮಾಡಲು ಅಡ್ಡ ಬಂದ ದೇವೇಗೌಡರು ಈಗ ಯಾಕೆ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ ಅಂತ ಹಲ್ಕಾನಗೆ



ಬೀರ್‍ತಾರೆ. ಆಗಲೇ ಮಂಜೂರು ಮಾಡಿದ್ದರೆ ಕುಮಾರಸ್ವಾಮಿ ಡೈನಾಮಿಕ್ ಚೀಫ್ ಮಿನಿಸ್ಟರ್ ಅನ್ನೋ ತೀರ್ಥ ಬೀಳುತ್ತಿತ್ತೆ ಅಂತಲೂ ಪ್ರಶ್ನಿಸುತ್ತಾರೆ. ಅಲ್ಲ ಸ್ವಾಮಿ, ನಂ ದೇವೇಗೌಡರು ಒಂದು ರೀತೀಲಿ ಮಹಾತ್ಮಾ ಗಾಂಧಿ ಇದ್ದಂಗೆ. ಆ ಮಹಾತ್ಮ ಒಂದೇ ವಿಷಯದ ಬಗ್ಗೆ ಬೇರೆ ಬೇರೆ ಸಂದರ್ಭಗಳಲ್ಲಿ ಹೇಗೆ ವಿಭಿನ್ನ ಹೇಳಿಕೆ ನೀಡಿದ್ದರು ಅಂತ ಇತ್ತೀಚೆಗೆ ಎಲ್ಲೋ ಓದಿದ ನೆನಪು. ಹಂಗೇ ದೇವೇಗೌಡರಿಗೆ ಧರ್ಮಸಿಂಗ್ 850 ಎಕರೆ ಭೂಮಿಯನ್ನು ಐಟಿ ಕಂಪನಿಗೆ ನೀಡುವುದು ತಪ್ಪು ಅಂತ ಆಗ ಅನ್ನಿಸಿತ್ತು, ತೋಳಿನ ಮೇಲಕ್ಕೆ ಜುಬ್ಬ ಎಳೆದುಕೊಂಡು, ಮೇಜು ಕುಟ್ಟಿ ತಮ್ಮ ಆತ್ಮಸಾಕ್ಷಿ ಹೇಳಿದ ಹಾಗೆ ಬೇಡ ಅಂದರು. ಬಡ ರೈತರ ಜಮೀನನ್ನು ಶ್ರೀಮಂತರು ಕಬಳಿಸುತ್ತಾರಲ್ಲ ಅಂತ ಕಂಬನಿಗರೆದರು. ಯಾಕೆ? ಅವರ ಆತ್ಮಸಾಕ್ಷಿ ಹಾಗೆ ಹೇಳಿಸಿತು. ಈಗ ಅದೇ ಆತ್ಮ ಸಾಕ್ಷಿ ಇನ್ಫೋಸಿಸ್‌ಗೆ ಭೂಮಿ ನೀಡುವುದು ಸರಿಯಾದ ಕ್ರಮ ಅಂತ ಸಾರಿ ಹೇಳುತ್ತಿದೆ. ಏನು ಮಾಡಬೇಕು ಪಾಪ ದೇವೇಗೌಡರು? ತಮ್ಮ ಆತ್ಮಸಾಕ್ಷಿ ಹೇಳಿದಂತೆ ನಡೆದುಕೊಂಡರು!

ಅಣಕ

ಇದೆಲ್ಲ ನಾಟಕ ಅಂತಾರೆ ಕೆಲವರು. ಅದಕ್ಕೆ ಅಲ್ಲವೆ ಸ್ವಾಮಿ ದೇವೇಗೌಡ-ಕುಮಾರಸ್ವಾಮಿ ಪ್ರಶಸ್ತಿ ಪ್ರತಿಷ್ಠಾಪಿಸಿ ಅಂತ ಸಲಹೆ ನೀಡಿರೋದು!

ತಮ್ಮ ಹೆಸರಿನ ಪ್ರಶಸ್ತಿಯನ್ನು ತಾವೇ ಪಡೆದುಕೊಳ್ಳುವುದು ನಾಚಿಕೆಗೇಡಿನ ಸಂಗತಿ ಎಂದು ರಾಜಕಾರಣಿಗಳ ಆತ್ಮ ಪರಿತಪಿಸುವುದಿಲ್ಲವಾದರೂ ಜನರು ಗೇಲಿ ಮಾಡಿಯಾರು, ಅವರ ಅಪಹಾಸ್ಯಕ್ಕೆ ಗುರಿಯಾದೇವು ಎಂಬ ಆತಂಕ ಅವರನ್ನು ಕಾಡುವುದರಿಂದ ಯಾಕೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಅವರಿಗೆ ಶಿಫಾರಸ್ಸು ಮಾಡಲಾಗಿದೆ ಎಂಬುದು ಜಾಣ ಜಾಣೆಯರಾದ ವಾಚಕರ ಮಹಾಶಯರಿಗೆ ಅರ್ಥವಾಗಿದೆ ಎಂದು ಭಾವಿಸಲಾಗಿದೆ. ಈ ವರ್ಷದ ಪ್ರಶಸ್ತಿಯನ್ನು ಅಪ್ಪನಿಗೋ ಅಥವಾ ಅಪ್ಪ-ಮಗ ಇಬ್ಬರಿಗೂ ಹಂಚಿ ಹೇಗೋ ಸಮಸ್ಯೆ ಬಗೆಹರಿಸಬಹುದಾದರೂ ಮುಂದಿನ ವರ್ಷಕ್ಕೆ ಯಾರು ಈ ಪ್ರಶಸ್ತಿಗೆ ಅರ್ಹರು ಎಂಬ ಪ್ರಶ್ನೆ ಎದುರಾಗಬಹುದು. ಪಿ.ಜಿ.ಆರ್. ಸಿಂಧ್ಯ? ಸಾರಾಸಗಟು ಎತ್ತಿ ಒಗೀಬಹುದು. ಮನಸ್ಸಿನಲ್ಲಿದ್ದದ್ದನ್ನೆಲ್ಲ ಬೀದಿಗೆ ಹಾಕ್ತಾರೆ. ಎಂ.ಪಿ. ಪ್ರಕಾಶು? ಆಗಬಹುದಿತ್ತೇನೋ, ಆದರೆ ಪಾಪ ಜಂಗಮರು ಸಿಕ್ಕಿದರೆ ಸಾಕು ತನ್ನ ಮನಸ್ಸಿನಲ್ಲಿರೋದನ್ನೆಲ್ಲ ಕಕ್ಕಿ ಬಿಡುತ್ತಂತೆ. ಪ್ರಕಾಶ್ ಮೈನಸ್ ಜಂಗಮ ಪರಿಶೀಲಿಸಬಹುದು. ಸಿ.ಎಂ. ಇಬ್ರಾಹಿಮ್ಮು? ಪರಿಶೀಲಿಸೋಣ ಅಂದರೆ ಇದು ಫಾಲ್ಕೆ ಪ್ರಶಸ್ತಿ, ಬೃಹನ್ನಳೆ ಪ್ರಶಸ್ತಿ ಅಲ್ಲ, ಉತ್ತರ ಕುಮಾರನದ್ದೂ ಅಲ್ಲ!

ಏನ್ರಿ ಇದು ಅಂತ ಯಾರೋ ಗದರಿಸಿದ ಹಾಗಾಯಿತು. ನೋಡಿದರೆ ನಮ್ಮ ಭಾರತೀಯ ಜನತಾಪಕ್ಷದ ಹುಡುಗರು. ಪಾಪ ಅವರ ತಪ್ಪಲ್ಲ, ಹೊಡಿ ಬಡಿ ಕಡಿ ಸಂಸ್ಕೃತೀಲಿ ಬೆಳೆದು ಬಂದಿರೋರು. ಸ್ವಭಾವನೇ ಒರಟು. ಫಾಲ್ಕೆ ಪ್ರಶಸ್ತಿಗೆ ಕೇವಲ ಜನತಾದಳದವರನ್ನೇ ಪರಿಗಣನೆಗೆ ತೆಗೆದುಕೊಳ್ತಾ ಇದೀರಲ್ಲ ಅನ್ನೋದು ಅವರ ಆಕ್ಷೇಪಣೆ. ಭೀಷ್ಮನಂತಹ ವಾಜಪೇಯಿ ಇಲ್ಲವೆ ಅನ್ನುವುದು ಅವರ ಪ್ರಶ್ನೆ. ಇದಾರೆ ಗೆಳೆಯರೆ, ಇದಾರೆ. ಜನ ಸಾಮಾನ್ಯರಿಗೆ ವಿರೋಧವಾದರೂ ಅವರ ಮೆಚ್ಚುಗೆಗೆ ಪಾತ್ರನಾಗಬೇಕಾದರೆ ಸಾಮಾನ್ಯರಿಂದ ಸಾಧ್ಯವೆ? ಅವರಂತಹ ಅದ್ಭುತ ನಟ ಬೇರೊಬ್ಬರಿಲ್ಲ, ಆದರೆ ಇದು ರಾಜ್ಯ ರಾಜಕಾರಣಿಗಳಿಗೆ ಸೀಮಿತ ಆಗಿರುವುದರಿಂದ ಅವರನ್ನು ಪರಿಗಣಿಸಲಾಗಿಲ್ಲ, ಬಿ.ಎಸ್. ಯಡಿಯೂರಪ್ಪ ಪರಿಗಣಿಸಬಹುದಿತ್ತು, ಆದರೇನು ಮಾಡುತ್ತೀರಿ, ಅವರು ಮಾತೆತ್ತಿದರೆ 'ನಾನು ಅಪಚಾರ ಮಾಡಿದ್ದರೆ ನನ್ನ ವಂಶ ನಿರ್ವಂಶ ಆಗಲಿ' ಅನ್ನುತ್ತಾರೆ.

ಇದು ನಟರಿಗೆ ಒಪ್ಪುವ ಅಭಿನಯ ಅಲ್ಲ

ಸಿನಿಮಾ ನಟ ಕಂ ರಾಜಕಾರಣಿಯಾದ ಅಂಬರೀಷಣ್ಣ... ಯಾಕ್ರೀ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಅನ್ನೋದು... ಅಂಬರೀಷ್ ಅಭಿಮಾನಿ ಕಾಂಗ್ರೆಸ್ಸಿನವರ ಪ್ರಶ್ನೆ... ಅಕಡೆ ಶ್ರೇಷ್ಠ ನಟನೂ ಅಲ್ಲದ ಈ ಕಡೆ... ಉತ್ತಮ ರಾಜಕಾರಣಿಯೂ ಆಗದ ನ... ಅಂಬರೀಸಣ್ಣೋರು ಸಿನಿಮಾದಲ್ಲಿ ರಾಜಕೀಯ... ಮಾಡುತ್ತಾರೆ, ರಾಜಕೀಯದಲ್ಲಿ ನಟನೆ... ಮಾಡಲು ಪ್ರಯತ್ನಿಸುತ್ತಾರೆ. ಇಂತಹ... ಎಡಬಿಡಂಗಿಗಳಿಗೆ ಬೇರೆ ಪ್ರಶಸ್ತಿ ಯೋಚಿಸ... ಬಹುದೆ ಪರಂತು ಫಾಲ್ಕೆ ಪ್ರಶಸ್ತಿಯಲ್ಲ

ಬೆಹತರೀನ್ ಶಾಟ್...

ನೀವು ಕ್ರಿಕೆಟ್ ಪ್ರೇಮಿಗಳಾಗಿದ್ದರೆ ವೀಕ್ಷಕ ವಿವರಣೆ... ಕೊಡುವವರು 'ಬೆಹತರೀನ್ ಶಾಟ್ ಲೇಕಿನ್ ಬಾಲ್... ಸೀದಾ ಫೀಲ್ಡರ್ ಕೆ ಹಾತ್ ಪರ್' ಅಂತ ಆಗಾಗ್ಗೆ... ಹೇಳುವುದನ್ನ ಕೇಳಿರಬಹುದು. ಅಲ್ಲಾ ಕ್ಯಾಚ್ ಸಿಗುವಂತೆ... ಕ್ರಿಕೆಟ್ ಚೆಂಡು ಭಾರಿಸಿದ ಧಾಂಡಿಗ ಶಾಟು ಅದ್ಹೇಗೆ... ಬೆಹತರೀನ್ ಆಗಲು ಸಾಧ್ಯ ಅಲ್ಲವಾ. ಈಗ ಯಾಕೆ ಈ... ಮಾತು ಅಂದರೆ ದೇವೇಗೌಡರು ಇತ್ತೀಚೆಗೆ ತಮ್ಮ... ಪಕ್ಷಕ್ಕೆ ಅಸ್ಪೃಶ್ಯರು ಅಂತ ಹೇಳುತ್ತಿದ್ದ ಶಾಸಕರನ್ನು ಕರೆಸಿ... ಮನೆತುಂಬಿಸಿಕೊಂಡರಲ್ಲ... ಅದರ ಸ್ಪಷ್ಟನೆಗೆ ಅವರು... ಹೇಳಿದ ಮಾತುಗಳು... ಪಕ್ಷ ಉಳಿಸಲು ಇವರೆಲ್ಲ... ಪ್ರಯತ್ನಿಸಿದರು; ನನಗೆ ಪಕ್ಷ ಮುಖ್ಯ ; ಅವರ ಮೇಲಿನ... ಶಿಸ್ತು ಕ್ರಮ ಜರುಗಿಸೋ ಕೆಲಸ ಶಿಸ್ತು ಸಮಿತಿಯದ್ದು... ನನಗೂ ಅದಕ್ಕೂ ಯಾವುದೇ ಸಂಬಂಧ ಇಲ್ಲ....' ಹೀಗೆ ಅಸಂಬದ್ಧ ನಾಟಕದಲ್ಲಿ ಏಕ ಪಾತ್ರಾಭಿನಯ... ಮಾಡಿವರಲ್ಲ.... ಅದನ್ನ ಕೇಳಿದರೆ 'ಬೆಹತರೀನ್ ಶಾಟ್....' ನೆನಪು ಬರುತ್ತಿದೆಯಲ್ಲವೆ?

ಭಾರತೀಯ ಜನತಾಪಕ್ಷದ ರಾಜ್ಯಾಧ್ಯಕ್ಷರಿಗೆ ನಿಮ್ಮ... ಪಕ್ಷದವರು ಸಮ್ಮಿಶ್ರ ಸರ್ಕಾರಕ್ಕೆ, ಅದರ ಕಾರ್ಯಕ್ರಮಗಳಿಗೆ... ಬೆಂಬಲ ನೀಡುತ್ತಿರುವುದು ಸಂತೋಷದಾಯಕ ಸಂಗತಿ... ಅದನ್ನೆ ಮುಂದುವರಿಸಿ ಎಂಬರ್ಥ ಬರುವ ಪತ್ರ... ರವಾನಿಸಿದ್ದು, ಅವರೇ ಹೇಳಿದಂತೆ 'ಚಕ್ರವ್ಯೂಹ'ದಲ್ಲಿ... ಸಿಕ್ಕಿರುವ ತಮ್ಮ ಹೆಮ್ಮೆಯ ಪುತ್ರನಿಗೆ ಮುಂದೆ ಯಾವುದೇ... ತೊಂದರೆ ಆಗಬಾರದು ಎಂಬ ದೃಷ್ಟಿಯಿಂದ ಎಂಬುದು... ಸರಿ. ಇಷ್ಟೆಲ್ಲ ಫಜೀತಿ ಪಡುವ ಬದಲಿಗೆ ನಾನು, ನನ್ನ... ಪಕ್ಷ ಭಾರತೀಯ ಜನತಾ ಪಕ್ಷದ ಸಿದ್ಧಾಂತವನ್ನು ಒಪ್ಪಿಕೊಂಡಿ... ದ್ದೇವೆ ಎಂದರೆ ಆಗುತ್ತಿತ್ತು. ಜನರ ಗೊಂದಲವಾದರೂ... ನಿವಾರಣೆಯಾಗುತ್ತಿತ್ತು.


ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ... ಅನ್ನುವ ಸಂಗತಿ ಇದಾಗಿದ್ದರೆ ಈ ಗೊಂದಲದ ಸ್ಪಷ್ಟನೆಗೆ... ಜಾತ್ಯತೀತ (!) ಜನತಾದಳ ರಾಜ್ಯ ಅಧ್ಯಕ್ಷರಾದ ಎಂ.ಪಿ... ಪ್ರಕಾಶ್ ಅವರನ್ನ ಬಿಡಬೇಕಾಗಿತ್ತು, ಅವರು ತತ್ವಜ್ಞಾನಿಯಂತೆ... ಹಲವಾರು ದಾರ್ಶನಿಕರ ಹೇಳಿಕೆಗಳ ಉದಾಹರಣೆ ನೀಡಿ... ಜನರ ಮನಸ್ಸಿನಲ್ಲಿ ಮತ್ತಷ್ಟು ಗೊಂದಲ ಮೂಡಿಸಿ... ಇಡೀ ರಾಜ್ಯವನ್ನು ಗೊಂದಲಾಪುರ ಮಾಡುತ್ತಿದ್ದುದರಲ್ಲಿ... ಸಂಶಯ ಇಲ್ಲ! ಆಗ ಇಡೀ ಸಮರ್ಥನೆ 'ಬೆಹತರೀನ್ ಶಾಟ್ ಲೇಕಿನ್....' ಆಗುತ್ತಿತ್ತು.

ಆಹ, ಎಂತಹ ಅಸಂಗತ ನಾಟಕ!

-ಎಚ್.ಎಲ್. ಕೇಶವಮೂರ್ತಿ

ನಾಲಾಯಕ್ ಸರ್ಕಾರಕ್ಕೆ ಧಿಕ್ಕಾರ


ಏಪ್ರಿಲ್ 26 ರ 'ಸಂಚಿಕೆಯಲ್ಲಿ' ನಾಲಾಯಕ್ ಮುಖ್ಯಮಂತ್ರಿ ವರದಿಯು ಪಡ್ಡೆ ಹುಡುಗನ ಆಡಳಿತ ವೈಖರಿಯನ್ನು ಬಿಚ್ಚಿಟ್ಟಿದೆ. ಇವನು ತನ್ನ ತಪ್ಪು ಮುಚ್ಚಿಡಲು ರಾಜ್ ಅಂತ್ಯ ಸಂಸ್ಕಾರದ ಹಿಂದೆ ಪಿತೂರಿ ಇದೆ ಎಂದೆಲ್ಲಾ ಬೊಬ್ಬೆ ಹಾಕುತ್ತಿರುವುದು ಹಾಸ್ಯಾಸ್ಪದವಾಗಿದೆ.



ಮಹಾನ್ ಮಾನವತಾವಾದಿಯಾಗಿದ್ದ ರಾಜ್‌ರವರ ಅಂತ್ಯಕ್ರಿಯೆಯನ್ನೂ ಸುಗಮವಾಗಿ ನಡೆಸಲಾಗದ ಈ ನಾಲಾಯಕ್ ಸರ್ಕಾರಕ್ಕೆ ಧಿಕ್ಕಾರವಿರಲಿ.

ಯಡ್ಡಿ ಕುಮ್ಮಿಯ ಈ ಜೋಡಿ ಕರ್ನಾಟಕಕ್ಕಂಟಿದ ಮಹಾನ್ ಶನಿಪೀಡೆ. ಹಾಗೇ ಸಂಪಾದಕೀಯ ಬರಹ ಬಹಳ ಚೆನ್ನಾಗಿ ಮೂಡಿಬಂದಿದೆ.

-ಸ. ಶರಣಪ್ಪ ಪಾಟೀಲ, ಯಲಬುರ್ಗಾ



ಏಪ್ರಿಲ್ 26 ರ ಲಂಕೇಶ್ ಸಂಚಿಕೆಯಲ್ಲಿ 'ಛೇ...' ಎಂಬ ಉದ್ಗಾರದೊಂದಿಗೆ ಡಾ. ರಾಜ್‌ರವರ ಚಿತ್ರವನ್ನು ಮುಖಪುಟದಲ್ಲಿ ನೋಡಿ ಮನಸ್ಸಿಗೆ ತುಂಬಾ ನೋವಾಯಿತು. ಪ್ರತಿಯೊಬ್ಬ ಕನ್ನಡಿಗರೂ ಈ ಉದ್ಗಾರವನ್ನು ಬಳಸಿದ್ದಾರೆ. ರಾಜ್ ಕೂಡ 'ಛೆ' ಅಂದಿದ್ದರೆ ಆಶ್ಚರ್ಯವಿಲ್ಲ,

ಈಗಲೂ ಡಾ. ರಾಜ್‌ರವರು ಸತ್ತಿದ್ದಾರೆ ಎಂದರೆ ನಂಬಲಾಗುತ್ತಿಲ್ಲ, ಏನು ಮಾಡುವುದು, ಹುಟ್ಟಿದ ಪ್ರತಿಯೊಬ್ಬರೂ ಸಾವಿನತ್ತ ಮುಖ ಮಾಡಲೇಬೇಕು. ಆದರೆ ಆ ಹುಟ್ಟು-ಸಾವು ಎರಡರ ನಡುವೆ ನಾವು ಹೇಗೆ ಬದುಕಿದೆವು, ಏನು ಮಾಡಿದೆವು ಎಂಬುದು ಮುಖ್ಯವಾಗುತ್ತದೆ.ಡಾ. ರಾಜ್ ತಮ್ಮ ಅಭಿನಯ. ಮತ್ತು ಸಂಗೀತದೊಂದಿಗೆ ಸರಳತೆ ಮತ್ತು ಸಜ್ಜನಿಕೆಯನ್ನೂ ತಮ್ಮ ಬದುಕಿನುದ್ದಕ್ಕೂ ಮೈಗೂಡಿಸಿಕೊಂಡು ಇತರರಿಗೆ ಮಾದರಿಯಾದರು. ಅವರು ಮನಸ್ಸು ಮಾಡಿದ್ದರೆ ರಾಜಕೀಯದಲ್ಲೂ ಮಿಂಚಬಹುದಿತ್ತು, ಆದರೆ ಇದರಿಂದ ದೂರವಿದ್ದುಕೊಂಡೇ ಪ್ರತಿಯೊಬ್ಬ ಕನ್ನಡಿಗರ ಮನ-ಮನೆಯಲ್ಲಿ ಶಾಶ್ವತ ಸ್ಥಾನ ಕಂಡುಕೊಂಡಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

-ಕಾಳೀಹುಂಡಿ ಶಿವಕುಮಾರ್, ಮೈಸೂರು

ಹೊಗಳಿಕೆ ತೆಗಳಿಕೆ


ಅಣ್ಣ ಮುತ್ತುರಾಜ್‌ಗೆ ವಿದಾಯ

ಈ ವಾರದ ಸಂಚಿಕೆಯಲ್ಲಿ 'ಒಂದು ಸಾಂಸ್ಕೃತಿಕ ರೂಪಾಂತರ' ಎಂಬ ಶಿವಸುಂದರ್‌ರವರ ಬರಹವು ಮನ ಮುಟ್ಟುವಂತಿತ್ತು. ನಾಡಿನ ಕಲೆ, ಸಾಹಿತ್ಯ ನಾಟಕ, ಹಾಸ್ಯ ಅನುಕರಣೆ, ಸಾಂಸ್ಕೃತಿಕ ಬದುಕಿನ ಮೌಲ್ಯಗಳಿಂದ ಚಿತ್ರರಂಗಕ್ಕೆ ಕಾಲಿಟ್ಟ ಮುತ್ತುರಾಜ್ ಎಂಬ ಯುವಕ ಕನ್ನಡ ನಾಡಿನ ಕುವರನಾಗಿ, ಚಿತ್ರರಂಗದ ಭೀಷ್ಮನಾಗಿ ಕನ್ನಡದ ಕಂಠೀರವನಾಗಿ, ನಟ ಸಾರ್ವಭೌಮ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಡಾ. ರಾಜ್‌ಕುಮಾರ್ ಅವರ ಸಾವು ನಿಜಕ್ಕೂ ನಾಡಿನ ದುರಂತ. ಇಂಥ ಬಂಗಾರದ ಮನುಷ್ಯ ಕಲಾವಿದನಾಗಿ ಕನ್ನಡನಾಡಿನ ನೆಲಕ್ಕೆ, ಸಾಂಸ್ಕೃತಿಕ ಬದುಕಿಗೆ ಮತ್ತು ಚಿತ್ರರಂಗಕ್ಕೆ ಶಕ್ತಿ ತುಂಬಿದರು. ಅಂತಹ ಕನ್ನಡ ಕಣ್ಮಣಿಗೆ ನನ್ನ ಭಾವ ಪೂರಕ ಶ್ರದ್ಧಾಂಜಲಿ.

-ರಮಜಾನ ಕೆ. ಕೊರ್ತಿ, ಬಾದಾಮಿ

ಮಾನವನ ಎಲ್ಲ ಶಕ್ತಿ ಸಾಮರ್ಥ್ಯಗಳೂ, ಅಭಿರುಚಿಗಳೂ ಸಮರಸವಾಗಿ ಬೆಳೆಯುವಂತೆ ಮಾಡುವುದೇ ಶಿಕ್ಷಣ -ಫಿಂಡ್ಲೆ

'ಕುಮಾರರಾಮ' ಎಂಬ ಬೇವು-ಬೆಲ್ಲ



ಶಿವರಾಜ್‌ಕುಮಾರ್ ಪಾಲಿಗೆ 'ಕುಮಾರರಾಮ' ಚಿತ್ರ 'ಬೇವು-ಬೆಲ್ಲ'ದದಂತಾಗಿದೆ.

'ಕುಮಾರರಾಮ' ಚಿತ್ರದ ಪಾತ್ರ ದೊರೆತಾಗ "ಅಪ್ಪಾಜಿಯ ಕನಸನ್ನು ನನಸು ಮಾಡುವ ಸೌಭಾಗ್ಯ ಸಿಕ್ಕಿದೆ" ಎಂದು ಶಿವರಾಜ್‌ಕುಮಾರ್ ಸಂತೋಷ ಪಟ್ಟಿದ್ದರು. ಹುಣಸೂರು ಕೃಷ್ಣಮೂರ್ತಿಯವರು ಅಣ್ಣಾವ್ರಿಗಾಗಿ ಬರೆದ ಚಿತ್ರಕಥೆ ಶಿವರಾಜ್‌ಕುಮಾರ್‌ಗೆ ದೊರಕಿದಾಗ ಎಲ್ಲರಿಗೂ ಸಂತೋಷವಾಗಿತ್ತು.

ತಾನು ಮಾಡಲಾಗದ ಪಾತ್ರವನ್ನು ತನ್ನ ಮಗ ಮಾಡುವ ಬಗ್ಗೆ ಸ್ವತಃ ರಾಜ್‌ಕುಮಾರ್ ಸಂತೋಷ ವ್ಯಕ್ತಪಡಿಸಿದ್ದರು. 'ಕುಮಾರರಾಮ' ಚಿತ್ರದ ಬಗ್ಗೆ ಅಪಾರ ಆಸಕ್ತಿಯಿದ್ದ ವರದಪ್ಪಗೆ ಕೂಡಾ ಶಿವರಾಜ್‌ಕುಮಾರ್‌ಗೆ ಈ ಅವಕಾಶ ಸಿಕ್ಕಿದ ಬಗ್ಗೆ ಸಂತೋಷವಿತ್ತು.

ಆದರೆ ವಿಧಿಯ ಲೀಲೆಯೇ ಬೇರೆ.

'ಕುಮಾರರಾಮ' ಚಿತ್ರೀಕರಣದಲ್ಲಿದ್ದಾಗಲೇ ತಮ್ಮ ಅಪ್ಪನನ್ನು ಮತ್ತು ಚಿಕ್ಕಪ್ಪನನ್ನು ಶಿವರಾಜ್‌ಕುಮಾರ್ ಕಳೆದುಕೊಂಡಿದ್ದಾರೆ. ಈ ಮಧ್ಯೆ ಇದರ ಚಿತ್ರೀಕರಣದಿಂದಾಗಿಯೇ ಸುಸ್ತಾಗಿದ್ದ ಶಿವರಾಜ್‌ಕುಮಾರ್ ಒಮ್ಮೆ ಆಸ್ಪತ್ರೆಗೆ ದಾಖಲಾಗಿ ಹೊರಬಂದಿದ್ದಾರೆ.

ಈಗ 'ಕುಮಾರರಾಮ' ಮುಕ್ತಾಯದ ಹಂತ ತಲುಪಿದೆ. ತಮ್ಮ ತಂದೆಯ ಕನಸನ್ನು ನನಸು ಮಾಡಿದ ತೃಪ್ತಿ ಶಿವರಾಜ್‌ಕುಮಾರ್‌ಗೆ ಇದೆಯಾದರೂ, ಈ ಚಿತ್ರವನ್ನು ನೋಡಲು ಅವರಿಲ್ಲ ಎಂಬ ವ್ಯಥೆಯಂತೂ ಕಾಡುವುದು ಸಹಜ.

ಅಷ್ಟೇ ಅಲ್ಲ, 'ಕುಮಾರರಾಮ' ಚಿತ್ರಕ್ಕೂ ಅಣ್ಣಾವ್ರ ನಿಧನದಿಂದಾಗಿ ದೊಡ್ಡ ನಷ್ಟವಾಗಿದೆ. ಅದೇನೆಂದರೆ ಈ ಚಿತ್ರದಲ್ಲಿ ಶಿವಣ್ಣನವರ ಒಂದು ಪಾತ್ರಕ್ಕೆ ರಾಜ್‌ಕುಮಾರ್ ಅವರಿಂದ ಕಂಠದಾನ ಮಾಡಿಸುವ ಬಗ್ಗೆಯೂ, ಒಂದು ಹಾಡನ್ನು ಹಾಡಿಸುವ ಬಗ್ಗೆಯೂ ನಿರ್ದೇಶಕ ಭಾರ್ಗವ ನಿರ್ಧರಿಸಿದ್ದರು. ಹೀಗಂತ ಮೊನ್ನೆ ಹಂಪಿಯಲ್ಲಿ ಶಿವರಾಜ್‌ಕುಮಾರ್ ಸಮ್ಮುಖದಲ್ಲೇ ನಿರ್ದೇಶಕ ಭಾರ್ಗವ ಪತ್ರಕರ್ತರಿಗೆ ಹೇಳುತ್ತಿರುವಾಗಲೇ ಅಣ್ಣಾವ್ರ ನಿಧನದ ಸುದ್ದಿ ತಲುಪಿತು.

ಒಟ್ಟಾರೆಯಾಗಿ 'ಕುಮಾರರಾಮ' ಚಿತ್ರ ಹತ್ತು ಹಲವು ಆಘಾತಗಳ ನಡುವೆ ಕೊನೆಗೂ ಮುಕ್ತಾಯಗೊಳ್ಳುತ್ತಿದೆ.


ಮತ್ತೆ ತೆರೆಗೆ 'ನೀನಾ ಶಕುಂತಲಾ' ಹಾಡು

'ಪ್ರೇಮಲೋಕ' ಚಿತ್ರದ 'ನೀನಾ ಶಕುಂತಲಾ...' ಎಂಬ ಮೋಹಕ ಹಾಡು ಹೊಸ ಚಿತ್ರವೊಂದರಲ್ಲಿ ಸಂಪೂರ್ಣವಾಗಿ ಮತ್ತೆ ಮೂಡಿಬರಲಿದೆ.

ಈ ಸಾಹಸಕ್ಕೆ ಕೈ ಹಾಕಿದವರು ಚೊಚ್ಚಲ ನಿರ್ದೇಶನ ಮಾಡಲು ಹೊರಟಿರುವ ಸಂದೀಪ್ ಮಲಾನಿ. ಇವರು ನಿರ್ದೇಶನಕ್ಕೆ ಇಳಿದಿರುವುದರಿಂದ ಮತ್ತೊಬ್ಬ ಸಿನಿಮಾ ಪತ್ರಕರ್ತ ಬರವಣಿಗೆಯ ಮಾಧ್ಯಮದಿಂದ ದೃಶ್ಯ ಮಾಧ್ಯಮಕ್ಕೆ ಇಳಿದಂತಾಗಿದೆ. ಇವರ ಚಿತ್ರದ ಹೆಸರು -SMS 6160.

ರೀಮೇಕ್ ಚಿತ್ರಕ್ಕೆ ಕೈಹಾಕದೆ, ದೊಡ್ಡ ದೊಡ್ಡ ಸ್ಟಾರ್‌ಗಳನ್ನು ಹಾಕಿಕೊಳ್ಳದೇ ಚಿತ್ರ ಮಾಡಲು ಹೊರಟ ಮಲಾನಿ ಪ್ರಯತ್ನಕ್ಕೆ ಗುಡ್‌ಲಕ್. ಯಾಕೆಂದರೆ ಹೊಸ ನಟ-ನಟಿಯರು, ತಂತ್ರಜ್ಞರು, ಸಂಗೀತ ನಿರ್ದೇಶಕರನ್ನು ಹಾಕಿ ಸ್ವಮೇಕ್ ಮಾಡಲು ಹೊರಟಿದ್ದಾರೆಂದರೆ ಸುಲಭದ ವಿಷಯವಲ್ಲ.

ಬಾಗಲಕೋಟೆಯಲ್ಲಿ 'ಪಾಪು' ಬಿತ್ತಂತೆ!



ಪುಟ್ಟ 'ಪಾಪು' ಬಿದ್ದು ಗಾಯ ಮಾಡಿಕೊಂಡರೆ ಮನೆಯವರಿಗೆಲ್ಲ ಗಾಬರಿ ಆಗೋದು ಸಹಜ..... ಆದರೆ ಬಾಗಲಕೋಟೆಯಲ್ಲಿ ಐಶ್ವರ್ಯ ಎಂಬ ಒಂದು 'ಸಂಪದ್ಭರಿತ ಪಾಪು' ಸೈಕಲ್ ಮೇಲಿಂದ ಬಿದ್ದು ತರಚಿದ ಗಾಯವಾಯ್ತಂತೆ! ಅದೂ ಗಾಯವಾಗಿರುವುದು ಬೇರೆಲ್ಲೂ ಅಲ್ಲ, ಅವಳ ಎಡಗೈನ ಕಿರುಬೆರಳಿಗೆ!!

ಮರುದಿನ ನಮ್ಮ ಎಲ್ಲ ದಿನಪತ್ರಿಕೆಗಳಲ್ಲಿ ಅದು ಮುಖಪುಟ ಸುದ್ದಿ!!

'ಊಟ ಮಾಡುವಾಗ ಐಶೂ ನಾಲಿಗೆ ಕಚ್ಚಿಕೊಂಡಳಂತೆ' ಎಂಬ ಮುಖಪುಟ ಸುದ್ದಿ ಬರುವ ದಿನ ದೂರವಿಲ್ಲ.

ಮಣಿರತ್ನಂರ 'ಗುರು' ಚಿತ್ರಕ್ಕಾಗಿ 'ಬೇಲೂರ ಬಾಲೆ' ಐಶೂ ಬಾದಾಮಿ, ಐಹೊಳೆಗಳಲ್ಲಿ ವೈಯ್ಯಾರ ಮಾಡುತ್ತಿದ್ದಾಳೆ. ಬಾದಾಮಿಗೆ ಬರುವ ಪ್ರವಾಸಿಗಳ ಅಲ್ಲಲ್ಲ.... ವಿಲಾಸಿಗಳ ಸಂಖ್ಯೆ ಹೆಚ್ಚಿದೆಯಂತೆ.

ಸದ್ಯ ಈಗ ಬಾದಾಮಿಗೆ ಹೋಗುವ ಪ್ರವಾಸಿಗರಿಗೆಲ್ಲ ಉಚಿತವಾಗಿ ಐಶ್ವರ್ಯ ದರ್ಶನ ಪ್ರಾಪ್ತಿಯಾಗುತ್ತಿದೆ!



Saveಅಂತಿ, shaveಅಂತಿ

SS

ಸಂಪದ್ಭರಿತ ಜಾನಪದ ಹಾಡುಗಳ ಮಾನ ಹರಾಜು ಹಾಕಲು ಎಸ್. ನಾರಾಯಣ್ ಎಂಬ ಕೋಡಂಗಿ ರೆಡಿಯಾಗಿದೆ.

ಸಾಲು ಸಾಲು ತೋಪು ಚಿತ್ರಗಳ ವಿಜಯ್ ರಾಘವೇಂದ್ರ 'ಶ್ರೀ' (ಚೋರಿ ಚಿಕ್ಕಣ್ಣ!) ಸಿನಿಮಾದ ಕೂದಲುಗಳನ್ನು ಹಾಗೇ ಮುಂದುವರೆಸುವ ನಿರ್ಧಾರ ಮಾಡಿದಂತಿದೆ. ಈ ಚಿತ್ರ ಗೆದ್ದರೆ ವಿಜಯ್ ರಾಘವೇಂದ್ರನಿಗದು `Save ಅಂತಿ'.... ಸೋತರೆ `Shave ಅಂತಿ'....

ಎರಡನೇ ಸಾಧ್ಯತೆಯೇ ನಿಚ್ಚಳವಾಗಿದೆ.

ಶಾಟ್ ಕಟ್

ಜೆನ್ನಿಫರ್ ಲೋಪೆಜ್: ಕೆಂಡದುಂಡೆ ಭಾರತಕ್ಕೆ!



ಜೆನ್ನಿಫರ್ ಲೋಪೆಜ್ ಈಗ ಮಾಜಿ ಗಂಡನ ವಿರುದ್ಧ ಹೋಗುತ್ತಿದ್ದಾಳೆ. ಕೋರ್ಟಿಗೆ ಆಕೆಯ ಮಾಜಿ ಗಂಡ ಒಜನಿ ನೊಯಾ ಜೆನ್ನಿಯೊಂದಿಗಿನ ತನ್ನ ರಸಾನುಭವದ ಕ್ಷಣಗಳನ್ನು ವಿವರಿಸುವ ಪುಸ್ತಕ ಪ್ರಕಟಿಸುವ ಇರಾದೆಯಲ್ಲಿ ಹಲವಾರು ಪ್ರಕಾಶಕರಿಗೆ ಕೈಬರಹದ ಪ್ರತಿ ತಲುಪಿಸಿದ್ದೇ ಜೆನ್ನಿಗೆ ಕೋಪ ತಂದಿದೆ. ಬೆಡ್‌ರೂಮ್ ಚಟುವಟಿಕೆಗಳನ್ನು ಪ್ರಕಟಿಸಬಾರದೆಂದರೆ ಐದು ಮಿಲಿಯನ್ ಡಾಲರ್ ಹಣ ಕೊಡು ಎಂದು ಆತ ಜೆನ್ನಿಯನ್ನು ಬ್ಲ್ಯಾಕ್‌ಮೇಲ್ ಮಾಡಿದ್ದಕ್ಕೆ ಜೆನ್ನಿ ಸೀದಾ ಕೋರ್ಟ್‌ಗೆ ಹೋಗುತ್ತಿದ್ದಾಳೆ. ಮಾಜಿ ಗಂಡ ಅದೇನು ಬರೆದಿರುವನೋ ಗೊತ್ತಿಲ್ಲ... but(t).... ಅದರಲ್ಲಿ ಬಿಸಿ ಬಿಸಿ ಇರುವುದಂತೂ ಸತ್ಯ! ಅಂದಂತೆ ತನ್ನ ಹೊಸ ಆಲ್ಬಮ್ `Rebirth' ಪ್ರಚಾರಕ್ಕೆಂದು ಈ ತಿಂಗಳು ಮುಂಬೈಗೆ ಹಾರಿಬರಲಿದ್ದಾಳೆ ಈ ಜೆನ್ನಿಫರ್ ಎಂಬ ಕೆಂಡದುಂಡೆ!


'ಊರ್ಮಿ' ಮುಳುಗೇ ಬಿಟ್ಟಿದ್ಲು!!



'ಬನಾರೆಸ್' ಚಿತ್ರಕ್ಕಾಗಿ ಗಂಗಾ ನದಿಯಲ್ಲಿ 'ಬಾಬ್ಬಿ ಬ್ಯೂಟಿ' ಡಿಂಪಲ್ ಕಪಾಡಿಯಾ ಜೊತೆ 'ಯಾಹಿರೆ ಯಾಹಿರೆ' ಚೋಟಿ ಊರ್ಮಿಳಾ ಮಾತಂಡ್ಕರ್ ಈಜುವ ದೃಶ್ಯದ ಚಿತ್ರೀಕರಣ ನಡೆಯುತ್ತಿತ್ತು. 'ಬಾಬ್ಬಿ' ಸುಮ್ಮನೆ ಒಂದು ರೌಂಡ್ ಹಾಕಿ ಬಂದಳು... ನಂತರ 'ಬಾಬ್ಬಿ' ಡಿಂಪಲ್, ಊರ್ಮಿ ಇಬ್ಬರೂ ಸೇರಿ ನೀರಿಗೆ ಹಾರಿದರು. ಕ್ಯಾಮರಾ ಎಲ್ಲವನ್ನೂ ಸೆರೆಹಿಡಿಯುತ್ತಿತ್ತು. ಸ್ವಲ್ಪ ಹೊತ್ತಿಗೆ ಊರ್ಮಿ ನಾಪತ್ತೆ... ನದಿ ಮಧ್ಯದಲ್ಲಿ 'ಅಬುಕ್ ಅಬುಕ್' ಎಂದು ಮುಳುಗತೊಡಗಿದ್ದಳು ಊರ್ಮಿ... ಸೆಟ್‌ನಲ್ಲಿದ್ದ ಗಂಡಸರೆಲ್ಲ ಗಾಬರಿಯಾಗಿ ನಿಂತಿದ್ದಾಗ, ಆಂಟಿ ಡಿಂಪಲ್ ಊರ್ಮಿ ಪುಟ್ಟಿಗೆ ಧೈರ್ಯ ಹೇಳುತ್ತಾ, ಅವಳನ್ನು ನದಿಯಿಂದ ಹೊರತಂದಳಂತೆ...

'ನನಗೆ ಈಜು ಬರಲ್ಲ...ಡಿಂಪಲ್ ಜೊತೆ ಈಜುವ ಖುಷಿಯಲ್ಲಿ ನದಿಗೆ ಹಾರಿಬಿಟ್ಟೆ' ಎಂದಿದೆ ಈ ಬಣ್ಣದ ಚಿಟ್ಟೆ.

ದಿಕ್ಕಿಲ್ಲದ ಮಾತು, ಛೇ!



ರಾಜ್ ನಿಧನರಾದಾಗ ಕನ್ನಡದ ಪ್ರಮುಖ ಪತ್ರಿಕೆಯೊಂದು ಮುಖಪುಟದಲ್ಲಿ ದೊಡ್ಡದಾಗಿ "ಅಮೆರಿಕಕ್ಕೆ ಅಬ್ರಹಾಂ ಲಿಂಕನ್ ಇದ್ದಂತೆ, ಕ್ಯೂಬಾಕ್ಕೆ ಚೆಗೆವೆರಾ ಇದ್ದಂತೆ, ಕರ್ನಾಟಕಕ್ಕೆ ಡಾ. ರಾಜ್ ಇದ್ದರು" ಎಂದು ಏನೇನೋ ಬರೆಯುವ ಮೂಲಕ ರಾಜ್‌ರನ್ನು ಬಹಿರಂಗವಾಗಿ ಅವಮಾನಿಸಿತ್ತು.

ಹಾಗೆಯೇ ತಾಳ ತಪ್ಪಿದವರಂತೆ ಮಾತಾಡಿದ ಹಂಸಲೇಖಾ "ಕರ್ನಾಟಕಕ್ಕೆ ಕುವೆಂಪು ಒಂದನೇ ದಿಕ್ಕು, ವಿಶ್ವೇಶ್ವರಯ್ಯ ಎರಡನೇ ದಿಕ್ಕಾದರೆ ಡಾ. ರಾಜ್ ಮೂರನೇ ದಿಕ್ಕು" ಎಂದು ಪಿಟೀಲು ಕುಯ್ಯುತ್ತಾ ನಾಲ್ಕನೇ ದಿಕ್ಕಿನಲ್ಲಿದ್ದ ಟಿ.ವಿ. ಕ್ಯಾಮರಾವನ್ನೇ ನೋಡುತ್ತಾ ನಿಂತಿದ್ದು ಹಾಸ್ಯಾಸ್ಪದವಾಗಿತ್ತು.

ಫೈನಲ್ ವನ್: ಆಯಿನಾ ಬೇಬಿ ಇನ್....




'ಶಾಟ್‌ಕಟ್'ನ ಮೊದಲ ಶಾಟ್‌ನಲ್ಲಿ ಸೆರೆಸಿಕ್ಕಿದ್ದ ಲಿಯಾಂಡರ್ ಪಯಾಸ್, ರಿಯಾ ಪಿಳ್ಳೆಗಳು 'ಲವ್ ಆಲ್' ಮ್ಯಾಚ್‌ನ ಫೈನಲ್ ತಲುಪಿದ್ದರ ಕುರಿತು ಬರೆದಿದ್ದೆವು. ಈಗ ಫೈನಲ್‌ನಲ್ಲಿ ಗೆಲುವಿನ ನಗೆ ಬೀರಿದೆ ಈ ಮಿಕ್ಸ್‌ಡ್ ಡಬಲ್ ಜೋಡಿ! ಮಹಿಮಾ ಚೌಧರಿಯ ಮಾಜಿ ಲವರ್ ಲಿಯಾಂಡರ್ ಪಯಾಸ್ ಹಾಗೂ ಸಂಜಯ್‌ದತ್‌ನ ಮಾಜಿ ಪತ್ನಿ ರಿಯಾಪಿಳ್ಳೆಗಳ `Art of living' ಗೆ ಸಾಕ್ಷಿ ಎಂಬಂತೆ 'ಆಯಿನಾ' ಎಂಬ ಪುಟ್ಟ ಹೆಣ್ಣುಮಗು ಪಿಳಿಪಿಳಿ ಕಣ್ಣುಬಿಡುತ್ತಿದೆ...

ಫೈನಲ್ ವನ್, ಆಯಿನಾ ಬೇಬಿ ಇನ್!

R.B.P. LANKESH, Kannada Weekly   Price Rs. 10/-   3-5-2006   RNI No. KARKAN2005/14648   Regd.No.KA/BG(S)/2036/2005-07

ರಾಜ್‌ಗೆ ಚಿತ್ರರಂಗದ ಶ್ರದ್ಧಾಂಜಲಿ



ರಾಜ್ ಕುಮಾರ್‌ರವರಿಗೆ ಕನ್ನಡ ಚಿತ್ರರಂಗದ ಹಲವರು ವಿಭಿನ್ನ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಲು ಹೊರಟ್ಟಿದ್ದಾರೆ. ಅವರುಗಳಲ್ಲಿ 'ಅನಿಕೇತನದ' ಐ.ಎಂ. ವಿಠಲಮೂರ್ತಿ ಪ್ರಮುಖರು. ನಾಡಿದ್ದು (ಏಪ್ರಿಲ್ 24) ಅಣ್ಣಾವ್ರ ಹುಟ್ಟುಹಬ್ಬದ ದಿನವಂದು ಅವರ ಹಾಡುಗಳನ್ನು ಹಾಡುವ ಕಾರ್ಯಕ್ರಮದ ಜೊತೆಗೆ ಬೆಳಗ್ಗೆಯಿಂದ ಸಾಯಂಕಾಲದ ತನಕ ಕರ್ನಾಟಕದ ಪ್ರಸಿದ್ಧ ಕಲಾವಿದರು ತಮ್ಮ ಕುಂಚದಿಂದ ಅಣ್ಣಾವ್ರ ಚಿತ್ರ ಬಿಡಿಸಲಿದ್ದಾರೆ. ಎಸ್.ಜಿ. ವಾಸುದೇವ್, ಚಿ.ಸು. ಕೃಷ್ಣ ಶೆಟ್ಟಿ, ಗುರುದಾಸ್ ಶೆಣೈ ರಂತಹ ಹಿರಿಯರಿಂದ ಹಿಡಿದು ಸುಮಾರು 32 ಜನ ಕಲಾವಿದರು ಅಂದು ಅಣ್ಣಾವ್ರಿಗೆ ತಮ್ಮ ಕುಂಚದ ಮೂಲಕ ಶ್ರದ್ಧಾಂಜಲಿ ಅರ್ಪಿಸಲಿದ್ದಾರೆ. ಈ ಎಲ್ಲಾ ಕಲಾಕೃತಿಗಳನ್ನು ಭವಿಷ್ಯದಲ್ಲಿ ರಾಜ್‌ಕುಮಾರ್ ಮ್ಯೂಸಿಯಂಗೆ ನೀಡುವ ಇಚ್ಛೆ ವಿಠ್ಠಲಮೂರ್ತಿಯವರದ್ದು.

ಇನ್ನೊಂದು ವಿಶೇಷವೆಂದರೆ ಅಂದಿನ ಗೀತೆಗಳ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ರಾಜ್ ಅವರ ಒಂದು ಕಾಲದ ಆತ್ಮ ಪಿ.ಬಿ. ಶ್ರೀನಿವಾಸ್ ಉದ್ಘಾಟಿಸಲಿದ್ದಾರೆ.

* * * * *

ಅಣ್ಣಾವ್ರ ಭಾವಚಿತ್ರಕ್ಕೆ ಕಲಾವಿದರೆಲ್ಲಾ ಹೂವು ಅರ್ಪಿಸುವ ದೃಶ್ಯವನ್ನು ಮೊನ್ನೆ 'SMS 6260' ಚಿತ್ರದ ಮುಹೂರ್ತಕ್ಕೆ ನಿರ್ದೇಶಕ ಸಂದೀಪ್ ಮಲಾನಿ ಚಿತ್ರೀಕರಿಸಿದರು.

ಅಣ್ಣಾವ್ರ ನಿಧನದ ನಂತರ ಸೆಟ್ಟೇರಿದ ಮೊದಲ ಕನ್ನಡ ಚಿತ್ರವಿದು. ಆ ಕಾರಣಕ್ಕೆ ಆ ಹಿರಿಯ ಆತ್ಮಕ್ಕೆ ನಮನ ಸಲ್ಲಿಸಿ ಚಿತ್ರವನ್ನು ಪ್ರಾರಂಭಿಸಿದರು. ಹೀಗೆ ಅಣ್ಣಾವ್ರ ಮೇಲೆ ಮೊದಲನೆ ಶಾಟ್ ತೆಗೆಯುವ ಮೂಲಕ 'SMS 6260' ಚಿತ್ರದ ತಂಡ ಡಾ. ರಾಜ್‌ಗೆ ಶ್ರದ್ಧಾಂಜಲಿ ಅರ್ಪಿಸಿತು.

* * * * *

ಈ ಮಧ್ಯೆ ಕನ್ನಡ ಚಿತ್ರರಂಗದ ಕುಳ್ಳ ದ್ವಾರಕೀಶ್ ಕೂಡ ತಮ್ಮದೇ ಆದ ಶೈಲಿಯಲ್ಲಿ ಡಾ. ರಾಜ್‌ಗೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ. ಅದೇನೆಂದರೆ ಇನ್ನು ಮುಂದೆ ಡಾ. ರಾಜ್ ತರಹ ದ್ವಾರಕೀಶ್ ಕೂಡ ಪಂಚೆ ಮತ್ತು ಬಿಳಿ ಶರ್ಟ್ ಧರಿಸಿ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಾರಂತೆ. ಅಷ್ಟೇ ಅಲ್ಲ, ಈಗಾಗಲೇ ಅವರು ಅನೇಕ ಕಡೆ ಹಾಗೆ ಬಟ್ಟೆ ಧರಿಸಿ ಓಡಾಡುತ್ತಿದ್ದಾರೆ.

"ಅವರ ತರಹ ಯೋಗ ಮಾಡಲು, ಹಾಡಲು ಈ ವಯಸ್ಸಿನಲ್ಲಿ ನನ್ನಿಂದ ಸಾಧ್ಯವಿಲ್ಲ, ನನಗೆ 'ಮೇಯರ್ ಮುತ್ತಣ್ಣ' ಚಿತ್ರ ಮಾಡಲು ಅವರು ಕಾಲ್‌ಶೀಟ್ ನೀಡಿರದಿದ್ದರೆ ನಾನು ನಿರ್ಮಾಪಕ ಆಗುತ್ತಿರಲಿಲ್ಲ, 24 ನೆಯ ವಯಸ್ಸಿನಲ್ಲೇ ನನ್ನನ್ನು ನಿರ್ಮಾಪಕ ಮಾಡಿದ ಕೀರ್ತಿ ಅವರಿಗೇ ಸಲ್ಲುತ್ತದೆ. ಅದನ್ನು ನಾನು ಮರೆಯಲು ಸಾಧ್ಯವೇ ಇಲ್ಲ" ಎಂದು ಮರುಗುತ್ತಾರೆ ದ್ವಾರಕೀಶ್. 'ಮೇಯರ್ ಮುತ್ತಣ್ಣ' ನಂತರ ದ್ವಾರಕೀಶ್ ನಿರ್ಮಿಸಿದ 'ಭಾಗ್ಯವಂತರು' ಚಿತ್ರದಲ್ಲೂ ಡಾ. ರಾಜ್ ನಾಯಕನಾಗಿ ನಟಿಸಿದ್ದರು.

* * * * *

ಎಸ್. ನಾರಾಯಣ್ ನಿರ್ದೇಶನದ 'ಸೇವಂತಿ ಸೇವಂತಿ' ಈ ವಾರ ಬಿಡುಗಡೆಯಾಗುವುದಿಲ್ಲ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಎಲ್ಲರೂ ಆಶ್ಚರ್ಯ ಪಡುವ ರೀತಿಯಲ್ಲಿ 'ಸೇವಂತಿ ಸೇವಂತಿ' ಮೊನ್ನೆ ಗುರುವಾರವೇ ತೆರೆಕಂಡಿತು. ಅಂದರೆ ಡಾ. ರಾಜ್ ನಿಧನ ಹೊಂದಿದ ಒಂಭತ್ತನೇ ದಿನಕ್ಕೆ ಚಿತ್ರ ಬಿಡುಗಡೆಯಾಗಿದೆ. ಇದನ್ನು ನೋಡಿ ಗಾಂಧಿನಗರ ಹುಬ್ಬೇರಿಸಿದ್ದಕ್ಕೆ ಕಾರಣವೂ ಇದೆ.

ಅದೇನೆಂದರೆ, ಈ ಚಿತ್ರದ ನಿರ್ಮಾಪಕರು ಬೇರೆ ಯಾರೂ ಅಲ್ಲ, ಪಾರ್ವತಮ್ಮ ರಾಜ್‌ಕುಮಾರ್ ಅವರ ಸಹೋದರ ಚನ್ನೇಗೌಡ. ಅವರ ಮಗ ವಿಜಯ ರಾಘವೇಂದ್ರ ಈ ಚಿತ್ರದ ನಾಯಕ. ಡಾ. ರಾಜ್ ನಿಧನದಿಂದ ನಾಡಿಗೆ ನಾಡೇ ಶೋಕ ಆಚರಿಸುತ್ತಿರುವಾಗ ಅವರ ಮನೆಯವರು ತಮ್ಮ ಚಿತ್ರದ ಬಿಡುಗಡೆಯನ್ನು ಕನಿಷ್ಠ ಒಂದು ವಾರವಾದರೂ ಮುಂದೆ ಹಾಕುತ್ತಾರೆ ಎಂದು ಗಾಂಧಿನಗರದವರು ಭಾವಿಸಿದ್ದರು.

ಅಷ್ಟೇ ಅಲ್ಲ, ಇಂತಹದ್ದೇ ಅವಸರವನ್ನು ತೋರಿದ ರಾಜ್ ಅವರ ಮತ್ತೊಬ್ಬ ಬಂಧು ಎಂದರೆ ಮಧು ಬಂಗಾರಪ್ಪ. ರಾಜ್ ನಿಧನ ಹೊಂದಿದ ಎರಡೇ ದಿನಕ್ಕೆ ಅವರ ಚೊಚ್ಚಲ ನಿರ್ಮಾಣದ 'ಕಲ್ಲರಳಿ ಹೂವಾಗಿ' ಸಿನಿಮಾದ ಚಿತ್ರೀಕರಣವನ್ನು ಶುರು ಮಾಡಿಬಿಟ್ಟರು. ಇತ್ತೀಚೆಗೆ ರಾಜ್ ಸಂಸ್ಥೆಗೆ 'ಚಿಗುರಿದ ಕನಸು' ಸಿನಿಮಾವನ್ನು ನಿರ್ದೇಶಿಸಿದ್ದ ನಾಗಾಭರಣ ಈ ಚಿತ್ರದ ನಿರ್ದೇಶಕ.

ಈ ಕಲಾವಿದರ ಬದುಕೇ ಹೀಗೆ. ಮನಸ್ಸಿನಲ್ಲಿ ನೋವು ಅಡಗಿದ್ದರೂ, ಜನರನ್ನು ರಂಜಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲೇಬೇಕು. ಇದಕ್ಕೇ ಹೇಳುವುದು 'ದಿ ಶೋ ಮಸ್ಟ್ ಗೋ ಆನ್....' ಅಂತ.

ಡಾ. ರಾಜ್ ನಟಿಸಿದ ಕೊನೆ ಚಿತ್ರ ಯಾವುದು ಅಂತ ಕೇಳಿದರೆ, ಎಲ್ಲರೂ 'ಶಬ್ದವೇದಿ' ಎಂದು ಉತ್ತರಿಸುತ್ತಾರೆ. ಆದರೆ ವಾಸ್ತವವಾಗಿ ಮೊನ್ನೆ ಶಿವರಾಜ್ ಕುಮಾರ್ ನಟಿಸಿದ್ದ 'ಜೋಗಿ' ಚಿತ್ರದ ಆರಂಭದಲ್ಲಿ ರಾಜ್‌ಕುಮಾರ್ ದಂಪತಿಗಳು ಶಿವಣ್ಣನಿಗೆ ಭಿಕ್ಷೆ ಹಾಕುವ ದೃಶ್ಯವೊಂದರಲ್ಲಿ ಕಾಣಿಸಿಕೊಂಡಿದ್ದರು. ಆ ಚಿತ್ರಕ್ಕೂ ಈ ದೃಶ್ಯಕ್ಕೂ ಸಂಬಂಧವೇ ಇರಲಿಲ್ಲ.

ಆದರೆ ಈಗ ಆ ದೃಶ್ಯವನ್ನೇ ಅಭಿಮಾನಿಗಳು ಇನ್ನೊಂದು ರೀತಿಯಲ್ಲಿ ನೋಡುತ್ತಿದ್ದಾರೆ. "ಆ ದೃಶ್ಯದಲ್ಲಿ ಅಣ್ಣಾವ್ರು ಪರೋಕ್ಷವಾಗಿ ತಮ್ಮಲ್ಲಿ ಇದ್ದುದನ್ನು ಶಿವಣ್ಣನಿಗೆ ಧಾರೆ ಎರೆದು ಕೊಟ್ಟದ್ದು" ಎಂದು ಈಗ ವಿಶ್ಲೇಷಿಸುತ್ತಿದ್ದಾರೆ.

ಹಾಗೆಯೇ ರಾಜ್‌ರವರ ಸಮಾಧಿಯನ್ನು ಅವರ ಕರ್ಮಭೂಮಿಯಾದ ಕಂಠೀರವ ಸ್ಟುಡಿಯೋದಲ್ಲೇ ಮುಖ್ಯಮಂತ್ರಿಗಳು ಆಗಬೇಕೆಂದು ಹೇಳಿದ್ದರ ಬಗ್ಗೆಯೂ ಇಂದು ವಿಶೇಷ ಅರ್ಥ ಕಲ್ಪಿಸುತ್ತಿದ್ದಾರೆ.

(ರಾಜ್)³: ಕನ್ನಡ ವೈಭವ!



ಇದು ಡಬಲ್ ಇಂಪ್ಯಾಕ್ಟ್ ಅಲ್ಲ.... ಟ್ರಿಪಲ್ ಟ್ರಯಲ್!

ಶಿವರಾಜ್, ಪುನೀತ್ ಒಟ್ಟಾಗಿ ನಟಿಸಲಿದ್ದಾರೆ ಎಂದು ಇತ್ತೀಚೆಗೆ 'ಲಂಕೇಶ್' ಬರೆದಿತ್ತು. ಅದೀಗ ನಿಜವಾಗುತ್ತಿದೆ. ಶಿವಣ್ಣ-ಪುನೀತ್ ಜೋಡಿಯ 'ಭರತೇಶ ವೈಭವ' ಎಂಬ ಐತಿಹಾಸಿಕ ಚಿತ್ರ ಸದ್ಯದಲ್ಲೇ ರಾಜ್ ನೆನಪಿನಲ್ಲಿ ಸೆಟ್ಟೇರಲಿದೆ. ಅದನ್ನು ನಿರ್ದೇಶಿಸುತ್ತಿರುವುದು ಯಾರು ಗೊತ್ತೆ? ಶಿವಣ್ಣ ಮತ್ತು ರಾಘವೇಂದ್ರ ರಾಜ್‌ಕುಮಾರ್!

ಡಾ. ರಾಜ್ ಬಿಟ್ಟು ಹೋದ ಮೌಲ್ಯಗಳನ್ನು ಮುಂದುವರೆಸಿಕೊಂಡು ಹೋಗಲು ನಿರ್ಧರಿಸಿರುವ ರಾಜ್ ಕುಟುಂಬ ಇಂತಹ ಒಂದು ಉತ್ತಮ ಅಭಿರುಚಿಯ ಚಿತ್ರಕ್ಕೆ ಕೈ ಹಾಕಿರುವುದು ಸಂತಸದ ಸಂಗತಿ. ಅಣ್ಣ-ತಮ್ಮಂದಿರ ತ್ಯಾಗದ ಕತೆಯಿರುವ ಈ ಚಿತ್ರವನ್ನು ಪಟ್ಟಾಭಿರಾಮನ್ ಅದ್ಧೂರಿಯಾಗಿಯೇ ನಿರ್ಮಿಸಲು ಮುಂದಾಗಿದ್ದಾರೆ.

ಶಿವು, ಪುನೀತ್ ಜೋಡಿಗಾಗಿ ಹಲವಾರು ನಿರ್ಮಾಪಕರು ಪ್ರಯತ್ನಿಸಿ ವಿಫಲರಾಗಿದ್ದರು. ಶಿವು-ಪುನೀತ್ ಅಭಿನಯ, ಶಿವು-ರಾಘು ನಿರ್ದೇಶನ.... 'ಕುಮಾರ ರಾಮ' ಎಂಬ ಶಿವಣ್ಣನ ಐತಿಹಾಸಿಕ ಚಿತ್ರದ ನಂತರ ಮತ್ತೊಂದು ಕೊಡುಗೆ- 'ಭರತೇಶ ವೈಭವ'....

ಆತ್ಮದೊಂದಿಗಿನ ಮಾತುಕತೆ!



"ದೈವದೊಂದಿಗೆ ಮಾತುಕತೆ ಅಲ್ಲ, ಆತ್ಮದೊಂದಿಗೆ ಮಾತುಕತೆ...." ಹೀಗೆಂದು ಪ್ರಕಾಶ್ ರೈ ಭಾವುಕರಾಗಿ ಹೈದ್ರಾಬಾದ್‌ನಿಂದ ಫೋನ್ ಮಾಡಿ ಮೊನ್ನೆ ಹೇಳಿದರು.

ವಿಷಯವಿಷ್ಟೇ..... ಅವರ ಚೊಚ್ಚಲ ನಿರ್ದೇಶನದ ಚಿತ್ರದಲ್ಲಿ ಅವರ ಮಗನ ಸಾವಿನ ನಂತರದ ಘಟನೆಗಳನ್ನೇ ಕಥೆಯಾಗಿಸಿದ್ದಾರೆ. ಆದರೆ ಆ ಚಿತ್ರದಲ್ಲಿ ಅವರು ದೈವದೊಂದಿಗೆ ಮಾತನಾಡುತ್ತಾರೆ ಎಂದು ಒಂದೆರಡು ವಾರದ ಹಿಂದೆ ಬರೆದಿದ್ದವು.

ಮಗನ ಸಾವಿನ ಬಗ್ಗೆ ಮಾತಾಡುವಾಗ ಈಗಲೂ ಭಾವುಕರಾಗುವ ರೈ ಅದಕ್ಕೆ ಸ್ಪಷ್ಟೀಕರಣ ನೀಡುತ್ತಾ "ದೈವದೊಂದಿಗೆ ಮಾತುಕತೆ ಅಲ್ಲ; ಆತ್ಮದೊಂದಿಗೆ ಮಾತುಕತೆ" ಅಂದರು.

ದೈವ ಮತ್ತು ಆತ್ಮದ ನಡುವೆ ಅಜಗಜಾಂತರ ವ್ಯತ್ಯಾಸ ಇದೆ. ದಯವಿಟ್ಟು ಓದುಗರು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮಿಂದ ಆದ ಅಚಾತುರ್ಯಕ್ಕೆ ವಿಷಾದಿಸುತ್ತಾ ನಮ್ಮ ಬಳಗದವರೇ ಆದ ಪ್ರಕಾಶ್‌ಗೆ ನಮ್ಮ ಧನ್ಯವಾದಗಳು.



PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44